ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕರುನಾಡಿನ ಸಾಧಕರಿಗೆ ಟಿಬಿಲಿಸಿಯಲ್ಲಿ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ

ವಿಶ್ವವಾಣಿ ಗ್ಲೋಬಲ್ ಫೋರಂ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಕರುನಾಡಿನ 17 ಸಾಧಕರಿಗೆ ಜಾರ್ಜಿಯಾದ ಟಿಬಿಲಿಸಿಯಲ್ಲಿ 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಹೊಸೂರು-ಬೈಲಹೊಂಗಲ ಶ್ರೀ ಸ್ವಪ್ರಭು ನೀಲಕಂಠ ಮಹಾಸ್ವಾಮೀಜಿ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಜಾರ್ಜಿಯಾದ ಖ್ಯಾತ ಲೇಖಕ ಜಾರ್ಜ್ ಕೆಕೆಲಿಡ್ಜ್, ನಟ ನಿಕೋಲಾಜ್ ಸುಲುಕಿಜ್ ಹಾಗೂ ಕಲ್ಚರಲ್ ಡೈವರ್ಸಿಟಿ ಆಫ್ ಪೀಸ್‌ಫುಲ್ ಫ್ಯೂಚರ್ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ದರ್ಪಣ್ ಪರಾಶರ್ ಸೇರಿದಂತೆ ಹಲವರ ಸಮ್ಮುಖದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸೊಂಪಾದ ಪುಟಗಳು

ಪಾಕಿಸ್ತಾನದ ಭ್ರಷ್ಟ ಪ್ರಧಾನ ಮಂತ್ರಿಗಳು
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
6

ಛೇ! ನೀವು ಒಮ್ಮೆಯಾದರೂ ಭಾರತದ ಪರ ನಿಲ್ಲಬೇಕಿತ್ತು...!
ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್
7

ದಾರಿದೀಪೋಕ್ತಿ

ನೀವು ಎಷ್ಟು ದೊಡ್ಡ ಹಾಗೂ ವಿಶಾಲ ಮನಸ್ಸನ್ನು ಬೆಳೆಸಿಕೊಳ್ಳಬೇಕೆಂದರೆ, ನಿಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುವಷ್ಟು, ಆ ತಪ್ಪುಗಳಿಂದ ಪಾಠ ಕಲಿಯುವಷ್ಟು, ಆ ತಪ್ಪುಗಳನ್ನು ಇನ್ನೊಮ್ಮೆ ಮಾಡದಷ್ಟು ಮತ್ತು ಅವುಗಳನ್ನು ಸರಿಪಡಿಸಿಕೊಳ್ಳುವಷ್ಟು. ಅದು ನಿಮ್ಮ ಗೆಲುವಾಗಬಹುದು.

ವಕ್ರತುಂಡೋಕ್ತಿ

ಟೈಟ್ ಜೀನ್ಸ್ ಧರಿಸುವುದರ ಒಂದು ಮುಖ್ಯ ಸಮಸ್ಯೆ ಅಂದ್ರೆ, ಅದನ್ನು ಹಿಡಿದು ಎಳೆಯಲು ಇನ್ನೊಬ್ಬರ ಸಹಾಯ ಬಯಸುವುದು.

ನಟಿ ರನ್ಯಾ ರಾವ್ ನಂಟು ಪ್ರಕರಣದಲ್ಲಿ ಗೃಹ ಸಚಿವರಿಗೆ ನೋಟಿಸ್ ಸಂಭವ

ನ್ಯಾಷನಲ್ ಹೆರಾಲ್ಡ್ ಪತ್ರಿಕೆ ದೇಣಿಗೆ ಪ್ರಕರಣದಲ್ಲಿ ಡಿಕೆ ಸಹೋದರರ ಹೆಸರು

ಡಿಕೆಶಿ, ಪರಂಗೆ ಇಡಿ ಸಂಕಷ್ಟ

ಬೆಂಗಳೂರು: ನಟಿ ರನ್ಯಾ ರಾವ್ ಪ್ರಕರಣದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ ಹೆಸರು ಕೇಳಿಬಂದ ಬೆನ್ನಲ್ಲೇ, ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ದೇಣಿಗೆ ನೀಡಿರುವ ವಿಚಾರಕ್ಕೆ ಡಿಕೆ ಸಹೋದರರ ಹೆಸರು ಕೇಳಿಬಂದಿದ್ದು, ಇದೀಗ ರಾಜ್ಯದ ಇಬ್ಬರು ಪ್ರಭಾವಿ ಸಚಿವರಿಗೆ ಇಡಿ ಸಂಕಷ್ಟ ಎದುರಾಗಿದೆ.

- ಯಂಗ್ ಇಂಡಿಯಾಕ್ಕೆ ದೇಣಿಗೆ ನೀಡಿರುವ ಆರೋಪ
- ಹೆಚ್ಚುವರಿ ಚಾರ್ಜ್ ಶೀಟ್‌ನಲ್ಲಿ ಡಿಕೆ ಸಹೋದರರ ಹೆಸರು
- ದೇಣಿಗೆ ನೀಡಿರುವುದನ್ನು ಸಮರ್ಥಿಸಿಕೊಂಡ ಡಿ.ಕೆ.ಶಿವಕುಮಾರ್

ಕಾಂಗ್ರೆಸ್ ವರಿಷ್ಠರಾದ ಸೋನಿಯಾ ಹಾಗೂ ರಾಹುಲ್ ಗಾಂಧಿ ಅವರಿಗೆ ಉರುಳಾಗಿರುವ ನ್ಯಾಷನಲ್ ಹೆರಾಲ್ಡ್ ಪ್ರಕರಣ ಇದೀಗ ಡಿಕೆ ಸಹೋದರರಿಗೆ ಹಾಗೂ ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಅವರ ತನಕ ಬಂದಿದ್ದು, ಇಡಿ ಸಲ್ಲಿಸಿರುವ ಹೆಚ್ಚುವರಿ ಚಾರ್ಜ್‌ಶೀಟ್‌ನಲ್ಲಿ ಈ ಮೂವರ ಹೆಸರನ್ನು ಸೇರಿಸಿರುವುದು ರಾಜ್ಯ ರಾಜಕೀಯದಲ್ಲಿ ಹೊಸ ಸಂಚಲನ ಸೃಷ್ಟಿಸಿದೆ.

ಕೆಲ ದಿನಗಳ ಹಿಂದೆ ರಾಹುಲ್ ಹಾಗೂ ಸೋನಿಯಾ ಗಾಂಧಿ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸುವ ಜತೆಜತೆಗೆ ಯಂಗ್ ಇಂಡಿಯಾ ಟ್ರಸ್ಟ್ ಮೂಲಕ 162 ಕೋಟಿ ರು. ಬಳಸಿಕೊಂಡಿದ್ದಾರೆ ಎನ್ನುವ ಹೆಚ್ಚುವರಿ ಆರೋಪಪಟ್ಟಿಯನ್ನು ಸಲ್ಲಿಸಲಾಗಿತ್ತು. ಆದರೀಗ, ಇದೇ ಪ್ರಕರಣದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸಹೋದರ ಡಿ.ಕೆ.ಸುರೇಶ್ ಹಾಗೂ ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಅವರ ಹೆಸರನ್ನು ಸೇರಿಸಿರುವುದು ಕುತೂಹಲಕ್ಕೆ ಕಾರಣವಾಗಿದೆ. → 8

ಏನಿದು ಪ್ರಕರಣ?

ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ಹೆಸರಿನಲ್ಲಿ ನಡೆದ ಅವ್ಯವಹಾರ ಸಂಬಂಧ 2010ರಲ್ಲಿ ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ನೀಡಿದ ಕ್ರಿಮಿನಲ್ ದೂರು ಆಧರಿಸಿ ಕೇಸ್ ದಾಖಲಾಗಿತ್ತು. 1938ರಲ್ಲಿ ಜವಾಹರಲಾಲ್ ನೆಹರೂ ಹುಟ್ಟುಹಾಕಿದ್ದ ನ್ಯಾಷನಲ್ ಹೆರಾಲ್ಡ್ ಪತ್ರಿಕೆಯನ್ನು ಅಸೋಷಿಯೇಟೆಡ್ ಜರ್ನಲ್ಸ್ ಲಿ (ಎಜೆಎಲ್) ಸಂಸ್ಥೆ ಮುದ್ರಿಸುತ್ತಿತ್ತು. ಆಗ ಐದು ಸಾವಿರ ಸ್ವಾತಂತ್ರ್ಯ ಹೋರಾಟಗಾರರು ಈ ಎಜೆಎಲ್‌ನ ಷೇರುದಾರರಾಗಿದ್ದರು. ಆಗ ಕಂಪನಿ ಯಾವುದೇ ಒಬ್ಬ ವ್ಯಕ್ತಿಯ ಒಡೆತನದಲ್ಲಿ ಇರಲಿಲ್ಲ. ಆರ್ಥಿಕ ಪರಿಸ್ಥಿತಿಯಿಂದ ಈ ಪತ್ರಿಕೆಯ ಮುದ್ರಣ ನಿಲ್ಲಿಸಲಾಗಿತ್ತು.

ಶೈಕ್ಷಣಿಕ ಟ್ರಸ್ಟ್‌ಹಣ ದುರ್ಬಳಕೆ: ಪರಂಗೆ ನೋಟಿಸ್?

ಬೆಂಗಳೂರು: ಡಾ.ಜಿ.ಪರಮೇಶ್ವರ ಒಡೆತನದ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಮೇಲೆ ಇಡಿ ದಾಳಿಯ ಬೆನ್ನಲ್ಲೇ, ಇದೀಗ ನೋಟಿಸ್ ಜಾರಿಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ. ಟ್ರಸ್ಟ್‌ನಿಂದ ರನ್ಯಾ ರಾವ್ ಕ್ರೆಡಿಟ್ ಕಾರ್ಡ್ ಬಿಲ್ ಪಾವತಿಯಾಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಇಡಿ ಅಧಿಕಾರಿಗಳು ಸಂಸ್ಥೆಯ ವಿವಿಧ ಕಚೇರಿಗಳ ಮೇಲೆ ದಾಳಿ ನಡೆಸಿ ಹಲವು ದಾಖಲೆಗಳನ್ನು ವಶಕ್ಕೆ ಪಡೆದಿದ್ದರು. ಇದೀಗ ಇದೇ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಪರಮೇಶ್ವರ ಅವರಿಗೆ ನೋಟಿಸ್ ನೀಡುವ ಸಾಧ್ಯತೆಯಿದೆ. ರನ್ಯಾ ಪ್ರಕರಣ ದೆಹಲಿಯ ಇಡಿ ಪ್ರಧಾನ ಕಚೇರಿಗೆ ವರ್ಗಾವಣೆಯಾಗುವ ಸಾಧ್ಯತೆಯಿದ್ದು, ಆರೋಪಿಗಳೊಂದಿಗಿನ ಹಣಕಾಸು ವಹಿವಾಟುಗಳ ಕುರಿತು ವಿಚಾರಣೆಗಾಗಿ ಹಾಜರಾಗುವಂತೆ ಪರಮೇಶ್ವರ ಅವರಿಗೆ ಶೀಘ್ರದಲ್ಲಿ ಸಮನ್ಸ್ ನೀಡುವ ಸಾಧ್ಯತೆಯಿದೆ ಎನ್ನಲಾಗಿದೆ. → 8

ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳ

ಆಂಧ್ರಪ್ರದೇಶದಲ್ಲಿ ಮಾಸ್ಕ್ ಕಡ್ಡಾಯ

ದೆಹಲಿ: ಕೋವಿಡ್ ಪ್ರಕರಣಗಳು ಏರಿಕೆ ಆಗುತ್ತಿದ್ದಂತೆ ಆಂಧ್ರಪ್ರದೇಶ ಸರಕಾರ ಮಾಸ್ಕ್ ಧರಿಸುವುದನ್ನು ಕಡ್ಡಾಯ ಮಾಡಿದೆ. ಜನರ ಗುಂಪು, ಸಭೆ ಸಮಾರಂಭಗಳಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಆರೋಗ್ಯ ಸಚಿವಾಲಯ ಮಾರ್ಗಸೂಚಿ ಪ್ರಕಟಿಸಿದೆ.

ದೇಶದಲ್ಲಿ ಈಗ ನಿಧಾನಗತಿಯಲ್ಲಿ ಕೋವಿಡ್ ಪ್ರಕರಣಗಳು ಏರಿಕೆ ಕಾಣುತ್ತಿದೆ. ಆಂಧ್ರ ಪ್ರದೇಶದಲ್ಲಿ ಗುರುವಾರ ಒಂದೇ ದಿನ 19 ಪಾಸಿಟಿವ್ ಕೇಸ್ ದಾಖಲಾಗಿವೆ. ಗುಜರಾತ್‌ನಲ್ಲೂ 15 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. ಕೇರಳ ರಾಜ್ಯವೊಂದರಲ್ಲೇ 186 ಕೇಸ್ ಇದ್ದು, 95 ಸಕ್ರಿಯ ಪ್ರಕರಣಗಳು ಇವೆ. ರಾಜ್ಯದಲ್ಲಿ 33 ಕೇಸ್ ದಾಖಲಾಗಿದ್ದು ಈ ಪೈಕಿ 16 ಸಕ್ರಿಯ ಪ್ರಕರಣಗಳಾಗಿವೆ. ದೇಶಾದ್ಯಂತ ಒಟ್ಟು 557 ಪ್ರಕರಣಗಳು ದಾಖಲಾಗಿವೆ.

ಬೆಂಗ್ಳೂರಲ್ಲೇ 32 ಪ್ರಕರಣ

ರಾಜ್ಯದಲ್ಲಿ ಕೋವಿಡ್ ಕೇಸ್‌ಗಳ ಸಂಖ್ಯೆ 35ಕ್ಕೆ ಏರಿಕೆಯಾಗಿದೆ. ಈ ಪೈಕಿ ಬೆಂಗಳೂರಿನಲ್ಲೇ 32 ಸಕ್ರಿಯ ಪ್ರಕರಣಗಳು ದಾಖಲಾಗಿವೆ. ವಾಣಿ ವಿಲಾಸ ಆಸ್ಪತ್ರೆಯಲ್ಲಿ 9 ತಿಂಗಳ ಮಗುವಿಗೆ ಕರೋನಾ ಕಾಣಿಸಿಕೊಂಡಿರುವುದು ಆತಂಕ ಮೂಡಿಸಿದೆ. ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಮಾರ್ಗಸೂಚಿ ಕ್ರಮಗಳನ್ನು ಬಿಡುಗಡೆಗೊಳಿಸಿದೆ.

51,000 ಅತಿಥಿ ಶಿಕ್ಷಕರ ನೇಮಕ

ಬೆಂಗಳೂರು: ಶಿಕ್ಷಕರ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ 2025-26ನೇ ಶೈಕ್ಷಣಿಕ ಸಾಲಿನಲ್ಲಿ 51 ಸಾವಿರ ಅತಿಥಿ ಶಿಕ್ಷಕರನ್ನು ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ನೇಮಿಸಲು ಆದೇಶ ಹೊರಡಿಸಿದೆ. ಮೇ 29ರಿಂದ ಶಾಲೆಗಳು ಪುನರಾರಂಭವಾಗಲಿರುವ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳು ನಿರಂತರವಾಗಿ ಹಾಗೂ ಸಮಯಕ್ಕೆ ಸರಿಯಾಗಿ ಆರಂಭವಾಗಲಿ ಎಂಬ ಉದ್ದೇಶ ಈ ತಾತ್ಕಾಲಿಕ ನೇಮಕಕ್ಕೆ ಅನುಮತಿ ನೀಡಲಾಗಿದೆ. 51,000 ಅತಿಥಿ ಶಿಕ್ಷಕರ ಪೈಕಿ 40,000 ಸರಕಾರಿ ಪ್ರಾಥಮಿಕ ಶಾಲೆಗಳಿಗೆ ಹಾಗೂ ಉಳಿದ 11,000 ಸರಕಾರಿ ಪ್ರೌಢ ಶಾಲೆಗಳಿಗೆ ನೇಮಿಸಿ ಆದೇಶಿಸಿದೆ. ಈ ತ್ವರಿತ ನಿರ್ಧಾರ ಶೈಕ್ಷಣಿಕ ಕೊರತೆಯನ್ನು ಪೂರೈಸಲು ಅಗತ್ಯ ಎಂದು ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.

ಸಿಇಟಿ ಫಲಿತಾಂಶ ಇಂದು ಪ್ರಕಟ

ಬೆಂಗಳೂರು: ಎಂಜನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಕಳೆದ ತಿಂಗಳಲ್ಲಿ ನಡೆಸಿದ ಸಿಇಟಿ ಪರೀಕ್ಷೆಯ ಫಲಿತಾಂಶ ಶನಿವಾರ ಪ್ರಕಟವಾಗಲಿದೆ. ಪರೀಕ್ಷೆ ಫಲಿತಾಂಶವನ್ನು ಅಭ್ಯರ್ಥಿಗಳು ಮಧ್ಯಾಹ್ನ 2 ಗಂಟೆಯ ಬಳಿಕ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕೃತ ವೆಬ್‌ಸೈಟ್ ಸೇರಿದಂತೆ ಹಲವು ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ. ಯಾವೆಲ್ಲ ವೆಬ್‌ಸೈಟ್‌ನಲ್ಲಿ ಫಲಿತಾಂಶ ಲಭ್ಯ

1) https://t.co/TLplrLc0qv
2) https://t.co/7q9hak7Y9z
3) https://x.com/CMofKarnataka
4) https://x.com/drmcsudhakar
5) https://x.com/KEA‰karnataka

ಡ್ರೋನ್ ದಾಳಿ: ಕನಿಮೋಳಿ ನಿಯೋಗ ಪಾರು

ಮಾಸ್ಕೊ: ರಷ್ಯಾದ ಮಾಸ್ಕೊ ನಗರದ ಮೇಲೆ ನಡೆದ ಡ್ರೋನ್ ದಾಳಿಯಿಂದಾಗಿ ಡಿಎಂಕೆ ನಾಯಕಿ ಕನಿಮೋಳಿ ನೇತೃತ್ವದ ಭಾರತೀಯ ಸಂಸದರ ನಿಯೋಗವನ್ನು ಕರೆದೊಯ್ಯುತ್ತಿದ್ದ ವಿಮಾನವು ಸ್ವಲ್ಪ ಸಮಯದವರೆಗೆ ಆಕಾಶದಲ್ಲೇ ಸುತ್ತಾಡಬೇಕಾಯಿತು. ಎಂದು ವರದಿಯಾಗಿದೆ. ಪಾಕಿಸ್ತಾನದ ಭಯೋತ್ಪಾದನೆ ಚಟುವಟಿಕೆ, ಆಪರೇಷನ್ ಸಿಂದೂರ ಕುರಿತು ವಿವಿಧ ರಾಷ್ಟ್ರಗಳಿಗೆ ಮಾಹಿತಿ ನೀಡಲು ಕನಿಮೋಳಿ ನೇತೃತ್ವದ ನಿಯೋಗವು ರಷ್ಯಾಕ್ಕೆ ಪ್ರಯಾಣ ಬೆಳೆಸಿತ್ತು. ಈ ವೇಳೆ ಮಾಸ್ಕೊ ನಗರವನ್ನು ಗುರಿಯಾಗಿಸಿ ಉಕ್ರೇನ್ ಡ್ರೋನ್ ದಾಳಿ ನಡೆಸಿದೆ.

ಮೊಹಮ್ಮದ್ ಯೂನಸ್ ರಾಜೀನಾಮೆ?

ಢಾಕಾ: ಬಾಂಗ್ಲಾದೇಶದ ಮಧ್ಯಂತರ ಸರಕಾರದ ಮುಖ್ಯಸ್ಥ ಮುಹಮ್ಮದ್ ಯೂನಸ್ ರಾಜೀನಾಮೆ ನೀಡುವ ವಿಚಾರ ಮುನ್ನೆಲೆಗೆ ಬಂದಿದೆ. ರಾಜಕೀಯ ಪಕ್ಷಗಳು ಒಮ್ಮತಕ್ಕೆ ಬರಲು ವಿಫಲವಾದ ಕಾರಣ ಯೂನಸ್ ಅವರು ರಾಜೀನಾಮೆ ನೀಡುವ ಬಗ್ಗೆ ಚಿಂತನೆ ನಡೆಸಿದ್ದಾರೆ ಎಂದು ನ್ಯಾಷನಲ್ ಸಿಟಿಜನ್ ಪಾರ್ಟಿ ಸಂಚಾಲಕ ನಹಿದ್ ಇಸ್ಲಾಂ ತಿಳಿಸಿದ್ದಾರೆ.

ಪಾಕಿಸ್ತಾನದಲ್ಲಿ ಮೂವರು ಟಿಟಿಪಿ ಉಗ್ರರ ಹತ್ಯೆ

ದೆಹಲಿ: ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಶುಕ್ರವಾರ ನಿಷೇಧಿತ ತೆಹ್ರೀಕ್-ಇ-ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ಉಗ್ರಗಾಮಿ ಗುಂಪಿನ ಮೂವರು ಭಯೋತ್ಪಾದಕರು ಹತರಾಗಿದ್ದಾರೆ. ಅವರ ಆರು ಸಹಚರರು ತಪ್ಪಿಸಿಕೊಂಡಿದ್ದಾರೆ. ಭಯೋತ್ಪಾದಕರ ಬಳಿಯಿಂದ ಎರಡು ರೈಫಲ್‌ಗಳು ಮತ್ತು ಹಲವಾರು ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪಾಕಿಸ್ತಾನದ ಪಂಜಾಬ್ ಭಯೋತ್ಪಾದನಾ ನಿಗ್ರಹ ಇಲಾಖೆ ಹೇಳಿಕೆ ತಿಳಿಸಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ನಟಿಗೆ ಮದುವೆಯಲ್ಲಿ 25 ಲಕ್ಷದ ಉಡುಗೊರೆ ಕೊಟ್ಟಿದ್ದಾರೆ ಗೃಹಸಚಿವರು – ಡಿಸಿಎಂ

ಸುದ್ದಿ



ಶಾಶ್ವತವಾಗಿ ಅಧಿಕಾರದಲ್ಲಿ ಇರುತ್ತಾರಾ?: ಎಚ್‌ಡಿಕೆ ಕೆಂಡ

ಹೆಸರು ಬದಲಾವಣೆ ರಿಯಲ್ ಎಸ್ಟೇಟ್ ಕಾರ್ಯತಂತ್ರದ ಭಾಗ

ದೆಹಲಿ: ರಾಮನಗರ ಹೆಸರನ್ನು ಕಿತ್ತುಹಾಕಿ ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡಿರುವ ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತೀವ್ರ ವಾಗ್ದಾಳಿ ನಡೆಸಿದರು.

ದೆಹಲಿಯ ತಮ್ಮ ಅಧಿಕೃತ ನಿವಾಸದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಮನಗರ ಹೆಸರನ್ನು ತೆಗೆದುಹಾಕಿ ಬೆಂಗಳೂರು ದಕ್ಷಿಣ ಎಂದು ಹೆಸರು ಇಟ್ಟುಕೊಂಡಿರುವುದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ತಮ್ಮ ಭೂಮಿಗಳ ಬೆಳೆಯನ್ನು ಏರಿಸುವ ಷಡ್ಯಂತ್ರದ ಭಾಗವಾಗಿದೆ. ಇವರೇನು ಶಾಶ್ವತವಾಗಿ ಅಧಿಕಾರದಲ್ಲಿ ಇರುತ್ತಾರೆಯೇ? ಮುಂದೆ ಪರಿಸ್ಥಿತಿ ಬದಲಾಗಲಿದೆ. ಆಗ ಇವರು ಇಟ್ಟಿರುವ ಹೆಸರೂ ಬದಲಾಗಲಿದೆ ಎಂದು ಎಚ್ಚರಿಕೆ ನೀಡಿದರು.

2007ರಲ್ಲಿ ನಾನು ತೀರ್ಮಾನ ಮಾಡುವಾಗ ಆಗ ವಿರೋಧ ಮಾಡಬಹುದಾಗಿತ್ತು, ಆಗ ಮಾಡಲಿಲ್ಲ. ಈ ರಾಜ್ಯಕ್ಕೆ ಮೂವರು ಮುಖ್ಯಮಂತ್ರಿಗಳನ್ನು ರಾಮನಗರ ಕೊಟ್ಟಿದೆ. ಇಡೀ ಜಗತ್ತೇ ನಿಬ್ಬೆರಗಾಗುವ ವಿಧಾನಸೌಧವನ್ನು ಕೆಂಗಲ್ ಹನುಮಂತಯ್ಯ ಅವರು ಕಟ್ಟಿಸಿದ್ದರು. ನೆಹರು ಅವರಿಗೆ ಸಡ್ಡು ಹೊಡೆದು ರಾಜಕೀಯ ಮಾಡಿದ್ದರು. ಅಂತಹ ಮಹನೀಯರ ಹೆಸರನ್ನಾದರೂ ಜಿಲ್ಲೆಗೆ ಇಡಬಹುದಿತ್ತು. ಅವರ ಹೆಸರು ಇಟ್ಟಿದ್ದಿದ್ದರೆ ನಾನು ಅಭಿನಂದಿಸುತ್ತಿದ್ದೆ. ಕೆಂಗಲ್ ಅವರ ಹೆಸರಿಟ್ಟರೆ ಇವರ ಭೂಮಿಗಳಿಗೆ ಬೆಲೆ ಬರುವುದಿಲ್ಲವಲ್ಲ? ಎಂದು ಟೀಕಿಸಿದರು.

ಅವರು ಏತಕ್ಕಾಗಿ ಜಿಲ್ಲೆಯ ಹೆಸರು ಬದಲಿಸಿದ್ದಾರೆ? ಅದರ ಹಿಂದಿನ ದುರುದ್ದೇಶ ಏನಿದೆ? ಎಂಬುದು ಗೊತ್ತಿದೆ. ಇದರ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಯಾವಾಗ ಅದಕ್ಕೆ ತಿರುಗಿಸಿ ಉತ್ತರ ಕೊಡಬೇಕೋ ಆಗ ಕೊಡುತ್ತೇನೆ. ಇಂತಹ ರಾಜಕಾರಣಕ್ಕೆ ನಾನು ಸೊಪ್ಪು ಹಾಕುವುದಿಲ್ಲ ಎಂದರು.

ಇವರು ನನ್ನ ವಿರುದ್ಧ ಕಿರುಕುಳ, ಕುತಂತ್ರ ಮಾಡುತ್ತಿದ್ದಾರೆ. ಹೀಗೆಯೇ ಅವರು ಮಾಡುತ್ತಿರಲಿ, ಇವರು ಲೂಟಿ ಹೊಡೆದಿರುವ ಶೇ.50ರಷ್ಟು ಸರಕಾರಿ ಭೂಮಿಗಳಿವೆ. ಇವರು ಏನೆಲ್ಲಾ ಅನ್ಯಾಯ, ಅಕ್ರಮ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿದೆ. ಶಾಂತಿನಗರದ ದಲಿತರ ಜಾಗ ನುಂಗಿದ್ದು ಯಾರು? ಮೀಸಲಾತಿ ಅಂತ ಹೊರಟಿದ್ದೀರಿ. ಮೀಸಲಾತಿ ಕೊಟ್ಟು ಏನ್ ಮಾಡುತ್ತೀರಿ? ನಿಮ್ಮಿಂದ ಉದ್ಯೋಗ ಕೊಡಲು ಆಗುತ್ತಿಲ್ಲ. ಎರಡು ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಬಿದ್ದಿವೆ. ಎಷ್ಟು ವರ್ಷವಾಯಿತು ಖಾಲಿ ಹುದ್ದೆ ತುಂಬಿ? ಮೀಸಲಾತಿಯಿಂದ ರಾಜಕಾರಣ ಮಾಡಲು ಸಾಧ್ಯವಿಲ್ಲ.

– ಎಚ್.ಡಿ.ಕುಮಾರಸ್ವಾಮಿ
ಕೇಂದ್ರ ಸಚಿವ

ಕುಮಾರಸ್ವಾಮಿ ಹೆಸರು ಬದಲಾವಣೆ ಮಾಡಿಕೊಳ್ಳಲಿ



ವಿಜಯಪುರ: ಕುಮಾರಸ್ವಾಮಿ ರಾಜಕೀಯ ಮಾಡಲು ರಾಮನಗರಕ್ಕೆ ಏಕೆ ಬಂದರು? ಹಾಸನದಲ್ಲಿಯೇ ಏಕೆ ರಾಜಕೀಯ ಮಾಡಲಿಲ್ಲ? ಮೊದಲು ಎಚ್.ಡಿ.ಕುಮಾರಸ್ವಾಮಿ ಎನ್ನುವ ಹೆಸರಿನಲ್ಲಿರುವ ಅವರ ಊರಿನ ಹೆಸರು ಹಾಗೂ ತಂದೆಯ ಹೆಸರನ್ನು ಏಕೆ ಇನ್ನೂ ಇಟ್ಟುಕೊಂಡಿದ್ದಾರೆ. ಮೊದಲು ಅದನ್ನು ಬದಲಾವಣೆ ಮಾಡಿಕೊಳ್ಳಲಿ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಕಿಡಿಕಾರಿದರು. ವಿಜಯಪುರ ಜಿಲ್ಲೆಯ ಕೊಲ್ಹಾರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ನಾವು ಬೆಂಗಳೂರು ಜಿಲ್ಲೆಯವರು. ಒಂದೊಂದು ಊರಿನ ಹೆಸರಿಗೆ ತನ್ನದೇ ಆದ ಇತಿಹಾಸವಿರುತ್ತದೆ. ಮದ್ರಾಸ್ ಅನ್ನು ಮತ್ತೆ ಏಕೆ ಚೆನ್ನೈ ಎಂದು ಕರೆದರು. ಗುಲ್ಬರ್ಗಾವನ್ನು ಕಲಬುರ್ಗಿ ಎಂದು ಮರುನಾಮಕರಣ ಮಾಡಲಾಗಿದೆ. ನಮಗೂ ನಮ್ಮದೇ ಆದಂತಹ ಆಸೆ ಇರುತ್ತದೆ. ಅವರಿಗೆ ಏನು ತೊಂದರೆಯಾಗಿದೆ? ಎಂದು ಪ್ರಶ್ನಿಸಿದರು.

ಮೋದಿಯವರಿಂದ ವರ್ಷಾಂತ್ಯಕ್ಕೆ ಅಡಿಗಲ್ಲು

2 ತಿಂಗಳಲ್ಲಿ ಡಿಪಿಆರ್ | 8-10 ಸಾವಿರ ಕೋಟಿ ರು. ಹೂಡಿಕೆ

ವಿಐಎಸ್‌ಎಲ್ ಪುನಶ್ಚೇತನಕ್ಕೆ ಅಸ್ತು

ಬೆಂಗಳೂರು: ಭದ್ರಾವತಿಯ ಸರ್.ಎಂ.ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು ಪುನಶ್ಚೇತನ ಗೊಳಿಸುವ ಪ್ರಯತ್ನ ನಡೆಯುತ್ತಿದ್ದು, ವಿಸ್ತ್ರುತ ಯೋಜನಾ ವರದಿ (ಡಿಪಿಆರ್) ಎರಡು ತಿಂಗಳಲ್ಲಿ ಸಿದ್ಧವಾಗಲಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದ ಅಭಿವೃದ್ಧಿ ವಿಷಯದಲ್ಲಿ ರಾಜಕೀಯ ಮಾಡುವ ಪ್ರಶ್ನೆಯೇ ಇಲ್ಲ . ಕಾರ್ಖಾನೆಯನ್ನು ಈ ವರ್ಷಾಂತ್ಯಕ್ಕೆ ಪುನಶ್ಚೇತನ ಯೋಜನೆ ಕಾರ್ಯರೂಪಕ್ಕೆ ತರಲಾಗು ವುದು. ಕಾರ್ಖಾನೆಯನ್ನು ಹೊಸದಾಗಿ ಅತ್ಯಾಧುನಿಕವಾಗಿ ನಿರ್ಮಾಣ ಮಾಡಲಾಗುವುದು. ಪ್ರಧಾನಿ ನರೇಂದ್ರ ಮೋದಿ ಅವರೇ ಈ ಯೋಜನೆಗೆ ಅಡಿಗಲ್ಲು ಹಾಕಲಿದ್ದಾರೆ ಎಂದರು.

ಕಾರ್ಖಾನೆಯನ್ನು ಹೊಸದಾಗಿ ಮರು ನಿರ್ಮಾಣ ಮಾಡಬೇಕಿದೆ. ಇದಕ್ಕಾಗಿ 8ರಿಂದ 10 ಸಾವಿರ ಕೋಟಿ ರು. ಹೂಡಿಕೆ ಮಾಡುವ ಬಗ್ಗೆ ಚಿಂತನೆ ನಡೆದಿದೆ. ಈಗಾಗಲೇ ಆ ಕಾರ್ಖಾನೆ ಭಾರತೀಯ ಉಕ್ಕು ಪ್ರಾಧಿಕಾರದ ಅಧೀನದಲ್ಲಿದೆ. ಮುಂದಿನ ದಿನಗಳಲ್ಲಿ ರಾಷ್ಟ್ರದಲ್ಲಿ ಉಕ್ಕು ಕ್ಷೇತ್ರದಲ್ಲಿ ಪ್ರಾಧಿಕಾರ ಒಂದು ಲಕ್ಷ ಕೋಟಿ ಮೊತ್ತ ಹೂಡಿಕೆ ಮಾಡಲಿದೆ. ಅದೇ ಸಂದರ್ಭದಲ್ಲಿ ವಿಐಎಸ್‌ಎಲ್ ಕಾರ್ಖಾನೆ ಕೂಡ ಪುನಶ್ಚೇತನಗೊಳಿಸಲಾಗುವುದು ಎಂದರು. ಪ್ರಧಾನಿ ನರೇಂದ್ರ ಮೋದಿ ಅವರು 2030ರ ಹೊತ್ತಿಗೆ ದೇಶೀಯವಾಗಿ ವಾರ್ಷಿಕ 300 ದಶಲಕ್ಷ ಟನ್ ಸ್ಟೀಲ್ ಉತ್ಪಾದನೆ ಗುರಿ ನಿಗದಿ ಮಾಡಿದ್ದು, ಅದಕ್ಕೆ ಪೂರಕವಾಗಿ ಸರಕಾರಿ ಸ್ವಾಮ್ಯದಲ್ಲಿರುವ ಉಕ್ಕು ಸ್ಥಾವರಗಳನ್ನು ಬಲಪಡಿಸುವ ಕೆಲಸವನ್ನು ಕೇಂದ್ರ ಸರಕಾರ ಮಾಡುತ್ತಿದೆ ಎಂದರು.

ರಾಜ್ಯಕ್ಕೆ 4,500 ಎಲೆಕ್ಟ್ರಿಕ್ ಬಸ್

ಪ್ರಧಾನಿ ನರೇಂದ್ರ ಮೋದಿ ಅವರ ಒತ್ತಾಸೆಯಂತೆಯೇ ಕರ್ನಾಟಕಕ್ಕೆ 4,500 ಎಲೆಕ್ಟ್ರಿಕ್ ಬಸ್ ನೀಡಲು ನಿರ್ಧರಿಸಲಾಗಿದೆ. ಕರ್ನಾಟಕದ ಮಟ್ಟಿಗೆ ದೊಡ್ಡ ತೀರ್ಮಾನ ಮಾಡಿದ್ದೇವೆ. ಪಿಎಂ ಇ-ಡ್ರೈವ್ ಯೋಜನೆ ಅಡಿ ಬಸ್‌ಗಳನ್ನು ನೀಡುತ್ತಿದ್ದೇವೆ. 2030ರ ವೇಳೆಗೆ ಭೂಸಾರಿಗೆ ಮಾಲಿನ್ಯ ಶೂನ್ಯಮಟ್ಟಕ್ಕೆ ಇಳಿಸಬೇಕು ಎನ್ನುವ ಉದ್ದೇಶ ಪ್ರಧಾನಿಗಳು ಹೊಂದಿದ್ದಾರೆ. ಅವರ ಕನಸು ಸಾಕಾರಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ತೋಟಗಾರಿಕೆ ಮಿಷನ್ ಅರ್ಜಿ ಆಹ್ವಾನ

ಶಿರಾ: ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗಳಿಗೆ ಶಿರಾ ತಾಲೂಕು ತೋಟಗಾರಿಕೆ ಇಲಾಖೆಯ ವತಿಯಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಹಿರಿಯ ಸಹಾಯಕ ನಿರ್ದೇಶಕ ಸುಧಾಕರ್ ತಿಳಿಸಿದ್ದಾರೆ. ಬಾಳೆ, ಮಾವು, ಪಪ್ಪಾಯ ಹಾಗೂ ದಾಳಿಂಬೆ ಹಣ್ಣಿನ ಬೆಳೆಗಳ ಹೊಸ ಪ್ರದೇಶ ವಿಸ್ತರಣೆ; ಡ್ರ್ಯಾಗನ್, ಬೆಣ್ಣೆಹಣ್ಣು, ಹಲಸು, ಹುಣಸೆ ಹಣ್ಣಿನಂತಹ ಅಪ್ರಧಾನ ಹಣ್ಣಿನ ಬೆಳೆ ಹಾಗೂ ಸುಗಂದರಾಜ, ಚೆಂಡುಹೂವು, ಸೇವಂತಿಗೆ ಹೂವಿನ ಬೆಳೆಗಳ ಹೊಸ ಪ್ರದೇಶ ವಿಸ್ತರಣೆ, ಪ್ಯಾಕ್‌ಹೌಸ್, ಪ್ರಾಥಮಿಕ ಸಂಸ್ಕರಣಾ ಘಟಕ, ಕಡಿಮೆ ವೆಚ್ಚದ ಈರುಳ್ಳಿ ಶೇಖರಣಾ ಘಟಕ; ಮಿನಿಟ್ರಾಕ್ಟರ್, ಪವರ್ ಟಿಲ್ಲರ್, ಟ್ರಾಕ್ಟರ್ ಆಪರೇಟೆಡ್ ಸ್ಪ್ರೇಯರ್‌ಗಳಿಗೆ ಸಹಾಯಧನ ಸೌಲಭ್ಯಗಳಿಗೆ ಶೇ.25 ರಿಂದ 50ರಷ್ಟು ಸಹಾಯಧನ ನೀಡಲಾಗುವುದು.ಆಸಕ್ತ ರೈತರು ದಾಖಲಾತಿಗಳ ಸಮೇತ ಜೂನ್ 5ರೊಳಗಾಗಿ ಶಿರಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ ಅಥವಾ ಹತ್ತಿರದ ಗ್ರಾಮ ಪಂಚಾಯಿತಿ ಕಚೇರಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ: 9164871157 ಸಂಪರ್ಕಿಸುವಂತೆ ತಿಳಿಸಿದ್ದಾರೆ.

ಸಿದ್ಧಾರ್ಥ ಕಾಲೇಜು ಪದವಿ ಪ್ರದಾನ ಇಂದು

ತುಮಕೂರು: ನಗರದ ಸಮೀಪದ ಕ್ಯಾತಸಂದ್ರದ ಸಿದ್ಧಾರ್ಥ ಸ್ಕೂಲ್ ಆಫ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬೆಳಿಗ್ಗೆ 11ಕ್ಕೆ ಪದವಿ ಪ್ರದಾನ ಸಮಾರಂಭ ಏರ್ಪಟ್ಟಿದೆ. ಗೃಹ ಸಚಿವ ಡಾ.ಜಿ.ಪರಮೇಶ್ವರ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಧಾರವಾಡದ ಐಐಟಿಯ ನಿರ್ದೇಶಕರಾದ ಪ್ರೊ. ಎಸ್.ಆರ್ ಮಹಾದೇವ ಪ್ರಸನ್ನ, ವಿಟಿಯು ಉಪಕುಲಪತಿಗಳಾದ ಡಾ ಎಸ್ ವಿದ್ಯಾಶಂಕರ್ , ಸಾಹೇ ವಿವಿ ಉಪಕುಲಪತಿ ಡಾ. ಕೆ.ಬಿ ಲಿಂಗೇಗೌಡ, ಪ್ರಾಂಶುಪಾಲರಾದ ಡಾ. ಎಲ್. ಸಂಜೀವ್ ಕುಮಾರ್ ಹಾಜರಿರುವರು. ಇದೇ ವೇಳೆ ಸ್ಪೇಸ್ ಲ್ಯಾಬ್ ತ್ರಿಲಕ್ಷಣ ಪ್ರಯೋಗಾಲಯವನ್ನು ಬೆಳಗ್ಗೆ 10ಕ್ಕೆ ಸಾಹೇ ವಿವಿ ಕುಲಾಧಿಪತಿ ಉದ್ಘಾಟಿಸಲಿದ್ದಾರೆ.ಅತಿಥಿಯಾಗಿ ಇಸ್ರೋದ ಮಾಜಿ ಕಾರ್ಯದರ್ಶಿ ಡಾ.ಎ.ಎಸ್.ಪಿಜಿ.ದಿವಾಕರ್, ಡಾ.ವಿವೇಕ್ ವೀರಯ್ಯ, ವಿಜ್ಞಾನ ಲೇಖಕ ಡಾ.ಎ.ಎಸ್.ಹುಲಿಕಲ್ ನಟರಾಜ್ ಉಪಸ್ಥಿತರಿರುವರು.

ವಿರಾಮ
ಪ್ರತಿ ಭಾನುವಾರ

ಚಿಕ್ಕಬಳ್ಳಾಪುರ ತಾಲೂಕಿನ 20 ಗ್ರಾಗಳಲ್ಲಿ ಕೂಸಿನ ಮನೆ: ಸಿಇಒ

ನರೇಗಾ ಕಾಮಗಾರಿ ವೀಕ್ಷಣೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ತಿಪ್ಪೇನಹಳ್ಳಿ ಪಂಚಾಯಿತಿ ವ್ಯಾಪ್ತಿಯ ನರೇಗಾ ಕಾರ್ಮಿಕರಿಗಾಗಿ ನಿರ್ಮಿಸಿರುವ ಕೂಸಿನ ಮನೆಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪ್ರಕಾಶ್ ಜಿ.ಟಿ ನಿಟ್ಟಾಲಿ ರವರು ಭೇಟಿ ನೀಡಿ ಪರಿಶೀಲನೆ ಮಾಡಿದರು.

ಈ ವೇಳೆ ಅವರು ಮಾತನಾಡಿ, ಮಕ್ಕಳ ಬೆಳವಣಿಗೆಗೆ ಪೂರಕವಾದ ವಾತಾವರಣ ಈ ಕೂಸಿನ ಮನೆಯಲ್ಲಿ ನಿರ್ಮಾಣವಾಗಲಿ. 6 ತಿಂಗಳಿಂದ 3 ವರ್ಷದ ಒಳಗಿನ ಮಕ್ಕಳ ಲಾಲನೆ ಪಾಲನೆಯನ್ನು ಬಹಳ ಎಚ್ಚರಿಕೆಯಿಂದ ಮಾಡಬೇಕು ಮತ್ತು ಶುಚಿ ರುಚಿಯಾದ ಉಪಹಾರವನ್ನು ನೀಡಬೇಕು ಎಂದು ಕೂಸಿನ ಮನೆಯ ಆರೈಕೆದಾರರಿಗೆ ಸೂಚನೆಗಳನ್ನು ನೀಡಿದರು.

ಚಿಕ್ಕಬಳ್ಳಾಪುರ ತಾಲೂಕಿನ 20 ಗ್ರಾಮ ಪಂಚಾಯಿತಿಗಳಲ್ಲಿ ಕೂಸಿನ ಮನೆಯನ್ನು ನಿರ್ಮಿಸಿಲಾಗಿದ್ದು, ಮಕ್ಕಳು ದಾಖಲಾಗದ ಕಾರಣ ಕೆಲವು ಕೂಸಿನ ಮನೆಗಳು ತೆರೆಯಲಾಗಿಲ್ಲ ಆದರೆ ತಿಪ್ಪೇನಹಳ್ಳಿ ಗ್ರಾಮ ಪಂಚಾಯಿತಿಯ ಕೂಸಿನ ಮನೆಯು ಪ್ರಾರಂಭದಿಂದಲ್ಲೂ ಮಕ್ಕಳ ದಾಖಲಾತಿ ಚೆನ್ನಾಗಿದ್ದು, ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಶ್ಲಾಘಿಸಿದರು.

ನಂತರ ಚಿಕ್ಕಬಳ್ಳಾಪುರ ತಾಲೂಕಿನ ಬೋದಗಾನಹಳ್ಳಿಯ ನರೇಗಾ ಯೋಜನೆಯ ಅಡಿಯಲ್ಲಿ ನಿರ್ಮಾಣ ಮಾಡಿರುವ ಸರ್ಕಾರಿ ಪ್ರಾಥಮಿಕ ಶಾಲೆಯ ಅಡುಗೆ ಕೋಣೆ ಮತ್ತು ಚರಂಡಿಯ ಕಾಮಗಾರಿಗಳನ್ನು ಪರಿಶೀಲಿಸಿದರು.

ಆ ನಂತರ ತಾಲ್ಲೂಕಿನ ಅವಲಗುರ್ಕಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊನ್ನೇನಹಳ್ಳಿ ಗ್ರಾಮದ ಅಂಗನವಾಡಿ ಕಟ್ಟಡ ಕಾಮಗಾರಿ, ಹಾರೋಬಂಡೆ ಗ್ರಾಮ ಪಂಚಾಯ್ತಿಯ ಸಿ.ಸಿ. ರಸ್ತೆ ವೀಕ್ಷಿಸಿದರು. ಹಾರೋಬಂಡೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಿ.ಸಿ. ರಸ್ತೆ ಹಾಗೂ ತೋಟಗಾರಿಕೆ ಇಲಾಖೆಯ ನರೇಗಾ ಯೋಜನೆಯಡಿಯ ದ್ರಾಕ್ಷಿ ನಾಟಿ ಕಾಮಗಾರಿ ಗಳನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ನರೇಗಾ ಸಹಾಯಕ ನಿರ್ದೇಶಕ ರಫೀಕ್, ತಿಪ್ಪೇನಹಳ್ಳಿ ಪಿಡಿಒ ಮುನಿರಾಜು, ಹಾರೋಬಂಡೆ ಪಿಡಿಒ ನಾರಾಯಣಸ್ವಾಮಿ, ತಾಂತ್ರಿಕ ಸಂಯೋಜಕ ಮಂಜುನಾಥ, ಪವಿತ್ರ, ನಳಿನ, ಅಭಿಲಾಷ್ ಇದ್ದರು.

ತಿಪ್ಪೇನಹಳ್ಳಿ ಪಂಚಾಯಿತಿ ವ್ಯಾಪ್ತಿಯ ನರೇಗಾ ಕಾರ್ಮಿಕರಿಗಾಗಿ ನಿರ್ಮಿಸಿರುವ ಕೂಸಿನ ಮನೆಗೆ ಸಿಇಒ ಪ್ರಕಾಶ್ ಜಿ.ಟಿ ನಿಟ್ಟಾಲಿ ಭೇಟಿ ನೀಡಿ ಪರಿಶೀಲನೆ ಮಾಡಿದರು.

ಕೆನಾಲ್ ಪುನರಾರಂಭ: ಆಕ್ರೋಶ

ರೈತರು ಕಾಮಗಾರಿ ಬಳಿ ಪ್ರತಿಭಟನೆ ನಡೆಸಿದರು.

ಗುಬ್ಬಿ: ಜಿಲ್ಲೆಯ ಜೀವನಾಡಿ ಹೇಮಾವತಿ ನೀರು ನಮ್ಮಿಂದ ಕಿತ್ತುಕೊಳ್ಳುವ ಎಕ್ಸ್ ಪ್ರೆಸ್ ಲಿಂಕ್ ಕೆನಾಲ್ ಪೈಪ್ ಲೈನ್ ಕಾಮಗಾರಿ ಸ್ಥಗಿತ ಗೊಳಿಸಲು ಕಳೆದ ಒಂದು ವರ್ಷದಿಂದ ನಿರಂತರ ಹೋರಾಟ ನಡೆಸಿದ್ದ ರೈತರಿಗೆ ಶುಕ್ರವಾರ ಪೊಲೀಸರ ಕಾವಲಿನಲ್ಲಿ ಕೆಲಸ ಆರಂಭಿಸಿದೆ. ಈ ಹಿನ್ನಲೆ ರೊಚ್ಚಿಗೆದ್ದ ರೈತರು ಕಾಮಗಾರಿ ಬಳಿ ಪ್ರತಿಭಟನೆ ನಡೆಸಿದರು.

ರೈತ ಸಂಘದ ತಾಲ್ಲೂಕು ಅಧ್ಯಕ್ಷ ವೆಂಕಟೇಗೌಡ ಮಾತನಾಡಿ ಸಂಸದ ಸೋಮಣ್ಣ ಅವರು ಪತ್ರಿಕೆಯಲ್ಲಿ ಹೇಳಿಕೆ ನೀಡಿ ಈ ಪೈಪ್ ಲೈನ್ ಕಾಮಗಾರಿ ವಿರೋಧ ಇದೆ ಎನ್ನುತ್ತಾರೆ. ಆದರೆ ರೈತರ ಹೋರಾಟಕ್ಕೆ ಬರುತ್ತಿಲ್ಲ. ಬರೀ ರೈಲ್ವೆ ಸೇತುವೆ ಮಾಡುತ್ತಾ ಇದ್ದರೆ ಆಗೋಲ್ಲ. ರೈತರಿಗೆ ಅವಶ್ಯ ಕೃಷಿಗೆ ನೀರನ್ನು ಉಳಿಸಿಕೊಡಿ. ಡಿಕೆಶಿ ಜೊತೆ ಚರ್ಚೆ ಮಾಡಿ ಎಂದ ಅವರು ಜಿಲ್ಲೆಯಲ್ಲಿ ಇಬ್ಬರು ಸಚಿವರು ಕೇವಲ ಕಾಂಗ್ರೆಸ್ ಸಚಿವರು ಎನಿಸಿದ್ದಾರೆ. ಕಾಂಗ್ರೆಸ್ ಶಾಸಕರೂ ಸಹ ಒಂದು ಮಾತು ಆಡುತ್ತಿಲ್ಲ ಎಂದು ಕಿಡಿಕಾರಿದರು.

ಮಾಜಿ ಸಚಿವ ಸೊಗಡು ಶಿವಣ್ಣ ಮಾತನಾಡಿ ಹೇಮಾವತಿ ಜಿಲ್ಲೆಗೆ ತರಲು ನಡೆದ ಹೋರಾಟ ವೈ.ಕೆ.ರಾಮಯ್ಯ ಅವರನ್ನು ಸ್ಮರಿಸಬೇಕು. ಅಂದಿನ ಕಿಚ್ಚು ಇಂದು ಕಾಣುತ್ತಿಲ್ಲ. ಇಂದಿನ ರಾಜಕಾರಣಿಗಳು ಸ್ವಾರ್ಥಕ್ಕೆ ನಿಂತಿದ್ದಾರೆ. ಇವರಿಗೆ ಅಧಿಕಾರಿಗಳು ದಲ್ಲಾಳಿ ಗಳಂತೆ ವರ್ತಿಸುತ್ತಾರೆ ಎಂದು ಗುಡುಗಿ ಜೈಲಿ ನಲ್ಲೇ ಉಪವಾಸ ಮಾಡೋಣ. ಎಲ್ಲರೂ ಒಗ್ಗಟ್ಟಾಗಿ ಹೋರಾಟ ಮುಂದುವರೆಸಿ ಎಂದು ಕರೆ ನೀಡಿದರು. ನಂತರ ಸ್ಥಳದಲ್ಲಿದ್ದ ಪೊಲೀಸ್ ಅಧಿಕಾರಿಗಳು, ತಹಶೀಲ್ದಾರ್ ಅವರು ಪ್ರತಿಭಟನಾಕಾರರನ್ನು ತಡೆಯುವ ಪ್ರಯತ್ನ ಮಾಡಿದರು. ಎಲ್ಲಾ ಹೋರಾಟಗಾ ರರನ್ನು ಬಸ್ಸಿನಲ್ಲಿ ಹೊರ ವಲಯದಲ್ಲಿ ಅತಿಥಿಯಾಗಿಸಿಕೊಂಡು ಪ್ರತಿಭಟನೆಯನ್ನು ಹತ್ತಿಕ್ಕುವಲ್ಲಿ ಯಶಸ್ವಿಯಾದರು. ಪ್ರತಿಭಟನೆಯಲ್ಲಿ ಬಿಜೆಪಿ ಎಸ್ .ಡಿ.ದಿಲೀಪ್ ಕುಮಾರ್, ಎಚ್.ಟಿ.ಭೈರಪ್ಪ, ಬಿ.ಎಸ್.ಪಂಚಾಕ್ಷರಿ, ಗಿರೀಶ್, ರಾಜಶೇಖರ್, ನಂದೀಶ್, ರೈತ ಸಂಘದ ಶಂಕರಪ್ಪ, ಸಿ.ಜಿ.ಲೋಕೇಶ್, ಸತ್ತಿಗಪ್ಪ ಇತರರು ಇದ್ದರು.

ಹಕ್ಕುಪತ್ರ ವಿತರಣೆಗೆ ಸಿಎಂ: ಶಾಸಕ

ಕೋಲಾರ ಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಅವರೋಧವಾಗಿ ಆಯ್ಕೆಯಾದ ರಮೇಶ್ ಅವರನ್ನು ಸನ್ಮಾನಿಸಲಾಯಿತು.

ಕೋಲಾರ: ಮಾಲೂರು ವಿಧಾನಸಭಾ ಕ್ಷೇತ್ರದಲ್ಲಿ ಇನ್ನೂರು ಕೋಟಿ ರೂ.ಗಳ ಕಾಮಗಾರಿ ಉದ್ಘಾಟನೆ ಮತ್ತು ಶಂಕುಸ್ಥಾಪನೆಗಳನ್ನು ನೆರವೇರಿಸಲು ಶೀಘ್ರದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಲೂರಿಗೆ ಆಗಮಿಸುತ್ತಿದ್ದು ಆ ಸಂದರ್ಭದಲ್ಲಿ ಪಟ್ಟಣದಲ್ಲಿ ಫಲಾನುಭವಿಗಳಿಗೆ ಸೈಟ್ ಹಕ್ಕುಪತ್ರ ಹಾಗೂ ಮನೆ ಮಂಜೂರಾತಿ ಪತ್ರ ನೀಡಲಾಗುತ್ತದೆಂದು ಶಾಸಕ ಕೆ.ವೈ.ನಂಜೇಗೌಡ ಹೇಳಿದರು.

ಮಾಲೂರು ಪುರಸಭೆಯು ನಗರಸಭೆಯಾಗಿ ಮೇಲ್ದರ್ಜೆಗೆ ಏರಿರುವ ಸಂದರ್ಭದಲ್ಲಿ ಸದಸ್ಯರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿ, ಸಾರಿಗೆ ಬಸ್ ನಿಲ್ದಾಣ ಸೇರಿದಂತೆ ಎಲ್ಲವೂ ನನ್ನ ಕಾಲದಲ್ಲಿ ಆಗಿದ್ದು ಮಾಲೂರು ಕೆರೆಯನ್ನು ಜಿಲ್ಲೆಯಲ್ಲೇ ಮಾದರಿಯಾಗಿ ಅಭಿವೃದ್ಧಿ ಮಾಡಲಾಗುತ್ತಿದ್ದು ಪ್ರವಾಸಿ ತಾಣವಾಗಿ ಆಗುತ್ತದೆಂದರು. ಪುರಸಭೆ ಮತ್ತು ನಗರಸಭೆ ಎರಡೂ ಕಡೆ ಕರ್ತವ್ಯ ನಿರ್ವಹಿಸಿದ ಹೆಗ್ಗಳಿಕೆಗೆ ಈ ಸಾಲಿನ ಸದಸ್ಯರು ಪಾತ್ರರಾಗುತ್ತಿದ್ದು ಇದು ಐತಿಹಾಸಿಕ ದಾಖಲೆ ಎಂದು ಬಣ್ಣಿಸಿದ ಶಾಸಕರು ಸದಸ್ಯರು ಪಕ್ಷಾತೀತವಾಗಿ ಸಹಕಾರ ನೀಡುವ ಮೂಲಕ ಪಟ್ಟಣದ ಅಭಿವೃದ್ಧಿಗೆ ಸಹಕಾರ ನೀಡ ಬೇಕೆಂದು ಮನವಿ ಮಾಡಿದರು.

ಕಾಂಗ್ರೆಸ್ ಹಿರಿಯ ಮುಖಂಡ ಯಲುವಗುಳಿ ಚಲವಾದಿ ಸತೀಶ್‌ರಾಜಣ್ಣ ಮಾತನಾಡಿ, ಶಾಸಕ ನಂಜೇಗೌಡರ ಅವಧಿಯಲ್ಲಿ ಹೆಚ್ಚಿನ ಅಭಿವೃದ್ಧಿಯಾಗಿದ್ದು ಪ್ರಸ್ತುತ ಪುರಸಭೆ ಮೇಲ್ದರ್ಜೆಗೆ ಏರಿದ್ದರಿಂದಾಗಿ ಪಟ್ಟಣದ ಅಭಿವೃದ್ಧಿಗೆ ಹೆಚ್ಚಿನ ವೇಗ ಸಿಕ್ಕುತ್ತದೆಂದು ಸಂತಸ ವ್ಯಕ್ತಪಡಿಸಿದರು. ಡಿಸಿಸಿ ಬ್ಯಾಂಕ್‌ಗೆ ರಮೇಶ್ ಅವರು ಅವಿರೋಧ ಆಯ್ಕೆಯಾಗಿದ್ದು ಉಳಿದೆರಡೂ ಸ್ಥಾನಗಳನ್ನು ಗೆಲ್ಲಿಸಿಕೊಳ್ಳಲು ಶಾಸಕರ ಪಡೆ ಸಜ್ಜಾಗಿದ್ದು ಮಾಲೂರಿನಿಂದ ಕಾಂಗ್ರೆಸ್‌ನ 3 ನಿರ್ದೇಶಕರು ಕೋಲಾರ ಡಿಸಿಸಿ ಬ್ಯಾಂಕಿಗೆ ತೆರಳಲಿದ್ದಾರೆಂದು ನುಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮೀನಾರಾಯಣ್, ಡಿಸಿಸಿ ಬ್ಯಾಂಕ್ ನಿರ್ದೇಶಕ ರಮೇಶ್, ಪುರಸಭೆ ಅಧ್ಯಕ್ಷೆ ವಿಜಯಲಕ್ಷ್ಮೀ, ಉಪಾಧ್ಯಕ್ಷೆ ವಿಜಯಲಕ್ಷ್ಮೀಕೃಷ್ಣಪ್ಪ, ಸ್ಥಾಯಿ ಸಮಿತಿ ಅಧ್ಯಕ್ಷ ರಾಜಪ್ಪ, ಪ್ರದೀಪ್ ಇದ್ದರು.

ಶಿಲಾವಿಗ್ರಹ ಪ್ರಾಣ ಪ್ರತಿಷ್ಠಾಪನೆ

ಚಿಕ್ಕಬಳ್ಳಾಪುರ: ನಂದಿ ಬೆಟ್ಟದ ತಪ್ಪಲಿನಲ್ಲಿ ನೆಲಸಿರುವ 1200 ವರ್ಷಗಳ ಇತಿಹಾಸವಿರುವ ಮುತ್ಯಾಲಮ್ಮ, ದುರ್ಗಾಪರಾಮೇಶ್ವರಿ ದೇವಾಲಯದ ನೂತನ ಶಿಲಾವಿಗ್ರಹ ಪ್ರಾಣ ಪ್ರತಿಷ್ಠಾಪನಾ ಮಹೋತ್ಸವವು ಶುಕ್ರವಾರ ಅದ್ದೂರಿಯಾಗಿ ನಡೆಯಿತು.

ಸಾವಿರಾರು ವರ್ಷಗಳಿಂದ ಸುಲ್ತಾನಪೇಟೆ ಗ್ರಾಮದ ಗ್ರಾಮ ದೇವತೆಗಳಾದ ಮುತ್ಯಾಲಮ್ಮ, ದುರ್ಗಾಪರಾಮೇಶ್ವರಿ ಕಲ್ಲಿನ ರೂಪದಲ್ಲಿದ್ದು ಗ್ರಾಮವನ್ನು ಕಾಯುತ್ತಿದ್ದರು. ಗ್ರಾಮ ದೇವತೆಗೆ ಸುಸಜ್ಜಿತವಾದ ದೇವಾಲಯ ವಿಲ್ಲದೆ ಮಳೆ, ಬಿಸಿಲು, ಗಾಳಿಗೆ ನೆನೆಯುತ್ತಿದ್ದರು. ಇದನ್ನು ಮನಗಂಡ ಸುಲ್ತಾನಪೇಟೆ ಗ್ರಾಮಸ್ಥರು, ಯುವಕರು, ಮುಖಂಡರೆಲ್ಲಾ ಗ್ರಾಮ ದೇವತೆಗೆ ಸುಸಜ್ಜಿತವಾದ ದೇವಾಲಯ ಕಟ್ಟಿಸಿ ನೆಲೆ ಕೊಡಬೇಕೆಂದು ಸಾಮೂಹಿಕವಾಗಿ ಕೈ ಜೋಡಿಸಿ ದೇವಾಲಯ ನಿರ್ಮಿಸಿದ್ದಾರೆ.

ಭಕ್ತಾದಿಗಳ ದೇಣಿಗೆಯಿಂದ ದೇವಾಲಯ ನಿರ್ಮಾಣವಾಗಿದ್ದು ಗುರುವಾರ ಶುಕ್ರವಾರ ಶನಿವಾರ ಸತತ ಮೂರು ದಿನಗಳಿಂದ ಸುಲ್ತಾನಪೇಟೆ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ. ಮಹಿಳೆಯರು ಸುಮಂಗಲಿಯರಿಂದ ನಡೆದ ದೀಪಗಳ ಮೆರವಣಿಗೆ ಅಕರ್ಷಣಿಯವಾಗಿತ್ತು.



ಬಿಜೆಪಿ: 'ಕಲಬುರ್ಗಿ ಚಲೋ' ಇಂದು

ಜಿಲ್ಲಾ ಬಿಜೆಪಿ ನಾಯಕರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ತುಮಕೂರು: ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ಮೇಲೆ ಕಲಬುರ್ಗಿ ಜಿಲ್ಲೆಯ ಚಿತ್ತಾಪುರದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಬೆಂಬಲಿಗರು ಹಲ್ಲೆ ನಡೆಸಿ, ದಿಗ್ಬಂಧನ ಮಾಡಿ ಅಪಮಾನಿಸರುವುದನ್ನು ಜಿಲ್ಲಾ ಬಿಜೆಪಿ ನಾಯಕರು ತೀವ್ರವಾಗಿ ಖಂಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಹಿಂದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ವಿರೋಧ ಪಕ್ಷವನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ. ಪೊಲೀಸರು ಕರ್ತವ್ಯ ಮರೆತು ಸಚಿವರ ಕೈಗೊಂಬೆಯಂತಾಗಿದ್ದಾರೆ. ಚಿತ್ತಾಪುರದಲ್ಲಿ ಮೇಲ್ಮನೆ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿಯವರ ಮೇಲೆ ಸಚಿವ ಪ್ರಿಯಾಂಕ್ ಖರ್ಗೆ ಬೆಂಬಲಿಗರು ನಡೆಸಿದ ಹಲ್ಲೆ ಖಂಡನೀಯ, ಸ್ಥಳದಲ್ಲಿದ್ದ ಪೊಲೀಸರು ಸಚಿವರ ಬೆಂಬಲಿಗರ ಗೂಡಾಗಿರಿ ತಡೆಯಲಿಲ್ಲ. ರಾಜ್ಯದಲ್ಲಿ ಒಂದುರೀತಿಯ ಗೂಂಡಾ ಆಡಳಿತ ನಡೆಯುತ್ತಿದೆ ಎಂದು ಟೀಕಿಸಿದರು.

ಛಲವಾದಿ ನಾರಾಯಣಸ್ವಾಮಿ ಹಾಗೂ ಬಿಜೆಪಿ ನಾಯಕರ ವಿರುದ್ಧ ರಾಜಕೀಯ ದ್ವೇಷ ಸಾಧಿಸಿರುವ ಕಾರಣದಿಂದ ಪ್ರಿಯಾಂಕ್ ಖರ್ಗೆ ಕೂಡಲೇ ಸಚಿವ ಸ್ಥಾನಕ್ಕೆ ರಾಜೀನಾಮೇ ನೀಡುವಂತೆ ಆಗ್ರಹಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಮೇ 24ರಂದು ಕಲಬುರ್ಗಿ ಚಲೋ ನಡೆಸಲಾಗುವುದು ಎಂದು ವೈ.ಹೆಚ್.ಹುಚ್ಚಯ್ಯ ಹೇಳಿದರು. ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಗಂಗರಾಜು ಮಾತನಾಡಿ, ಸಚಿವ ಖರ್ಗೆಯವರು ರಾಜ್ಯದಲ್ಲಿ ಹದಗೆಟ್ಟಿರುವ ಆಡಳಿತ ವ್ಯವಸ್ಥೆ ಸರಿಪಡಿಸುವತ್ತ ಗಮನಹರಿಸಲಿ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಗೃಹ ಸಚಿವ ಡಾ.ಪರಮೇಶ್ವರ್ ಸಂಪೂರ್ಣ ವಿಫಲವಾಗಿದ್ದಾರೆ ಎಂದರು. ಯುವ ಮೋರ್ಚಾ ಜಿಲ್ಲಾಧ್ಯಕ್ಷ ಹೆಚ್.ಎ.ಆಂಜನಪ್ಪ ಮಾತನಾಡಿ, ಇದು ದಲಿತ ವಿರೋಧಿ ಸರ್ಕಾರ ಎಂದು ಆರೋಪಿಸಿದರು. ರಾಜ್ಯ ಬಿಜೆಪಿ ಎಸ್ .ಸಿ.ಮೋರ್ಚಾ ಕಾರ್ಯದರ್ಶಿ ಓಂಕಾರ್ , ಮುಖಂಡರಾದ ಅಂಜನಮೂರ್ತಿ, ಹನುಮಂತರಾಯಪ್ಪ, ರಮೇಶ್, ಜೆ. ಜಗದೀಶ್, ಧನುಷ್, ಸಿದ್ಧಗಂಗಯ್ಯ ಇದ್ದರು.

IN THE COURT OF THE CIVIL JUDGE & JMFC AT KORATAGERE
C.MIS.No.113/2025

Petitioners:- 1. Sannaiah S/o Late Chikkamotaiah, A/a 56 years 2.Rajanna S/o Late Chikkamotaiah A/a 54 years, 3. Hanumantharaya S/o Late Chikkamotaiah, a/a 45 years 3. Raju.K.V. S/o Venkateshappa a/a 40 years 1 to 3 are R/o Gantiganahalli, Kasaba Hobli, Koratagere taluk.

V/S

Respondent:- The Tahasildar The Registar of Birth and death, Koratagere Taluk.

PUBLIC NOTIFICATION

Whereas the petitioners have filed the above petition to obtain the death certificate of the 1st to 3rd petitioner Mother by name Thimmakka W/o Chikkamotaiah died on 10-05-2001 at Koratagere tauk, Kolala Hobli, Gantiganahalli. It is hereby notify that whoever has interest or objection to obtain the death certificate of the petitioner Mother may appear in person or through your advocate on:- 19/07/2025in the above case. Failing which the matter will be herd written mined in your absence.

By the Order of Court
Shirestedar
THE CIVIL JUDGE AND J.M.F.C.
COURT AT KORATAGERE
Advocate for petitioner,
H.R.Ramachandraiah Koratagere.

IN THE COURT OF THE CIVIL JUDGE AND J.M.F.C. AT KORATAGERE
C. MIS. NO. 143/2025

Petitioners : 1) Narasaiah.G.N. S/o Late Narasimhaiah, aged 74 years. 2) Kantharaju s/o Late Narasimhaiah, Aged 53 years. 3) Kempamma W/o Late N.Krishnamurthy, Aged 57 years, R/o Nanjappa compound, 7th cross, Upparahalli, Someshwarapuram, Tumkur. 4) Vijayamma W/o Chikkanna, Aged 42 years, R/o B.D.Pura, Holavanahalli hobli, Koratagere taluk. 5) Nagabhushana.G.N. S/o Late Narayanappa, Aged 35 years. 6) Mahendrababu S/o Late Narayanappa, Aged 32 years. Petitioner No. 1, 2 and 5 and 6 are R/o Gantiganahalli, Kasaba hobli, Koratagere taluk.

V/S

Respondent: The Registrar of Birth and Death's and The Tahasildar Koratagere, Koratagere taluk.

Public Notification

The above named petitioner is filed petition for obtain the Death certificate of the 1st and 2nd petitioners mother, 3rd petitioner's mother in law and 4th to 6th petitioner grand mother Narasamma w/o Late Narasimhaiah died on 24-04-2011 at Gantiganahalli, Kasaba hobli, Koratagere taluk. Is there any other legal representatives are here by summoned to appear before this court in person or by a pleader on 01/08/2025 at 11-00 A.M. to answer the same, failing which the petition will be di disposed off exparte.
Given under my hand and the seal of the court on this day of y of 03/05/2025.

By the Order of Court
Shirestedar
THE CIVIL JUDGE AND J.M.F.C.
COURT AT KORATAGERE
Advocate for petitioner,
G.M.Krishnamurthy, Advocate, **Komal Girish.N.S.** Advocate, Near Mini Vidhana soudha, Koratagere.

IN THE COURT OF THE CIVIL JUDGE JMFC AT KORATAGERE
C.MIS.No. 65/2025

Petitioner:- 1. Doddakka W/o Late Yallappa Aged About 55 Years. 2. Raamaswami S/o Late Yallappa R/o Thigalarapaalya Villege Holavanahalli Hobli Koratagere Taluk.

V/S

Respondent: - The Tahasildar Registar of Birth & Death Koratagere Taluk.

PUBLIC NOTIFICATION

Whereas the petitioner's has filed the above petition to obtain the death certificate of the first petitioner's Husband and 2nd Petitionr Father by name Yallappa S/o Late Doddayallappa was died on 25-10-1992 at Thigalarapaalya Village Holavanahalli Hobli Koratagere Taluk, Tumkur Dist. It is hereby notify that whoever has interest or objection to obtain the death certificate of the petitioner's Father may be appear in person or through your advocate on 13/06/2025 in the above case. Failing which the matter will be herd written mined in your absence.

By the Order of Court
Shirestedar
THE CIVIL JUDGE AND J.M.F.C.
COURT AT KORATAGERE
Advocates for petitioner,
H.R Ramachandrappa, Koratagere.

IN THE COURT OF THE CIVIL JUDGE & JMFC AT KORATAGERE
C.MIS.No. 109/2025

Petitioners:- 1. Hanumaiah S/o Late Narasappa, A/a 50 years R/o Hanumenahalli, Holavanagalli Hobli, Koratagere Taluk. 2. Jayamma D/o Narasappa, W/o Nagaraju, a/a 58 years, R/o Bandrahalli, Holavanagalli Hobli Koratagere taluk 3.Narasamma D/o Late Narasappa W/o Hanumantharayappa, a/a 56 years R/o Guttekempanapalya Kolala Hobli, Koratagere taluk.

V/s

Respondent:- The Tahasildar The Registar of Birth and death, Koratagere taluk.

PUBLIC NOTIFICATION

Whereas the petitioners have filed the above petition to obtain the death certificate of the 1st to 3rd petitioner Senior-Father by name Korapahanumaiah S/o Late Gundappa died on 08-10-1985 Senior-Mother by name Puttamma W/o Late Korapahanumaiah died on 05-04-1972 and Mother by name Muttamma w/o Narasappa died on 02-08-1978 at Koratagere taluk, Holavanahalli Hobli, Hanumenahalli. It is hereby notify that whoever has interest or objection to obtain the death certificate of the 1st to 3rd petitioners Senior-father and Senior-Mother and Mother may appear in person or through your advocate on: 11/7/232025in the above case. Failing which the matter will be herd written mined in your absence.

By the Order of Court
Shirestedar
THE CIVIL JUDGE AND J.M.F.C.
COURT AT KORATAGERE
Advocate for petitioner,
H.R.Ramachandraiah, Koratagere.

IN THE COURT OF THE CIVIL JUDGE & JMFC AT KORATAGERE
C.MIS.No.114/2025

Petitioners:- 1.Gangamma W/o Late Puttaiah, A/a 70 years 2. Ramakka W/o Jayaramaiah, a/a 50 years, both are r/o Gundinapalya, kasaba Hobli, Koratagere taluk.

V/S

Respondent:- The Tahasildar The Registar of Birth and death, Koratagere taluk.

PUBLIC NOTIFICATION

Whereas the petitioners have filed the above petition to obtain the death certificate of the 2nd petitioner father by name Puttaiah S/o Late Hanumanthaiah died on 11-11-1992 at Koratagere taluk, kasaba Hobli, Chimpuganahalli. It is hereby notify that whoever has interest or objection to obtain the death certificate of the 2nd petitioners father may appear in person or through your advocate on:- 19/07/2025 in the above case. Failing which the matter will be herd written mined in your absence.

By the Order of Court
Shirestedar
THE CIVIL JUDGE AND J.M.F.C.
COURT AT KORATAGERE
Advocate for petitioner,
H.R.Ramachandraiah, Koratagere.

In the Court of Civil Judge and J.M.F.C. at Koratgaere
C.Mis No. 155/2025

PETITIONERS: 1) Shashikumar S/o Late. Anjinappa aged 32 years. R/o Channarayanadurga, C.N.Durga hobli, Koratagere taluk, Tumkuru District. 2) Shardhamma W/o Late. Ramanjineya.B.H aged 37 years. r/o Bidloti, Holavanahalli hobli, Koratagere Tq, Tumkuru District. 3) Doddammanni Uruf Shalini W/o Santhosh aged 35 years. r/o Mekebande, Tumkuru road, Madhugiri Town, Madhugiri Tq, Tumkuru District.

V/s

RESPONDENT : The Tahsildar, The Registrar of Birth and Death's / Com Koratagere, Koratagere taluk,

Public Notification

The petitioner's mother Sunandamma W/o Late. Anjinappa died on Date: 06-08-2000 at in the house of petitioner's Channarayanadurga village, C.N.Durga hobli, Koratagere taluk, is there any other legal representatives are here by summoned to appear in this court in person or by a pleader on 01/07/2025 at 11-00 A.M. to answer the same, failing which the petition will be disposed off exparte.
Given under my hand and the seal of the court on this day of 20/5/2025.

By the Order of Court
Shirestedar
THE CIVIL JUDGE AND J.M.F.C.
COURT AT KORATAGERE
Advocate for petitioner,
D.C.Shivaramaiah,
G.C.Arundathi, Advocates Koratagere

IN THE COURT OF THE CIVIL JUDGE & JMFC AT KORATAGERE
C.MIS.No. 77/2025

Petitioners:-1.Srinivasa.D. S/o Late Doniyappa, 63 years, 2. Nagamma W/o Late Rangamuttaiah, 55 years, Both are R/o Lakkamuttanahalli, Kolala Hobli, Koratagere Taluk

V/S

Respondent:- The Deputy-Tahasildar, The Registar of Birth & death, Kolala Koratagere taluk.

PUBLIC NOTIFICATION

Whereas the petitioners have filed the above petition to obtain the death certificate of the 1st petitioner's father by name Doniyappa S/o Late Bharti Rangaiah died on 10-05-1992 and Mother by name Thippakka W/o Late Doniyappa died on/03-05-2003 at Lakkamuttanahalli, Kolala Hobli, Koratagere Taluk. It is hereby notify that whoever has interest or objection to obtain the death certificate of the 1st petitioner Father and Mother may appear in person or through your advocate on21/06/2025 in the above case. Failing which the matter will be herd written mined in your absence.

By the Order of Court
Shirestedar
THE CIVIL JUDGE AND J.M.F.C.
COURT AT KORATAGERE
Advocate for petitioner,
Narasimharaju, Koratagere.

ಕಾಡಾನೆ ಹಾವಳಿ ತಡೆಗೆ ಪುನರ್ವಸತಿ ಕಲ್ಪಿಸಿ

ಮಡಿಕೇರಿ: ಕಾಡಾನೆಗಳಿಗೆ ಪುನರ್ವಸತಿ ಕಲ್ಪಿಸಿದಲ್ಲಿ ಮುಂದಿನ 2 ವರ್ಷಗಳಲ್ಲಿ ಕಾಡಾನೆ ಉಪಟಳ ನಿಯಂತ್ರಣಕ್ಕೆ ಬರಲಿದೆ ಎಂದು ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾ ಡಿದ ಅವರು, ಸರಕಾರ ಬಜೆಟ್‌ನಲ್ಲಿ ಘೋಷಿಸಿ ದಂತೆ ಭದ್ರಾ ಸಾಫ್ಟ್ ಏರಿಯಾ ಲಿಸ್ಟ್‌ನಲ್ಲಿ ಕಾಡಾನೆಗಳಿಗೆ ಪುನರ್ವಸತಿ ಕಲ್ಪಿಸಲು 2ರಿಂದ 3 ವರ್ಷಗಳು ಬೇಕಾಗಬಹುದು ಎಂದರು. ಪೊನ್ನಂಪೇಟೆ ತಾಲೂಕಿನ ದೇವರಪುರದಲ್ಲಿ ವ್ಯಕ್ತಿಯೊಬ್ಬರನ್ನು ಕಾಡಾನೆ ಬಲಿ ಪಡೆದ ದುರ್ಘಟನೆಯನ್ನು ಶಾಸಕ ಎ. ಎಸ್. ಪೊನ್ನಣ್ಣ ಅವರು ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ.

ಕಾಡಾನೆ ಸೆರೆಗೆ ಅನುಮತಿ ನೀಡುವಂತೆ ಮನವಿ ಮಾಡಿದ್ದಾರೆ. ರಾಜ್ಯದ ಏಳೆಂಟು ಜಿಲ್ಲೆಗಳಲ್ಲಿ ಮಾನವ ವನ್ಯಜೀವಿ ಸಂಘರ್ಷವಿದೆ. ಕಾಡಾನೆ ಹಾವಳಿಯಿಂದಾಗಿ ರಾಜ್ಯದಲ್ಲೇ ಅತೀ ಹೆಚ್ಚು ಜೀವಹಾನಿ ಕೊಡಗು ಜಿಲ್ಲೆಯಲ್ಲಿ ಆಗುತ್ತಿದೆ.

ಕಾಡಿನಲ್ಲಿರುವ ಆನೆಗಳಿಗಿಂತಲೂ ಹೆಚ್ಚಾಗಿ ತೋಟಗಳಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳಿಂದ ಸಮಸ್ಯೆಯಾಗು ತ್ತಿದೆ. ಸಮಸ್ಯೆ ಪರಿಹಾರಕ್ಕೆ ಎಲ್ಲಾ ಪಕ್ಷಗಳು, ಸಂಘ ಸಂಸ್ಥೆಗಳ ಸಹಕಾರ ಅಗತ್ಯವೆಂದರು.

ನಾಗರಹೊಳೆಯಲ್ಲಿ 2 ಸಾವಿರ ಕಾಡಾನೆ

ಗಣತಿ ಪ್ರಕಾರ ನಾಗರಹೊಳೆಯಲ್ಲಿ 2 ಸಾವಿರ ಕಾಡಾನೆಗಳಿದ್ದು, 563 ಹುಲಿಗಳು ಇವೆ. ಜನವಸತಿ ಪ್ರದೇಶದಲ್ಲಿರುವ ಎರಡು ಹುಲಿಗಳನ್ನು ಸೆರೆ ಹಿಡಿಯಲು ಸಂಬಂಧಿಸಿದ ಇಲಾಖೆಯಿಂದ ಅನುಮತಿ ದೊರೆತಿದೆ. ಆದರೆ ಅರಣ್ಯ ಇಲಾಖೆ ಕಾರ್ಯಗತ ಮಾಡುತ್ತಿಲ್ಲವೆಂದು ಸಂಕೇತ್ ಪೂವಯ್ಯ ಅಸಮಾಧಾನ ವ್ಯಕ್ತಪಡಿಸಿದರು.

ದೇಗುಲದಲ್ಲಿ ಭಕ್ತಿ, ಶಾಲೆಯಲ್ಲಿ ಜ್ಞಾನ ಪ್ರಾಪ್ತಿ

ರಾಮನಗರ: ತಾಲೂಕಿನ ಬಿಡದಿ ಹಲಸಿನಮರದದೊಡ್ಡಿಯಲ್ಲಿ ಜೀರ್ಣೋದ್ಧಾರಗೊಂಡ ಚೌಡೇಶ್ವರಿ ದೇವಾಲಯ ಪ್ರಾಣಪ್ರತಿಷ್ಠಾಪನೆ, ಉದ್ಘಾಟನಾ ಸಮಾರಂಭ ಶುಕ್ರವಾರ ನೆರವೇರಿತು.

ಕಾಗಿನೆಲೆ ಪೀಠದ ಶ್ರೀ ಈಶ್ವರಾನಂದ ಸ್ವಾಮೀಜಿ ದೇವಾಲಯ ಉದ್ಘಾಟನಾ ಕಾರ್ಯ ನೆರವೇರಿಸಿದರು. ಪೂಜಾ ಕಾರ್ಯಕ್ರಮದಲ್ಲಿ ಭಾಗಿಯಾಗಿ ಆಶೀರ್ವಚನ ನೀಡಿದರು.

ಪಟ್ಟಣದ ಬಿಡದಿ ಬಸ್ ನಿಲ್ದಾಣದ ಬಳಿಯಿಂದ ವಾರ್ಡ್ ನಂ. 2ರ ಹಲಸಿನಮರದದೊಡ್ಡಿಯವರೆಗೆ ಸ್ವಾಮೀಜಿಗಳನ್ನು ಬೆಳ್ಳಿರಥದಲ್ಲಿ ಕೂರಿಸಿ, ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಪೂರ್ಣಕುಂಭ ಸ್ವಾಗತ ಕೋರಲಾಯಿತು. ನಂತರ ಮಾತನಾಡಿದ ಶ್ರೀ ಈಶ್ವರಾನಂದ ಸ್ವಾಮೀಜಿ, ದೇವಾಲಯದಲ್ಲಿ ಭಕ್ತಿ ಪ್ರಾಪ್ತಿಯಾಗುತ್ತದೆ, ಶಾಲೆಯಲ್ಲಿ ಜ್ಞಾನ ಪ್ರಾಪ್ತಿಯಾಗುತ್ತದೆ ಹಾಗಾಗಿ ಶಾಲೆ ಮತ್ತು ದೇವಾಲಯಗಳನ್ನು ಮರೆಯಬಾರದು, ನಿತ್ಯ ಭಗವಂತನ ಪ್ರಾರ್ಥನೆ ಮಾಡಿ ಕೆಲಸ ಆರಂಭಿಸಿದರೆ ಒಳ್ಳೆಯದಾಗುತ್ತದೆ, ಭಗವಂತನ ಸ್ಮರಣೆ ಎಂದಿಗೂ ಅವಶ್ಯ ಎಂದರು. ಹಾಲುಮತ ಸಮುದಾಯ ಎಲ್ಲ ಕ್ಷೇತ್ರಗಳಲ್ಲೂ ಉನ್ನತಿ ಸಾಧಿಸಬೇಕು, ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಲು ಸಮುದಾಯದ ಮಂದಿ ಶ್ರಮಿಸಬೇಕು, ಮಕ್ಕಳಿಗಾಗಿ ಆಸ್ತಿ ಮಾಡುವ ಬದಲು ಮಕ್ಕಳನ್ನೇ ಆಸ್ತಿಯನ್ನಾಗಿಸಬೇಕು ಎಂದು ಕಿವಿಮಾತು ಹೇಳಿದರು.

ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಮಾತನಾಡಿ, ದೇವಾಲಯಗಳು ನೆಮ್ಮದಿ ನೀಡುವ ತಾಣಗಳಾಗಿವೆ, ಭಗವಂತನ ಸ್ಮರಣೆ ಮಾಡುವುದರಿಂದ ನೆಮ್ಮದಿ ನೆಲೆಸುತ್ತದೆ. ಪುರಾತನ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಒಳ್ಳೆಯ ಕೆಲಸ ಮಾಡಿದ್ದೀರಿ, ಇದರ ಜೊತೆಗೆ ಗ್ರಾಮದ ಎಲ್ಲರೂ ಮಕ್ಕಳನ್ನು ಜ್ಞಾನವಂತರನ್ನಾಗಿ ಮಾಡಬೇಕು ಎಂದರು.

ಶಾಸಕ ಹೆಚ್.ಸಿ ಬಾಲಕೃಷ್ಣ, ಮಾಜಿ ಶಾಸಕ ಎ. ಮಂಜುನಾಥ್, ಪುರಸಭೆ ಅಧ್ಯಕ್ಷ ಉಮೇಶ್ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಸ್ಥಳೀಯ ಮುಖಂಡರಾದ ರೋಹಿತ್, ಮಂಜುನಾಥ್ ಹಾಜರಿದ್ದರು.

ರಾಮನಗರ ತಾಲೂಕಿನ ಬಿಡದಿಯಲ್ಲಿ ಸ್ವಾಮೀಜಿಗಳಿಗೆ ಪೂರ್ಣಕುಂಭ ಸ್ವಾಗತ ಕೋರಲಾಯಿತು.

ಹಿರೇಮಠದಲ್ಲಿ ಪುನಃ ಪ್ರತಿಷ್ಠಾಪನೆ ಮಹೋತ್ಸವ

ತುಮಕೂರು: ನಗರದ ಹಿರೇಮಠದ ಮಲ್ಲಿಕಾರ್ಜುನಸ್ವಾಮಿಯ ಪುನ: ಪ್ರತಿಷ್ಠಾಪನಾ ಮಹೋತ್ಸವ, ವಿದ್ಯಾರ್ಥಿ ವಸತಿ ನಿಲಯ ಮತ್ತು ದಾಸೋಹ ಭವನದ ಉದ್ಘಾಟನೆ. ಧಾರ್ಮಿಕ ಮಹಾಸಭೆ ಸೇರಿ ಮೂರು ದಿನ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಹಿರೇಮಠದ ಶ್ರೀಡಾ.ಶಿವಾನಂದ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಈ ತಿಂಗಳ 23ರಿಂದ 25 ರವರೆಗೆ ನಡೆಯುವ ಕಾರ್ಯಕ್ರಮಗಳ ವಿವರ ನೀಡಿದರು.

23ರಂದು ಡಾ.ಶಿವಾನಂದ ಶಿವಾಚಾರ್ಯ ಸ್ವಾಮೀಜಿಗಳು ಷಟ್‌ಸ್ಥಳ ಧ್ವಜಾರೋಹಣ ನೆರವೇರಿಸಿ, ನೂತನ ಶಿಲಾವಿಗ್ರಹ ಪಂಚಗವ್ಯಪ್ರಾಶನ ಪೂರ್ವಕ ವಿಗ್ರಹ ಸಂಸ್ಕಾರ ಕಾರ್ಯ ನಿರ್ವಹಿಸಿದರು.24ರ ಬೆಳಿಗ್ಗೆ ಬ್ರಾಹ್ಮಿ ಮುಹೂರ್ತದಲ್ಲಿ ಪಂಚಕಳಶ, ಸಪ್ತಸಭಾ, ದಶದಿಕ್ಪಾಲಕರು, ಏಕಾದಶರುದ್ರರು, ದ್ವಾದಶಾದಿತ್ಯರು, ಸಪ್ತಚಿರಂಜೀವಿಗಳು, ಸಪ್ತಮಾತೃಕಾ, ಅಧಿದೇವತಾ ಸಹಿತ ಆದಿತ್ಯಾದಿ ನವಗ್ರಹ, ಮೃತ್ಯುಂಜಯ, ಉಮಾಮಹೇಶ್ವರ, ಲಕ್ಷ್ಮೀನಾರಾಯಣ, ಪ್ರಧಾನ ಮಲ್ಲಿಕಾರ್ಜುನಸ್ವಾಮಿಯ ಕಳಸಾರಾಧನೆ ಏರ್ಪಡಿಸಲಾಗಿದೆ. ಸಂಜೆ ಗಣಹೋಮ, ವಾಸ್ತು ಹೋಮ, ನವಗ್ರಹ ಹೋಮ, ಮಹಾಮೃತ್ಯುಂಜಯ ಹೋಮ, ಮಹಾರುದ್ರ ಹೋಮ, ಕಳಾಹೋಮ ಹಮ್ಮಿಕೊಳ್ಳಲಾಗಿದೆ ಎಂದು ಸ್ವಾಮೀಜಿ ಹೇಳಿದರು.

25ರಂದು ಶ್ರೀಮಲ್ಲಿಕಾರ್ಜುನಸ್ವಾಮಿ, ನಂದೀಶ್ವರ ಸ್ವಾಮಿ ವಿಗ್ರಹಗಳಿಗೆ ಪ್ರಾಣಪ್ರತಿಷ್ಠಾಪನೆ, ಗೋಪುರ ಕಲಶಾರೋಹಣ, ಕುಂಭಾಭಿಷೇಕ, ಮಹಾರುದ್ರಾಭಿಷೇಕ, ಜಯಾದಿ ಹೋಮಗಳು ನಡೆಯಲಿವೆ ಎಂದರು.

ಇಂದಿರಾ ಕ್ಯಾಂಟೀನ್‌ಗೆ ನಗರಸಭೆ ತಂಡ ಭೇಟಿ

ಗೌರಿಬಿದನೂರು: ನಗರದ ಇಂದಿರಾ ಕ್ಯಾಂಟೀನ್ ಗೆ ಶುಕ್ರವಾರ ಬೆಳಿಗ್ಗೆ ನಗರಸಭೆ ತಂಡ ದಿಢೀರ್ ಭೇಟಿ ನೀಡಿ ಸ್ವಚ್ಛತೆ, ತ್ಯಾಜ್ಯ ನೀರು ಹರಿಯುವ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಘಟನೆ ನಡೆಯಿತು. ನಗರಸಭಾಧ್ಯಕ್ಷ ಲಕ್ಷ್ಮೀನಾರಾಯಣ್, ಪೌರಾಯುಕ್ತೆ ಡಿ.ಎಂ.ಗೀತಾ, ಸದಸ್ಯ ಡಿ.ಜೆ.ಚಂದ್ರಮೋಹನ್ ಹಾಗೂ ಪರಿಸರ ಅಭಿಯಂತರ ಶಿವಶಂಕರ್ ನೇತೃತ್ವದ ತಂಡ ಹಠಾತ್ ಆಗಿ ಪರಿಶೀಲನೆ ನಡೆಸಿ ಕ್ಯಾಂಟೀನ್ ಸ್ವಚ್ಛತೆ ಬಗ್ಗೆ ಅಸಮಧಾನ ವ್ಯಕ್ತಪಡಿಸಿ ನೋಟೀಸ್ ನೀಡಲಾಗುವುದೆಂದು ಅಲ್ಲಿನ ವ್ಯವಸ್ಥಾಪಕರಿಗೆ ಎಚ್ಚರಿಕೆ ನೀಡಿದರು.

ಉಪಹಾರ ಸೇವಿಸಲು ಬಂದ ಗ್ರಾಹಕರ ಬಳಿ ರುಚಿಯ ಬಗ್ಗೆ ಮಾಹಿತಿ ಪಡೆದ ನಗರಸಭಾಧ್ಯಕ್ಷರು ಫ್ರಿಡ್ಜ್ ಕೆಟ್ಟುಹೋಗಿರುವ ಬಗ್ಗೆ ಮಾಹಿತಿ ಪಡೆದು ಹೊಸ ಫ್ರಿಡ್ಜ್ ಖರೀದಿ ಪ್ರಕ್ರಿಯೆಗೆ ಆದೇಶಿಸಿದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಅಮೋಘ ಸಾಧನೆಗಳ 2 ವರ್ಷಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶತಮಾನ ದಾಟಿದ ಪರಿಮಳದ ಪಯಣಕ್ಕೀಗ ಹೊಸ ತಿರುವು

ವಿಷನ್ 2028
2028ರ ವೇಳೆಗೆ ₹5,000 ಕೋಟಿ ವಹಿವಾಟಿನ ಗುರಿ

- ಸಾಧನೆಯಲ್ಲಿ ಹೊಸ ದಾಖಲೆಗಳು
- ಪ್ರೇರಣೆ ನೀಡುವ ನಾಯಕತ್ವ
- ಬೆಳವಣಿಗೆಗೆ ಹೆಗ್ಗುರಿಗಳು





"ಎಲ್ಲೋ ಮಳೆಯಾಗಿದೆ ಎಂದು ತಂಗಾಳಿಯು ಹೇಳುತಿದೆ...!"

ಮೊದಲ ಮಳೆ ಬಿದ್ದು ಮಣ್ಣಿನ ಘಮಲಿನೊಂದಿಗೆ ಬೀಸುವ ತಂಪಾದ ಗಾಳಿಯನ್ನು ಜೀವನದಲ್ಲಿ ಯಾರೊಬ್ಬರೂ ಮರೆಯಲು ಸಾಧ್ಯವಿಲ್ಲ. ಅದನ್ನು ಆಸ್ವಾದಿಸುತ್ತಾ ಕಣ್ಣು ಮುಚ್ಚಿ ಮೈಮರೆತುಬಿಡುತ್ತೇವೆ. ಅದು ನಮ್ಮ ಮೈ-ಮನಸ್ಸು ಪ್ರಫುಲ್ಲಗೊಳಿಸುತ್ತದೆ. ಅದಕ್ಕೆ ಸರಿಸಾಟಿಯಾದ ಇನ್ನೊಂದು ಘಮಲೆಂದರೆ ಮೈಸೂರು ಸ್ಯಾಂಡಲ್ ಸೋಪಿನ ಘಮಲು. ಎರಡೂ ಶುದ್ಧ-ಪರಿಶುದ್ಧ. ಎರಡೂ ಮನಸ್ಸಿಗೆ ಕೊಡುವ ಮುದ ಅವರ್ಣನೀಯ. ಮೈಸೂರು ಸ್ಯಾಂಡಲ್ ಸೋಪಿನ ಅಚ್ಚ ಗಂಧದ ಸುವಾಸನೆಯನ್ನೂ ಕಣ್ಣು ಮುಚ್ಚಿ ಅನುಭವಿಸಿ-ಬಿಡಬೇಕು ಎಂಬುದು ಕೂಡ ಅಷ್ಟೇ ಸತ್ಯ! ಗಾಳಿ ಬೀಸಿದರೆ 'ಗಂಧ ತೀಡಿದಂತಿರಬೇಕು' ಎಂಬ ಮಾತು ಮೈಸೂರು ಸ್ಯಾಂಡಲ್ ಸೋಪಿನ ವಿಚಾರದಲ್ಲಿ ಅಕ್ಷರಶಃ ನಿಜ.

ನಾಡಿನ ತುಂಬೆಲ್ಲಾ ಗಂಧದ ಪರಿಮಳ ಹರಡುವ ಕೈಂಕರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಸಂಸ್ಥೆ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಸಂಸ್ಥೆ (ಕೆಎಸ್‌ಡಿಎಲ್). ದೇಶ-ವಿದೇಶಗಳಲ್ಲಿ ಈ ಸಂಸ್ಥೆಯ ಹತ್ತಾರು ಉತ್ಪನ್ನಗಳು ನಿರಂತರವಾಗಿ ಸುವಾಸನೆಯನ್ನು ಬೀರುತ್ತಿವೆ. ವಿದೇಶದಿಂದ ರಜೆಗೆಂದು ಬಂದ ಪಯಣಿಗರು ಸಾರು-ಸಾಂಬಾರು ಪುಡಿಗಳ ಜೊತೆ ಮೈಸೂರು ಸ್ಯಾಂಡಲ್ ಸೋಪಿನ ಪ್ಯಾಕೆಟ್‌ಗಳನ್ನೂ ಸೇರಿಸಿಕೊಳ್ಳದಿದ್ದರೆ ಅವರ ಪಯಣವೇ ಅಪೂರ್ಣ! ಅಷ್ಟರಮಟ್ಟಿಗೆ ಸಂಸ್ಥೆಯ ಉತ್ಪನ್ನಗಳು ಜನಮಾನಸದಲ್ಲಿ ಅಚ್ಚೊತ್ತಿವೆ.

ಕೆಎಸ್‌ಡಿಎಲ್ ಇತ್ತೀಚಿನ ಕೆಲವು ವರ್ಷಗಳಲ್ಲಿ ಹತ್ತು- ಹಲವು ಹೊಚ್ಚಹೊಸ ಪ್ರಯೋಗಗಳನ್ನು ನಡೆಸುತ್ತಾ ಬಂದಿರುವುದು ವಿಶೇಷ. ಅದರ ಮಾರುಕಟ್ಟೆ ವಿಸ್ತರಿಸಿದೆ, ರಫ್ತು ಪ್ರಮಾಣ ಹೆಚ್ಚಿದೆ, ಉತ್ಪಾದನೆ ದುಪ್ಪಟ್ಟಾಗಿದೆ, ಕಾರ್ಯತತ್ಪರತೆ ಹೆಚ್ಚಿದೆ. ಎಲ್ಲಕ್ಕಿಂತ ಮಿಗಿಲಾಗಿ ಲಾಭ ಏರುಮುಖವಾಗಿದೆ. ಇವೆಲ್ಲವೂ ಸಮರ್ಥ ನಾಯಕತ್ವದ ಪ್ರತಿಫಲ. ನಮ್ಮ ನಾಡಿನ ಹೆಗ್ಗುರುತಾಗಿರುವ ಸಂಸ್ಥೆಗೆ ಹೆಗಲು ಕೊಟ್ಟವರ ಪರಿಶ್ರಮ-ಮಾರ್ಗದರ್ಶನದ ಫಲ. **ಒಂದು ಸಂಸ್ಥೆಗೆ ದಿಟ್ಟ, ಅಪೂರ್ವ ದೃಷ್ಟಿಕೋನದ ನಾಯಕತ್ವ ಸಿಕ್ಕಾಗ ಇಂತಹ ಅನೂಹ್ಯ ಅಚ್ಚರಿಗಳು ಸಂಭವಿಸುತ್ತವೆ ಎಂಬುದಕ್ಕೆ ಕೆಎಸ್‌ಡಿಎಲ್ ಸ್ಪಷ್ಟ ಉದಾಹರಣೆ.**

ಕೆಎಸ್‌ಡಿಎಲ್‌ಗೆ ಹೊಸ ಚೈತನ್ಯ ತಂದ ಸಮರ್ಥ ಸಾರಥ್ಯ

ಮೈಸೂರು ಸ್ಯಾಂಡಲ್ ಸೋಪ್ ಕಾರ್ಖಾನೆ ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ದಿವಾನ್ ಸರ್. ಎಂ. ವಿಶ್ವೇಶ್ವರಯ್ಯ ರವರ ಕನಸಿನ ಕೂಸಾಗಿ 1916 ರಲ್ಲಿ ಮೈಸೂರಿನಲ್ಲಿ ಸ್ಥಾಪನೆಯಾಯಿತು. 1918 ರಲ್ಲಿ ಕೇಂದ್ರ ಕಛೇರಿಯ ಶಾಖೆಯನ್ನು ಬೆಂಗಳೂರಿನಲ್ಲಿ ಆರಂಭಿಸಲಾಯಿತು. ಶತಮಾನದ ಇತಿಹಾಸವಿರುವ ಸಂಸ್ಥೆಯ ಸುದೀರ್ಘ ಹಾದಿಯಲ್ಲಿ ಸಾಧನೆಗಳ ಸರಮಾಲೆ ಆರಂಭವಾಗಿದೆ. 2023ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಕೆಎಸ್‌ಡಿಎಲ್ ದಿಕ್ಕು ಬದಲಾಯಿತು. ಇದಕ್ಕೆ ಮುಖ್ಯ ಕಾರಣ **ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಶ್ರೀ ಎಂ.ಬಿ.ಪಾಟೀಲ** ರವರು.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಮಾರ್ಗದರ್ಶನದಲ್ಲಿ ಶತಾಯಗತಾಯ ಈ ಸಂಸ್ಥೆಯನ್ನು ಉತ್ತುಂಗಕ್ಕೆ ಕೊಂಡೊಯ್ಯಬೇಕು ಎಂದು ಪಣತೊಟ್ಟರು. ಸಂಸ್ಥೆಗೆ ಹೊಸ ಕಾಯಕಲ್ಪವನ್ನು ನೀಡಲು ಬೇಕಾದ ಹತ್ತಾರು ಯೋಜನೆಗಳನ್ನು ರೂಪಿಸಿದರು. ಮಹಾರಾಜರು ಆರಂಭಿಸಿದ್ದ ಸಂಸ್ಥೆಯು ಜನಮಾನಸದಲ್ಲಿ, ಮಾರುಕಟ್ಟೆಯಲ್ಲಿ ವಿಜೃಂಭಿಸುವಂತೆ ಮಾಡಿದರು.

ತಮ್ಮದೇ ಆದ ವಿನೂತನ ಕಾರ್ಯತಂತ್ರಗಳಿಂದ ಮತ್ತಷ್ಟು ಬಲ ತುಂಬಲು ಬಂದವರು ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರದ ಶಾಸಕ **ಶ್ರೀ ಅಪ್ಪಾಜಿ ಸಿ.ಎಸ್.ನಾಡಗೌಡ**ರು. ಅಧ್ಯಕ್ಷರಾಗಿ ನೇಮಕಗೊಂಡ ಬಳಿಕ ಅವರು ಅನುಷ್ಠಾನಕ್ಕೆ ತಂದ ಹಲವು ಯೋಜನೆಗಳು ಭರ್ಜರಿ ಯಶಸ್ಸನ್ನು ಸಂಸ್ಥೆಗೆ ತಂದುಕೊಟ್ಟಿತು.

ರೂಪುರೇಖೆಗಳನ್ನೊಳಗೊಂಡ ಕಾರ್ಯಕ್ರಮಗಳನ್ನು ಕರಾರುವಾಕ್ಕಾಗಿ ಕಾರ್ಯರೂಪಕ್ಕೆ ತರಲು ದಕ್ಷ ಅಧಿಕಾರಿಯ ಅಗತ್ಯವಿತ್ತು. ಆಗ ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡವರು **ಡಾ. ಪ್ರಶಾಂತ್ ಪಿ.ಕೆ.ಎಂ.** (ಭಾ.ಆ.ಸೇ.). ಅಲ್ಲಿಂದ ಸಂಸ್ಥೆಯ ಕಾರ್ಯನಿರ್ವಹಣೆ ಇನ್ನಷ್ಟು ಚುರುಕಾಗಿ, ಯಶಸ್ಸಿನೆಡೆ ದಾಪುಗಾಲಿಟ್ಟಿತು.

ಈ ಮೂವರ ಸಮರ್ಥ ಮುಂದಾಳತ್ವ ಶತಮಾನದ ಈ ಸಂಸ್ಥೆಯನ್ನು ಚೈತನ್ಯಶೀಲಗೊಳಿಸಿ, ಪುನರುಜ್ಜೀವನಕ್ಕೆ ನಾಂದಿಯಾಯಿತು. ಕೆಎಸ್‌ಡಿಎಲ್ ಸಂಸ್ಥೆಯ ಕಳೆದ ಎರಡು ವರ್ಷಗಳ '**ಸಾಧನೆಯ ಪಟ್ಟಿ**' ಇದಕ್ಕೆ ಸಾಕ್ಷಿ. ಅದನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಲು ಅಧಿಕಾರಿ ವರ್ಗ, ಕಾರ್ಮಿಕ ವರ್ಗ, ಸಿಬ್ಬಂದಿ ವರ್ಗ ಟೊಂಕಕಟ್ಟಿ ನಿಂತಿದೆ.

20 ಅತ್ಯುತ್ಕೃಷ್ಟ ಉತ್ಪನ್ನಗಳು

ಸಂಸ್ಥೆಯು ಹಲವು ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಿದ್ದು ಸೌಂದರ್ಯ ವರ್ಧಕಗಳು, ಅಗರಬತ್ತಿಗಳು, ಮಾರ್ಜಕಗಳು ಸೇರಿದಂತೆ 20ಕ್ಕೂ ಹೆಚ್ಚು ಬಗೆಯ ಉತ್ಪನ್ನಗಳು ಇದರಲ್ಲಿವೆ. ಅವೆಲ್ಲವೂ ಉತ್ಕೃಷ್ಟ ಶ್ರೇಣಿಯವು ಎಂಬುದು ನಿರ್ವಿವಾದ. ಮೈಸೂರು ಸ್ಯಾಂಡಲ್ ಮಿಲೇನಿಯಂ, ಮೈಸೂರು ಸ್ಯಾಂಡಲ್ ಗೋಲ್ಡ್ ನಂತಹ ಐಷಾರಾಮಿ ಉತ್ಪನ್ನಗಳಿಂದ ಆರಂಭವಾಗುವ ಈ ಶ್ರೇಣಿ ನೀಮ್, ಅಲೋವೆರಾ ಸೋಪ್, ಧೂಪ್, ಅಗರಬತ್ತಿ, ಫಿನಾಯಿಲ್, ಬಾಡಿವಾಶ್, ವಾಷಿಂಗ್ ಪೌಡರ್, ಗಂಧದೆಣ್ಣೆ... ಹೀಗೆ ಮುಂದುವರಿಯುತ್ತದೆ.

ನಕಲಿ ಜಾಲಗಳಿಗೆ ಅಂಕುಶ

ಹೆಚ್ಚು ಜನಪ್ರಿಯತೆ ಪಡೆಯುವ ಯಾವುದೇ ಉತ್ಪನ್ನಗಳಿಗೆ, ಅಸಲಿಯ ಸೋಗು ಹಾಕಿಕೊಂಡ ನಕಲಿ ಉತ್ಪನ್ನಗಳು ಮಾರುಕಟ್ಟೆಗೆ ಲಗ್ಗೆ ಇಡುತ್ತವೆ. ದೇಶದ ನಾನಾ ಕಡೆಗಳಲ್ಲಿ ನಕಲಿ ಜಾಲಗಳಿರುವುದನ್ನು ಪತ್ತೆ ಮಾಡಿ, ಒಂದು ಸಾವಿರ ಕೋಟಿ ಮೌಲ್ಯದ ಸಾಮಗ್ರಿಗಳನ್ನು ವಶಪಡಿಸಿಕೊಂಡಿರುವುದು ನಕಲಿ/ಸೋಗು ಉತ್ಪನ್ನಗಳ ಮೇಲೆ ಸಂಸ್ಥೆಯು ಹದ್ದಿನ ಕಣ್ಣಿಟ್ಟಿರುವುದನ್ನು ತೋರಿಸಿಕೊಟ್ಟಿದೆ. ಇಂತಹ ಜಾಲಗಳ ಮೇಲೆ ದಾಳಿ ಮಾಡಿ ಕ್ರಮ ಜರುಗಿಸುವ ಕೆಲಸವನ್ನು ಕಳೆದ 10 ವರ್ಷಗಳಿಂದ ಮಾಡುತ್ತಲೇ ಬಂದಿದೆ. ಮೈಸೂರು ಸ್ಯಾಂಡಲ್ ಸೋಪ್ ಬ್ರಾಂಡ್‌ನ್ನು ದುರುಪಯೋಗ ಪಡಿಸಿಕೊಳ್ಳುವವರ ವಿರುದ್ಧ ಕಾನೂನು ಸಮರ ಚಾಲ್ತಿಯಲ್ಲಿದೆ.

ರಾಜಿಯಿಲ್ಲದ ಗುಣಮಟ್ಟ - ಯಶಸ್ಸಿನ ರಹಸ್ಯ

ಮೈಸೂರು ಸ್ಯಾಂಡಲ್ ಸೋಪ್‌ನ ಏಕೈಕ ಧ್ಯೇಯವಾಕ್ಯ - '**ರಾಜಿಯಿಲ್ಲದ ಗುಣಮಟ್ಟ**'. ದೇಶದ ಉದ್ದಗಲಕ್ಕೂ ಇರುವ ಗ್ರಾಹಕರು ಇಷ್ಟಪಡುವುದು ಕೂಡ ಇದೇ ಕಾರಣಕ್ಕೆ. 1916ರಲ್ಲಿ ಇದನ್ನು ಹುಟ್ಟುಹಾಕಿದ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಅದಕ್ಕೆ ಬಲ ತುಂಬಿದ ದಿವಾನ್ ಸರ್. ಎಂ.ವಿಶ್ವೇಶ್ವರಯ್ಯ ಅವರ ಉದ್ದೇಶವೂ ಇದೇ ಆಗಿತ್ತು. ಈಗಲೂ ತನ್ನ ಉತ್ಪನ್ನಗಳಿಗೆ ಬೇಕಾದ ಕಚ್ಚಾ ಸಾಮಗ್ರಿಗಳ ಸಂಗ್ರಹಣೆ ಮತ್ತು ಸಂಸ್ಕರಣೆಯನ್ನು ಕಣ್ಣಲ್ಲಿ ಕಣ್ಣಿಟ್ಟು ಮಾಡಲಾಗುತ್ತದೆ. ಈ ಎಲ್ಲಾ ಹಿನ್ನೆಲೆಯಲ್ಲಿ ನೂರಾ ಒಂಬತ್ತು ವರ್ಷಗಳ ಮೈಲುಗಲ್ಲುಗಳನ್ನು ದಾಟಿ ಮುಂದೆ ಸಾಗಿರುವ ಮೈಸೂರು ಸ್ಯಾಂಡಲ್ ಸೋಪ್ ಕಾರ್ಖಾನೆ ಈಗಲೂ ಅದೇ 'ತಾಜಾತನ'ವನ್ನು ಉಳಿಸಿಕೊಂಡಿದೆ. ಈಗಾಗಲೇ 25 ರಾಷ್ಟ್ರಗಳಲ್ಲಿ ಮೈಸೂರು ಸ್ಯಾಂಡಲ್ ಸೋಪ್ ಮತ್ತು ಇತರ ಉತ್ಪನ್ನಗಳು ಲಭ್ಯ. ಅದನ್ನು 80 ರಾಷ್ಟ್ರಗಳಿಗೆ ವಿಸ್ತರಿಸುವ ಮಹತ್ವಾಕಾಂಕ್ಷೆಯನ್ನು ಸಂಸ್ಥೆ ಹೊಂದಿದೆ. ಸಂಸ್ಥೆ ದೃಷ್ಟಿ ನೆಟ್ಟಿರುವ ಇನ್ನೊಂದು ಬಹುಮುಖ್ಯ ಗುರಿ ಎಂದರೆ 2028ರ ಹೊತ್ತಿಗೆ ಒಟ್ಟು ವಹಿವಾಟು ₹5,000 ಕೋಟಿ ದಾಟುವುದು. ಕ್ರಿಯಾಶೀಲತೆ ಹಾಗೂ ಸಾಧಿಸುವ ಛಲವನ್ನು ಇಡೀ ತಂಡವು ಮೈಗೂಡಿಸಿಕೊಂಡಿದ್ದು, ಹಲವು ಗುರುತರ ಗುರಿಗಳನ್ನು ಮೀರುವ ಲಕ್ಷಣಗಳು ನಿಚ್ಚಳವಾಗಿವೆ.

ಕೆಎಸ್‌ಡಿಎಲ್ ಸಂಸ್ಥೆಯು ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸಿ, ಲಾಭದಾಯಕವಾಗಿ ಮುನ್ನಡೆಯುತ್ತಿದೆ. ಒಂದು ತಿಂಗಳ ಅವಧಿಯಲ್ಲಿ ಸೋಪ್‌ಗಳ ಉತ್ಪಾದನೆ 4,144 ಮೆಟ್ರಿಕ್ ಟನ್ ದಾಟಿರುವುದು ವಿಶೇಷ. ಈ ಮೂಲಕ ಸಂಸ್ಥೆ ಹೊಸ ಮೈಲುಗಲ್ಲನ್ನು ಸ್ಥಾಪಿಸಿದೆ.

- ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಕೆಎಸ್‌ಡಿಎಲ್ ಸಂಸ್ಥೆಯು ನಮ್ಮ ರಾಜ್ಯದ ಹೆಮ್ಮೆ. ಮೈಸೂರು ಮಹಾರಾಜರಿಂದ ಸ್ಥಾಪಿತವಾದ ಈ ಸಂಸ್ಥೆಯು ನಮ್ಮ ಸರ್ಕಾರದ ಅವಧಿಯಲ್ಲಿ ಸಾಧನೆಗಳ ಮೆಟ್ಟಿಲನ್ನೇರುತ್ತಿರುವುದು ಸಂತಸ ತಂದಿದೆ.

- ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಕೆಎಸ್‌ಡಿಎಲ್‌ಗೆ ಮರುಜೀವ ತುಂಬಲು ನಾವು ನಡೆಸಿದ ಸತತ ಪ್ರಯತ್ನಗಳಿಗೆ ಫಲ ಸಿಗುತ್ತಿದೆ. ಈ ಹಿನ್ನೆಲೆಯಲ್ಲಿ ಸುವಾಸನೆಯುಕ್ತ ಸೋಪ್, ಜೆಲ್‌ಗಳು, ಕ್ಯಾಂಡಲ್‌ಗಳಂತಹ ವಿಭಿನ್ನ ಶ್ರೇಣಿಗಳನ್ನು ಸಂಸ್ಥೆಯಿಂದ ಬಿಡುಗಡೆ ಮಾಡಲಾಗುತ್ತಿದೆ. ನಮ್ಮ ಗುರಿ 2028ರ ವೇಳೆಗೆ ₹5,000 ಕೋಟಿ ವಹಿವಾಟು ನಡೆಸುವುದು.

- ಶ್ರೀ ಎಂ.ಬಿ. ಪಾಟೀಲ
ಮಾನ್ಯ ಸಚಿವರು, ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಲಭ್ಯ ಅಭಿವೃದ್ಧಿ

ಕೆಎಸ್‌ಡಿಎಲ್ ಸಂಸ್ಥೆಯ ಪ್ರಗತಿಗಾಗಿ ಕೈಗೊಂಡ ಹೊಸ ನೀತಿಗಳು ಹಾಗೂ ಜಾಗತಿಕ ಬೇಡಿಕೆಗೆ ಅನುಗುಣವಾದ ತಂತ್ರಜ್ಞಾನ ರೂಪಾಂತರಗಳು ಇಂದು ಫಲ ನೀಡುತ್ತಿವೆ. ಪರಂಪರೆಗೂ ಹೆಗ್ಗುರುತಿಗೂ ಇಂದಿನ ಆಧುನಿಕತೆ ಬೆರೆತು ಉತ್ಕೃಷ್ಟತೆಯ ಹೊಸ ಅಧ್ಯಾಯ ಬರೆಯುತ್ತಿದೆ.

- ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ
ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು, ಕೆಎಸ್‌ಡಿಎಲ್

ಕೆಎಸ್‌ಡಿಎಲ್ ಸಂಸ್ಥೆಯು ತನ್ನ ಉತ್ಪಾದನಾ ಸಾಮರ್ಥ್ಯವನ್ನೂ, ಮಾರುಕಟ್ಟೆ ವ್ಯಾಪ್ತಿಯನ್ನೂ ಗಂಭೀರವಾಗಿ ವಿಸ್ತರಿಸುತ್ತಿರುವುದು ಶ್ಲಾಘನೀಯ.

- ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ.
ಪ್ರಧಾನ ಕಾರ್ಯದರ್ಶಿಗಳು
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ

ಕಳೆದ 3 ವರ್ಷಗಳಿಂದ ಉತ್ಪನ್ನಗಳ ಬೆಲೆಯಲ್ಲಿ ಏರಿಕೆ ಮಾಡಿಲ್ಲ. ವಿಶ್ವವಿಖ್ಯಾತ ಸಾಬೂನು ಕೈಗೆಟುಕುವ ದರದಲ್ಲಿ ಸಿಗಲಿ ಎಂಬುದು ನಮ್ಮ ಉದ್ದೇಶ. ಸರ್ಕಾರದ ನಾಯಕತ್ವ ಮತ್ತು ಸಂಸ್ಥೆಯ ಕಾರ್ಯತತ್ಪರತೆ ಬೆಳವಣಿಗೆಗೆ ಮೂಲಮಂತ್ರವಾಗಿದೆ.

- ಡಾ. ಪ್ರಶಾಂತ್ ಪಿಕೆಎಂ, ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಡಿಎಲ್

ಲಾಭ, ವಹಿವಾಟು - ಎರಡರಲ್ಲೂ ದಾಖಲೆ



ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸಂಸ್ಥೆಯ ಉತ್ಪಾದನೆ, ವಹಿವಾಟು, ಲಾಭದ ಪ್ರಮಾಣವು ಅದರ ಕಾರ್ಯನಿರ್ವಹಣೆಗೆ ಕನ್ನಡಿ ಹಿಡಿದಂತಿದೆ. 2022-2023ರಲ್ಲಿ ₹1,375 ಕೋಟಿ ಇದ್ದ ವಹಿವಾಟು 2024-25ರ ಹೊತ್ತಿಗೆ ₹1,788 ಕೋಟಿಗೆ ಜಿಗಿದಿದೆ. ಅಂದರೆ ನಿವ್ವಳ ಲಾಭ ಮೂರು ವರ್ಷಗಳಲ್ಲಿ ₹182 ಕೋಟಿಯಿಂದ ₹415 ಕೋಟಿಗೆ ಏರಿಕೆ ಕಂಡಿದೆ. ಇದು ಕೆಎಸ್‌ಡಿಎಲ್‌ನ ಐತಿಹಾಸಿಕ ಸಾಧನೆ.

ವಹಿವಾಟು ಅಂಕಿ-ಅಂಶಗಳು

ವರ್ಷ	ಒಟ್ಟು ವಹಿವಾಟು	ನಿವ್ವಳ ಲಾಭ	ಡಿವಿಡೆಂಡ್
2022–23	₹1,375 Cr	₹182 Cr	₹54.8 Cr
2023–24	₹1,571 Cr	₹362 Cr	₹108.6 Cr
2024–25	₹1,788 Cr	₹415 Cr	₹120 Cr

ವೇಗದ ಉತ್ಪಾದನೆ

ವರ್ಷ	ಗುರಿ (MT)	ಸಾಧನೆ (MT)	ಸಾಧನೆ %
2022–23	31,481	33,962	108%
2023–24	35,293	37,917	107%
2024–25	38,188	42,172 (est.)	110%

- ದೈನಂದಿನ ಉತ್ಪಾದನೆ: 1.8 ದಶಲಕ್ಷ ಸಾಬೂನುಗಳು
- ಒಟ್ಟು ಉತ್ಪಾದನೆಯಲ್ಲಿ ಸಾಬೂನುಗಳ ಪ್ರಮಾಣ 70%

ಅತ್ಯಾಧುನಿಕ ವಾಣಿಜ್ಯ ಸಂಕೀರ್ಣಕ್ಕೆ ಸಿದ್ಧತೆ

ಸಂಸ್ಥೆಯು ನಗರದ ಕೇಂದ್ರ ಭಾಗದಲ್ಲಿರುವ ವಿಶಾಲ ಪ್ರದೇಶವನ್ನು ಸದ್ಬಳಕೆ ಮಾಡಿಕೊಳ್ಳಲು ನಿರ್ಧರಿಸಿದೆ. ಸುಮಾರು ₹250 ಕೋಟಿ ವೆಚ್ಚದಲ್ಲಿ ಬೃಹತ್ ವಾಣಿಜ್ಯ ಸಂಕೀರ್ಣ ನಿರ್ಮಿಸಲು ನೀಲನಕ್ಷೆ ಸಿದ್ಧಗೊಂಡಿದೆ. ಈ ಸಂಕೀರ್ಣದಲ್ಲಿ ಆಧುನಿಕ ಮಾರುಕಟ್ಟೆ ವ್ಯವಸ್ಥೆಯನ್ನು ಜಾರಿಗೆ ತರುವುದು, ಜೊತೆಗೆ ಬಾಡಿಗೆ ರೂಪದಲ್ಲಿಯೂ ಸಂಪನ್ಮೂಲ ಕ್ರೋಢೀಕರಣ ಮಾಡುವ ನಿರೀಕ್ಷೆ ಹೊಂದಲಾಗಿದೆ.

ಗಂಧದ ಮರ ಬೆಳೆಯಲು ಉತ್ತೇಜನ

ಗಂಧದ ಮರಗಳನ್ನು ಬೆಳೆಯಲು ರೈತರಿಗೆ ಉತ್ತೇಜನ ನೀಡಲು 'ಗ್ರೋ ಮೋರ್ ಸ್ಯಾಂಡಲ್' ಕಾರ್ಯಕ್ರಮ ರೂಪಿಸಿದೆ. ರೈತರಿಗೆ 3 ವರ್ಷಗಳ ಅವಧಿಯಲ್ಲಿ ₹500 ಪ್ರೋತ್ಸಾಹಧನವನ್ನು ನೀಡಲಾಗುತ್ತದೆ. ಪ್ರತಿ ವರ್ಷ 1000 ಎಕರೆಯಲ್ಲಿ ಶ್ರೀಗಂಧದ ನೆಡುತೋಪು ನಿರ್ಮಾಣ ಮಾಡಿ, 10 ವರ್ಷಗಳ ಅವಧಿಯಲ್ಲಿ 10,000 ಎಕರೆ ವಿಸ್ತೀರ್ಣದಲ್ಲಿ ನೆಡುತೋಪು ಬೆಳೆಸುವ ಗುರಿ ಹೊಂದಲಾಗಿದೆ. ಈ ಹಿನ್ನೆಲೆಯಲ್ಲಿ 713 ರೈತರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ಕೆಎಸ್‌ಡಿಎಲ್ ಸಂಸ್ಥೆಯು 2024-25ನೇ ಆರ್ಥಿಕ ವರ್ಷದಲ್ಲಿ ಮಾರಾಟ ಮತ್ತು ಲಾಭದಲ್ಲಿ ಭಾರತದ ಪ್ರಮುಖ ಕಂಪನಿಗಳು ಹಾಗೂ ಎಫ್‌ಎಂಸಿಜಿ ದಿಗ್ಗಜರನ್ನು ಹಿಂದಿಕ್ಕಿದೆ.

- **14%** ಮಾರಾಟದ ಬೆಳವಣಿಗೆ ದರ
- **15%** ಲಾಭದ ಬೆಳವಣಿಗೆ ದರ

ತಮನ್ನಾ ಭಾಟಿಯಾ ರಾಯಭಾರಿ



ಕೆ.ಎಸ್.ಡಿ.ಎಲ್. ಸಂಸ್ಥೆಯು ಮೈಸೂರು ಸ್ಯಾಂಡಲ್ ಫೇಸ್ ವಾಶ್ ಉತ್ಪನ್ನವನ್ನು ದೇಶದಾದ್ಯಂತ ಗ್ರಾಹಕರಿಗೆ ತಲುಪಿಸುವ ಉದ್ದೇಶದಿಂದ ಬಹುಭಾಷಾ ನಟಿಯಾಗಿರುವ ಹಾಗೂ ದೇಶದ ಉದ್ದಗಲಕ್ಕೂ ಅಪಾರ ಸಂಖ್ಯೆಯ ಅಭಿಮಾನಿಗಳನ್ನು ಹೊಂದಿರುವ ತಮನ್ನಾ ಭಾಟಿಯಾ ಅವರನ್ನು ರೂಪದರ್ಶಿಯಾಗಿ ನಿಯೋಜಿಸಿದೆ. ಈ ಕ್ರಮ ಕರ್ನಾಟಕದಿಂದಾಚೆಗೆ ಉತ್ಪನ್ನಗಳ ಮಾರುಕಟ್ಟೆಯನ್ನು ವಿಸ್ತರಿಸುವ ಕಾರ್ಯತಂತ್ರದ ಭಾಗವಾಗಿದೆ.

ಅಮೆರಿಕಾದಲ್ಲಿ ಖ್ಯಾತ ಬಾಣಸಿಗ ಶ್ರೀ ವಿಕಾಸ್ ಖನ್ನಾ ಅವರು ಮಾರ್ಬಲ್ ಬಾಕ್ಸ್ ನಲ್ಲಿ ಮೈಸೂರು ಸ್ಯಾಂಡಲ್ ಸೋಪ್ ಇರಿಸಿ ಖ್ಯಾತ ನಟಿ ಆನಿ ಜಾಕ್ವೆಲಿನ್ ಹ್ಯಾಥ್ವೇ ಅವರಿಗೆ ಉಡುಗೊರೆ ನೀಡಿ ನಮ್ಮ ಭವ್ಯ ಪರಂಪರೆಯನ್ನು ಪ್ರಪಂಚದ ಮುಂದೆ ಪ್ರದರ್ಶಿಸಿದ್ದಾರೆ. ಶ್ರೀ ಎಂ.ಬಿ.ಪಾಟೀಲ ಅವರು ಇಲಾಖೆಯ ನಿಯೋಗದೊಂದಿಗೆ ಅಮೆರಿಕಾ ಪ್ರವಾಸದಲ್ಲಿದ್ದಾಗ ಶ್ರೀ ವಿಕಾಸ್ ಖನ್ನಾ ಅವರನ್ನು ಭೇಟಿ ಮಾಡಿ ಅವರಿಗೆ ಮೈಸೂರ್ ಸ್ಯಾಂಡಲ್ ಉತ್ಪನ್ನಗಳನ್ನು ನೀಡಿ ಮೆಚ್ಚುಗೆ ವ್ಯಕ್ತಪಡಿಸಿದರು.

'Going to start buying again': Anand Mahindra is all nostalgic about Mysore Sandal soap

Dec 22, 2024 09:10 AM IST

Mysore Sandal: Anand Mahindra shared a video of how the soaps are being manufactured and said that he is going to buy them again.

ಮಹೀಂದ್ರಾ ಸಮೂಹದ ಅಧ್ಯಕ್ಷರಾದ ಶ್ರೀ ಆನಂದ್ ಮಹೀಂದ್ರಾ ಅವರು, ಕೆಎಸ್‌ಡಿಎಲ್ ತಯಾರಿಸುವ ಪ್ರಸಿದ್ಧ ಮೈಸೂರು ಸ್ಯಾಂಡಲ್ ಸೋಪ್ ಬಗ್ಗೆ ತಮ್ಮ ಹಳೆಯ ನೆನಪುಗಳನ್ನು ಬಿಚ್ಚಿಟ್ಟರು. ಸೋಪುಗಳನ್ನು ಹೇಗೆ ತಯಾರಿಸಲಾಗುತ್ತಿದೆ ಎಂಬುದರ ವೀಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಅವರು, ಅವುಗಳನ್ನು ಮತ್ತೆ ಖರೀದಿಸುವುದಾಗಿ ಕೂಡ ಹೇಳಿದರು.

ಮುಂದಿನ ಕಾರ್ಯಚಟುವಟಿಕೆಗಳು

ವಾರ್ಷಿಕ ಆನ್‌ಲೈನ್ ಮಾರಾಟವನ್ನು **₹100 ಕೋಟಿ**ಗೆ ಹೆಚ್ಚಿಸಲು **ಇ-ಕಾಮರ್ಸ್** ವೇದಿಕೆಗಳೊಂದಿಗೆ ಪಾಲುದಾರಿಕೆ

ಪ್ರಚಾರ ಮತ್ತು ಮಾರಾಟ ಹೆಚ್ಚಿಸಲು ರಾಜ್ಯಾದ್ಯಂತ '**ಮೈಸೂರ್ ಸ್ಯಾಂಡಲ್ ಸೋಪ್ ಮೇಳ**' ಆಯೋಜನೆ

ಉತ್ತರ ಕರ್ನಾಟಕ ಭಾಗದಲ್ಲಿ ಮಾರಾಟ ವಿಸ್ತರಿಸಲು ವಿಜಯಪುರದಲ್ಲಿ ಉತ್ಪಾದನಾ ಘಟಕ ಸ್ಥಾಪಿಸಲು ಯೋಜನೆ. ಇದರಿಂದ ಸಾರಿಗೆ ವೆಚ್ಚದಲ್ಲಿ ಉಳಿತಾಯ.

ರಫ್ತು ಹೆಚ್ಚಿಸುವುದು
25 ರಾಷ್ಟ್ರಗಳಲ್ಲಿ ಮಾರುಕಟ್ಟೆ, **2026**ರ ವೇಳೆಗೆ **80** ರಾಷ್ಟ್ರಗಳಿಗೆ ವ್ಯಾಪಿಸುವ ಗುರಿ
ಈಶಾನ್ಯ ಭಾರತ, ಪಂಜಾಬ್, ರಾಜಸ್ಥಾನ, ಜಮ್ಮು-ಕಾಶ್ಮೀರ ರಾಜ್ಯಗಳಿಗೆ ಮಾರುಕಟ್ಟೆ ವಿಸ್ತರಣೆ

ಹಾಲಿ ಘಟಕಗಳಿಗೆ ಆಧುನಿಕ ಸ್ಪರ್ಶ ನೀಡಿ **ಉತ್ಪಾದನೆಯನ್ನು ದ್ವಿಗುಣಗೊಳಿಸುವುದು**

ಸಂದಿಗ್ಧ ಪರಿಸ್ಥಿತಿಯಲ್ಲಿದ್ದ ಐತಿಹಾಸಿಕ ಸಂಸ್ಥೆಯನ್ನು ಯಶಸ್ವಿನ ಉತ್ತುಂಗಕ್ಕೆ ಏರಿಸಿದ ಕರ್ಮಯೋಗಿ ಶ್ರೀ ಎಂ.ಬಿ. ಪಾಟೀಲ

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು. -ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಸಂಸ್ಥೆಯ ಈ ಅದ್ಭುತ ಸಾಧನೆಗೆ ಕಾರಣರಾದ ಕಾರ್ಮಿಕರು, ಸಿಬ್ಬಂದಿ ವರ್ಗ, ನೌಕರರ ಸಂಘ, ಅಧಿಕಾರಿ ವೃಂದ, ಪ್ರಧಾನ ವ್ಯವಸ್ಥಾಪಕರು-ಆಡಳಿತ, ಪ್ರಧಾನ ವ್ಯವಸ್ಥಾಪಕರು-ಹಣಕಾಸು, ಎಲ್ಲರಿಗೂ ಅವರ ಅಮೂಲ್ಯ ಕೊಡುಗೆಗಳಿಗೆ ಧನ್ಯವಾದಗಳು.

ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್

ವಿಶ್ವವಾಣಿ ಗ್ಲೋಬಲ್ ಫೋರಂ ಅರ್ಪಿಸುವ

ಕರ್ನಾಟಕದ ಅಪರೂಪದ ಸಾಧಕರಿಗೆ

ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ

ಟಿಬಿಲಿಸಿ
ಜಾರ್ಜಿಯಾ

ಕನ್ನಡಿಗರ ಜಾಗತಿಕ ಸಮಾವೇಶ

ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ವಿದೇಶದಲ್ಲಿ ನಾಡಿನ ಸಾಧಕರನ್ನು ಸನ್ಮಾನಿಸುವ ವಿಶ್ವವಾಣಿಯ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮದ ವೇಳೆ ನಾನಾ ಕ್ಷೇತ್ರಗಳ ಗಣ್ಯರನ್ನು ಸನ್ಮಾನಿಸುವುದರ ಜತೆ ಭಾರತ ಹಾಗೂ ಆಯಾ ದೇಶದ ಕಲೆ, ಸಂಸ್ಕೃತಿಯನ್ನು ಮೇಳೈಸುವ ಪ್ರಯತ್ನದಲ್ಲಿ ಪತ್ರಿಕೆ ಯಶಸ್ವಿಯಾಗಿದೆ. ಕಳೆದೊಂದು ವರ್ಷದ ಅವಧಿಯಲ್ಲಿ ಎಂಟು ದೇಶಗಳಲ್ಲಿ ನಡೆದ ಯಶಸ್ವಿ ಕಾರ್ಯಕ್ರಮದ ಬಳಿಕ ಇದೀಗ ಕರುನಾಡಿನ 17 ಸಾಧಕರಿಗೆ ಜಾರ್ಜಿಯಾದ ಟಿಬಿಲಿಸಿಯಲ್ಲಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಸಾಧಕರಿಗೆ ಹೊಸೂರು-ಬೈಲಹೊಂಗಲ ಶ್ರೀ ಸ್ವಪ್ರಭು ನೀಲಕಂಠ ಮಹಾಸ್ವಾಮೀಜಿ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಜಾರ್ಜಿಯಾ ದೇಶದ ಪ್ರಸಿದ್ಧ ನಟ ನಿಕೋಲಾಜ್ ಸುಲುಕಿಜ್, ಜಾರ್ಜಿಯಾದ ಪ್ರಸಿದ್ಧ ಲೇಖಕ ಜಾರ್ಜಿ ಕೆಕೆಲಿಡ್ಜ್, ಬಿಷಪ್ ಸಿಮಿಯೋನ್ ಹಾಗೂ ಕಲ್ಚರಲ್ ಡೈವರ್ಸಿಟಿ ಆಫ್ ಪೀಸ್‌ಫುಲ್ ಫ್ಯೂಚರ್ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ದರ್ಪಣ್ ಪರಾಶರ್ ಸೇರಿದಂತೆ ಹಲವರ ಸಮ್ಮುಖದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಟಿಬಿಲಿಸಿಯಲ್ಲಿ ಕರುನಾಡಿನ ಸಾಧಕರಿಗೆ ಸನ್ಮಾನ

ಶ್ರೀ ಸ್ವಪ್ರಭು ನೀಲಕಂಠ ಮಹಾಸ್ವಾಮೀಜಿ ಮೂರು ಸಾವಿರಮಠ, ಹೊಸೂರು - ಬೈಲಹೊಂಗಲ

ಪ್ರವೀಣ್ ಶೆಟ್ಟಿ, ಹೋಟೆಲ್ ಉದ್ಯಮಿ, ಅನಿವಾಸಿ ಭಾರತೀಯರು ದುಬೈ

ಬಿ.ಎಂ ಸುಕುಮಾರ್ ಶೆಟ್ಟಿ, ಮಾಜಿ ಶಾಸಕರು

ಯಜ್ಞನಾರಾಯಣ ಕಮ್ಮಾಜೆ

ಮಂಜುನಾಥ್ ಶಿವಪ್ಪ ಮಕ್ಕಳಗೇರಿ

ಶ್ರೀನಗರ ಕಿಟ್ಟಿ ಪರವಾಗಿ ನಾಗರಾಜ್ ಅಡಿಗ

ಮಮತಾ ರವಿರಾಜ್, ಓಷನ್ ಬ್ಲೂ ವೆಲ್ ನೆಸ್

ಹನುಮೇಗೌಡ ಬಿ.ಆರ್

ಡಾ. ಗಂಗಾಧರ್ ಸಜ್ಜನ್

ಆತ್ಮ ವಿ ಹಿರೇಮಠ್

ರೇಖಾ ಭಟ್, ಕೋಟೆಮನೆ

ಸತೀಶ್ ಕುಮಾರ್ ಬಿ.ಎಸ್

ಬಿ.ಸಿ ಜಯಪ್ರಸಾದ್ (ಆರ್ಗಾನಿಕ್ ಫಾರ್ಮರ್), ಹಾಸನ

ಮಧುಕೇಶ್ವರ ಜನಕ ಹೆಗಡೆ

ಸಿ. ಎಂ. ಧನಂಜಯ, ವಕೀಲರು ಹಾಗೂ ಕೆಪಿಸಿಸಿ ಕಾನೂನು ಮತ್ತು ಮಾನವ ಹಕ್ಕು ವಿಭಾಗದ ಅಧ್ಯಕ್ಷರು

ಹನುಮಂತ ರಾವ್ ಭೂಸನೂರ್

ಅನಿತಾ ರಾಘವೇಂದ್ರ ಹೆಗಡೆ

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಾರ್ಜಿಯಾದ ಪ್ರಸಿದ್ಧ ಲೇಖಕ ಜಾರ್ಜಿ ಕೆಕೆಲಿಡ್ಜ್, ಬಿಷಪ್ ಸಿಮಿಯೋನ್ ಹಾಗೂ ಕಲ್ಚರಲ್ ಡೈವರ್ಸಿಟಿ ಆಫ್ ಪೀಸ್‌ಫುಲ್ ಫ್ಯೂಚರ್ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ದರ್ಪಣ್ ಪರಾಶರ್ ಅವರನ್ನು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಸನ್ಮಾನಿಸಿದರು.

ಗ್ಲೋಬಲ್ ಅಚೀವರ್ಸ್ ಸಮ್ಮೇಳನ | 17 ಮಂದಿ ಕನ್ನಡ ನಾಡಿನ ಸಾಧಕರಿಗೆ ಅಂತಾರಾಷ್ಟ್ರೀಯ ಪ್ರಶಸ್ತಿ ಪ್ರದಾನ

ಜಾರ್ಜಿಯಾದಲ್ಲಿ ಜನಮನ ಸೆಳೆದ ವಿಶ್ವವಾಣಿ ಸಮಾರಂಭ

ಪ್ರತ್ಯಕ್ಷ ವರದಿ: ರಾಜು ಅಡಕಳ್ಳಿ

ಜಾರ್ಜಿಯಾದ ರಾಜಧಾನಿ ಟಿಬಿಲಿಸಿ ಸುಂದರ ಗಿರಿಧಾಮ. ಇಲ್ಲಿಯ ತಂಪು ಇಂಪಿನ ವಾತಾವರಣ ಮನಸ್ಸಿಗೂ ಆರಾಮ. ಇಲ್ಲಿ ಎಲ್ಲೆಡೆ ಹಸಿರು ಸೂಸುವ ನಿಸರ್ಗ. ಸ್ವರ್ಗದ ತುಣು ಕೊಂದು ಜಾರಿ ಬಿದ್ದಂತಿರುವ ಈ ಅಪ್ರತಿಮ ತಾಣದಲ್ಲಿ 'ವಿಶ್ವವಾಣಿ' ಏರ್ಪಡಿಸಿದ ಗ್ಲೋಬಲ್ ಅಚೀವರ್ಸ್ ಸಮ್ಮೇಳನ ದಲ್ಲಿ ಕನ್ನಡ ನಾಡಿದ 17 ಸಾಧಕರಿಗೆ ಅಂತಾ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ ಸಂಪನ್ನಗೊಂಡಿತು.

ಜಾರ್ಜಿಯಾದ ಜನಪ್ರತಿನಿಧಿಗಳು, ರಾಯಭಾರ ಕಚೇರಿಯ ಅಧಿಕಾರಿಗಳು, ಅನಿವಾಸಿ ಭಾರತೀಯರು ಮತ್ತು ಬೆಂಗಳೂರಿ ನಿಂದ ತೆರಳಿದ್ದ ವಿಶೇಷ ನಿಯೋಗದ ಸದಸ್ಯರ ಸಮ್ಮುಖದಲ್ಲಿ ಜಾರ್ಜಿಯಾ ಕಲಾವಿದರ ಆಕರ್ಷಕ ಸಾಂಸ್ಕೃತಿಕ ಕಾರ್ಯಕ್ರಮ ಗಳ ಸಮ್ಮಿಲನದೊಂದಿಗೆ ಈ ಕಾರ್ಯಕ್ರಮ ನಡೆದಿದ್ದು ವಿಶೇಷ. ಕನ್ನಡ ನಾಡಿನಲ್ಲಿದ್ದು ಕಲೆ, ಶಿಕ್ಷಣ, ಸಮಾಜ ಸೇವೆ, ಕೃಷಿ, ಕೈಗಾರಿಕೋದ್ಯಮ, ರಾಜಕಾರಣ, ಹೋಟೆಲ್, ಉದ್ಯಮ, ಸಂಗೀತ ಸೇರಿದಂತೆ ಹತ್ತಾರು ಕ್ಷೇತ್ರಗಳಲ್ಲಿ ತಮ್ಮದೇ ಆದ ವಿಶಿಷ್ಟ ಸಾಧನೆ ಕೈಗೊಂಡ ಸ್ಫೂರ್ತಿವಂತರಿಗೆ ಮತ್ತು ಅನಿವಾಸಿ ಕನ್ನಡಿಗರಿಗೆ ವಿಶ್ವವಾಣಿಯ ಅಂತಾರಾಷ್ಟ್ರೀಯ ಪ್ರಶಸ್ತಿಯ ಕಿರೀಟ ತೊಡಿಸಿ ಗೌರವಿಸಿದ್ದು ವಿಶೇಷವಾಗಿತ್ತು.

ಒಂದು ವಾರ ಕಾಲ ಪ್ರವಾಸ

ವಿಶ್ವವಾಣಿಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರ ನೇತೃತ್ವದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತಲ್ಲದೇ, ಜಾರ್ಜಿಯಾ ದೇಶದ ಐತಿಹಾಸಿಕ ಮತ್ತು ಅಪರೂಪದ ತಾಣ ಗಳನ್ನು ವಿಶ್ವವಾಣಿಯ ನಿಯೋಗಕ್ಕೆ ಪರಿಚಯಿಸುವ ಒಂದು ವಾರ ಕಾಲದ ಪ್ರವಾಸವನ್ನೂ ಏರ್ಪಡಿಸಿರುವುದು ಗಮನಾರ್ಹ.

ಜಾರ್ಜಿಯಾದ ಟಿಬಿಲಿಸಿಯಲ್ಲಿ ಆಯೋಜಿಸಿದ್ದ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಕಾರ್ಯಕ್ರಮವನ್ನು ಸಸಿ ನೆಡುವ ಮೂಲಕ ಹೊಸೂರು-ಬೈಲಹೊಂಗಲ ಶ್ರೀ ಸ್ವಪ್ರಭು ನೀಲಕಂಠ ಮಹಾಸ್ವಾಮೀಜಿ ಅವರು ಉದ್ಘಾಟಿಸಿದರು. ಈ ವೇಳೆ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಜಾರ್ಜಿಯಾ ದೇಶದ ಪ್ರಸಿದ್ಧ ನಟ ನಿಕೋಲಾಜ್ ಸುಲುಕಿಜ್, ಜಾರ್ಜಿಯಾದ ಪ್ರಸಿದ್ಧ ಲೇಖಕ ಜಾರ್ಜಿ ಕೆಕೆಲಿಡ್ಜ್ ಹಾಗೂ ಕಲ್ಚರಲ್ ಡೈವರ್ಸಿಟಿ ಆಫ್ ಪೀಸ್‌ಫುಲ್ ಫ್ಯೂಚರ್ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ದರ್ಪಣ್ ಪರಾಶರ್ ಸೇರಿದಂತೆ ಇತರರು ಇದ್ದರು.

ಸಾಧನೆ ಮಾಡಿದರೆ ಮಾತ್ರ ಬದುಕು ಸಾರ್ಥಕ

ಸಮಾರಂಭವನ್ನು ಉದ್ಘಾಟಿಸಿದ ಬೈಲಹೊಂಗಲದ ಮೂರು ಸಾವಿರ ಮಠದ ಶ್ರೀ ಪ್ರಭು ನೀಲಕಂಠ ಮಹಾ ಸ್ವಾಮೀಜಿ ಯವರು, ಜಾರ್ಜಿಯಾದಂತಹ ದೂರದ ದೇಶದಲ್ಲಿ ಇಂತಹ ಅರ್ಥಪೂರ್ಣ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಸಂಘಟಿಸು ವುದು ಸುಲಭದ ಕೆಲಸವಲ್ಲ. ಈ ನಿಟ್ಟಿನಲ್ಲಿ ವಿಶ್ವವಾಣಿಯು ಅಭಿನಂದನಾರ್ಹ ಎಂದು ಪ್ರಶಂಸಿಸಿದರು. ಮನುಷ್ಯ ಸಾಧನೆ ಮಾಡಿದರೆ ಮಾತ್ರ ಆತನ ಬದುಕು ಸಾರ್ಥಕ. ಸಾಧಕರಿಗೆ ಪ್ರೋತ್ಸಾಹ ನೀಡುವ ಕೆಲಸವೂ ನಮ್ಮಿಂದ ಆಗಬೇಕು. ಇಂತಹ ಕೆಲಸಕ್ಕೆ ವಿಶ್ವವಾಣಿಯಂತಹ ಮಾಧ್ಯಮ ಸಂಸ್ಥೆಯೂ ಕೈಗೂಡಿಸಿ ರುವುದು ವಿಶೇಷ. ಕನ್ನಡಿಗರ ಸಾಧನೆಯನ್ನು ಜಗತ್ತಿಗೆ ಪರಿಚಯಿಸಿದರೆ ನಮ್ಮ ಕರ್ನಾಟಕಕ್ಕೂ ಅದು ದೊಡ್ಡ ಹೆಮ್ಮೆ ಎಂದು ಸ್ವಾಮೀಜಿಯವರು ಶ್ಲಾಘಿಸಿದರು.

ಭಟ್ಟರ ಪ್ರಯೋಗಶೀಲತೆಗೆ ಮೆಚ್ಚುಗೆ

ದುಬೈಯಲ್ಲಿರುವ ಅನಿವಾಸಿ ಕನ್ನಡಿಗರಾದ ಪ್ರವೀಣ್ ಶೆಟ್ಟಿ ಅವರು ಕನ್ನಡ ಪತ್ರಿಕೋದ್ಯಮಕ್ಕೆ ಹೊಸ ಸ್ಪರ್ಶ ನೀಡಿರುವ ವಿಶ್ವೇಶ್ವರ ಭಟ್ಟರ ಪ್ರಯೋಗಶೀಲತೆ ಮತ್ತು ಉದ್ಯಮಶೀಲತೆ ಯನ್ನು ಕೊಂಡಾಡಿದರು. ತಾವು ಜಾರ್ಜಿಯಾದಲ್ಲಿ ಹೋಟೆಲ್ ಉದ್ಯಮ ಸ್ಥಾಪಿಸಿದ ಅನುಭವವನ್ನು ಹಂಚಿಕೊಂಡ ಅವರು, ಜಾರ್ಜಿಯಾದಲ್ಲಿ ಹಿಂದುಗಳ ಹಬ್ಬಗಳಾದ ದೀಪಾವಳಿ ಮತ್ತು ಹೋಳಿಯನ್ನು ಅದ್ದೂರಿಯಾಗಿ ಆಚರಿಸುವ ಸಂಪ್ರ ದಾಯ ಪ್ರಾರಂಭಿಸಿ, ತನ್ಮೂಲಕ ಭಾರತೀಯ ಸಂಸ್ಕೃತಿಯನ್ನು ವಿಶ್ವವ್ಯಾಪಿಗೊಳಿಸಲಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ವಿಶ್ವವಾಣಿ ಬಳಗದ ನಾಗಾರ್ಜುನ ಸ್ವಾಗತಿಸಿದರು, ಸಿದ್ದೇಶ್ ಹಾರನಹಳ್ಳಿ ಕಾರ್ಯಕ್ರಮ ನಿರ್ವಹಿಸಿ ದರು. ವೆಂಕಟೇಶ ಹೊಸಬಾಳೆ ವಂದಿಸಿದರು. ವಿಶ್ವವಾಣಿಯ ಸಿಇಒ ಚಿದಾನಂದ ಕಡಲಾಸ್ಕರ್, ರಾಜಶೇಖರ ಪತ್ತಾರ, ಹಿರಿಯ ಪತ್ರಕರ್ತ ರಾಜು ಅಡಕಳ್ಳಿ, ಲೇಖಕಿ ಭಾವನಾ ಬೆಳಗೆರೆ, ಅಡಿಗಾಸ್ ಯಾತ್ರಾ ಸಂಸ್ಥೆಯ ಮುಖ್ಯಸ್ಥ ಕೆ. ನಾಗರಾಜ ಅಡಿಗ, ಎಸ್ ಆರ್‌ಡಬ್ಲ್ಯು ಗ್ರೂಪ್ ಆಫ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಎಚ್. ರವಿ ಸೇರಿದಂತೆ ಅನೇಕರು ಸಮಾರಂಭದಲ್ಲಿ ಭಾಗವಹಿಸಿದ್ದರು. ಫನ್ ಸ್ಟೇ ನಿತಿನ್ ಅಗರ್ವಾಲ್ ಈ ಪ್ರವಾಸದ ಸಂಯೋಜಕತ್ವ ವಹಿಸಿದ್ದರು. ಬೆಂಗಳೂರಿನಿಂದ ನಿಯೋಗದಲ್ಲಿ ತೆರಳಿದ್ದ ವಸಂತಿ ಕಮ್ಮಾಜೆ, ಜಾರ್ಜಿಯಾದ ಅನೇಕ ಗಣ್ಯರು, ಇಲ್ಲಿರುವ ಅನಿವಾಸಿ ಭಾರತೀ ಯರು, ಭಾರತೀಯ ವಿದ್ಯಾರ್ಥಿಗಳು ಈ ಸಮಾರಂಭದಲ್ಲಿ ಭಾಗವಹಿಸಿ ಹರ್ಷ ವ್ಯಕ್ತಪಡಿಸಿದರು. ಈ ಸಮಾರಂಭದ ಅಂಗವಾಗಿ ಭೋಜನ ಕೂಟವನ್ನು ಏರ್ಪಡಿಸಲಾಗಿತ್ತು.

ಸಾಧಕರಿಗೆ ಬೆನ್ನು ತಟ್ಟಿದಾಗ ಹೊಸ ಹುರುಪು

ಸನ್ಮಾನಿತರ ಪರವಾಗಿ ಮಾತನಾಡಿದ ಮಾಜಿ ಶಾಸಕ ಸುಕುಮಾರ ಶೆಟ್ಟಿ ಮತ್ತು ಉದ್ಯಮಿ ಯಜ್ಞನಾರಾಯಣ ಕಮ್ಮಾಜೆ ಅವರು, ಸಾಧಕರನ್ನು ಈ ರೀತಿ ಗುರುತಿಸಿ ಬೆನ್ನು ತಟ್ಟಿದಾಗ ಅವರಿಗೆ ಹೊಸ ಹುರುಪು ಮೂಡುತ್ತದೆ ಮತ್ತು ಯುವ ಪೀಳಿಗೆಗೆ ಇವರಿಂದ ಸ್ಫೂರ್ತಿ ಸಿಗುವಂತಾಗುತ್ತದೆ ಎಂದು ಅಭಿಪ್ರಾಯ ಪಟ್ಟರು. ಜೀವನದಲ್ಲಿ ಇಷ್ಟು ಸಾಕಪ್ಪ ಸಾಕು ಎನ್ನುವ ಮನೋ ಭಾವನೆಯನ್ನು ನಾವು ಬಿಡಬೇಕು. ಸಾಧನೆಗೆ ಯಾವುದೇ ಮಿತಿ ಇಲ್ಲ. ಸಾಧನೆಯ ಬೆನ್ನ ಹಿಂದೆ ಹೋಗುವವರು ಸದಾ ಕ್ರಿಯಾ ಶೀಲರಾಗಿರುತ್ತಾರೆ ಎಂದು ಕಮ್ಮಾಜೆಯವರು ಕಿವಿಮಾತು ಹೇಳಿದರು. ಜಾರ್ಜಿಯಾದಲ್ಲಿ ಶಿಸ್ತು ಸ್ವಚ್ಛತೆ ಮತ್ತು ಪ್ರವಾಸೋ ದ್ಯಮಕ್ಕೆ ಅತ್ಯಂತ ಮಹತ್ವ ನೀಡುವ ಇಲ್ಲಿಯ ಜನರಿಂದ ನಾವು ಕಲಿತುಕೊಳ್ಳಬೇಕಾದದ್ದು ಸಾಕಷ್ಟಿವೆ ಎಂದು ಸುಕುಮಾರ ಶೆಟ್ಟಿಯವರು ಅಭಿಪ್ರಾಯಪಟ್ಟರು.

ಪ್ರಶಸ್ತಿ ಪುರಸ್ಕೃತರು

1. ಶ್ರೀ ಸ್ವಪ್ರಭು ನೀಲಕಂಠ ಮಹಾಸ್ವಾಮೀಜಿ ಮೂರು ಸಾವಿರಮಠ, ಹೊಸೂರು - ಬೈಲಹೊಂಗಲ
2. ಪ್ರವೀಣ್ ಶೆಟ್ಟಿ ಹೋಟೆಲ್ ಉದ್ಯಮಿ, ಅನಿವಾಸಿ ಭಾರತೀಯರು, ದುಬೈ
3. ಬಿ.ಎಂ ಸುಕುಮಾರ್ ಶೆಟ್ಟಿ, ಮಾಜಿ ಶಾಸಕರು
4. ಯಜ್ಞನಾರಾಯಣ ಕಮ್ಮಾಜೆ, ಉದ್ಯಮಿ
5. ಮಂಜುನಾಥ್ ಶಿವಪ್ಪ ಮಕ್ಕಳಗೇರಿ
6. ಚಿತ್ರ ನಟರಾದ ಶ್ರೀನಗರ ಕಿಟ್ಟಿ ಪರವಾಗಿ ನಾಗರಾಜ್ ಅಡಿಗ
7. ಮಮತಾ ರವಿರಾಜ್, ಓಷನ್ ಬ್ಲೂ ವೆಲ್ ನೆಸ್
8. ಹನುಮೇಗೌಡ ಬಿ.ಆರ್
9. ಡಾ. ಗಂಗಾಧರ್ ಸಜ್ಜನ್
10. ಆತ್ಮ ವಿ ಹಿರೇಮಠ್
11. ರೇಖಾ ಭಟ್, ಕೋಟೆಮನೆ
12. ಸತೀಶ್ ಕುಮಾರ್ ಬಿ.ಎಸ್
13. ಬಿ.ಸಿ ಜಯಪ್ರಸಾದ್ (ಆರ್ಗಾನಿಕ್ ಫಾರ್ಮರ್) , ಹಾಸನ
14. ಮಧುಕೇಶ್ವರ ಜನಕ ಹೆಗಡೆ
15. ಸಿ. ಎಂ. ಧನಂಜಯ, ವಕೀಲರು ಮತ್ತು ಕೆಪಿಸಿಸಿಯ ಕಾನೂನು ಮತ್ತು ಮಾನವ ಹಕ್ಕು ವಿಭಾಗದ ಅಧ್ಯಕ್ಷರು
16. ಹನುಮಂತ ರಾವ್ ಭೂಸನೂರ್
17. ಅನಿತಾ ರಾಘವೇಂದ್ರ ಹೆಗಡೆ

ವೈದ್ಯಕೀಯ ವಿದ್ಯಾರ್ಥಿಗಳಿಗೆ ನೆರವು

ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾ ಡಿದ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು, ಭಾರತ ಮತ್ತು ಜಾರ್ಜಿಯಾ ದೇಶಗಳ ನಡುವಿನ ಉತ್ತಮ ಬಾಂಧವ್ಯದ ಇತಿಹಾಸವನ್ನು ಪರಿಚಯಿಸಿದರು. ಭಾರತ ಮತ್ತು ಜಾರ್ಜಿಯ ಪರಸ್ಪರ ಗಡಿಯನ್ನು ಹಂಚಿ ಕೊಂಡಿಲ್ಲದೇ ಇರಬಹುದು. ಆದರೆ ಇದಕ್ಕಿಂತಲೂ ಮಿಗಿ ಲಾದ ಭಾವನಾತ್ಮಕ, ಮಧುರ ಸಂಬಂಧಗಳನ್ನು ಹಂಚಿ ಕೊಂಡಿವೆ. ಕರ್ನಾಟಕ ಸೇರಿದಂತೆ ಭಾರತದ ಅನೇಕ ರಾಜ್ಯ ಗಳ ವಿದ್ಯಾರ್ಥಿಗಳು ಜಾರ್ಜಿಯಾಕ್ಕೆ ವೈದ್ಯಕೀಯ ಶಿಕ್ಷಣ ಪಡೆಯಲು ಭಾರಿ ಸಂಖ್ಯೆಯಲ್ಲಿ ಪ್ರತಿ ವರ್ಷವೂ ಬರುತ್ತಿ ದ್ದಾರೆ. ಈ ವಿದ್ಯಾರ್ಥಿಗಳಿಗೆ ಜಾರ್ಜಿಯಾ ಅನೇಕ ರೀತಿಯ ಅನುಕೂಲಗಳನ್ನು ಕಲ್ಪಿಸಿರುವುದು ಪ್ರಶಂಸನಾರ್ಹ ಎಂದರು.

ಭಾರತದ ಯೋಗ, ಕಲೆ, ಸಾಹಿತ್ಯ ಮತ್ತು ಸಿನಿಮಾಗಳು ಜಾರ್ಜಿಯಾದ ಜನರ ಮೇಲೆ ಗಾಢ ಪರಿಣಾಮ ಬೀರಿದೆ. ಭಾರತದ ಮೇರು ನಟರಾದ ರಾಜ್‌ಕಪೂರ್ ಮತ್ತು ಮಿಥುನ್ ಚಕ್ರವರ್ತಿ ಅವರು ಜಾರ್ಜಿಯಾದ ಜನಮಾನಸ ದಲ್ಲಿ ಇಂದಿಗೂ ಪ್ರಸಿದ್ಧರಾಗಿರುವುದು ವಿಶೇಷ. ಜಾರ್ಜಿಯಾ ದೇಶವು ಹಿಂದೆ ಸೋವಿಯತ್ ಒಕ್ಕೂಟದ ಭಾಗವಾಗಿತ್ತು. ಅಂದಿನ ಕಾಲದಿಂದಲೂ ಭಾರತ ಉತ್ತಮ ಸಂಬಂಧವನ್ನು ಇಟ್ಟುಕೊಂಡು, ನಂತರ ಜಾರ್ಜಿಯಾ ಪ್ರತ್ಯೇಕವಾಗಿ ಉದಯವಾದ ನಂತರವೂ ಅದನ್ನು ಮುಂದುವರಿಸಿಕೊಂಡು ಬಂದಿರುವುದು ಗಮನಿಸಬೇಕಾದ ಅಂಶವಾಗಿದೆ. ಇಂಥ ಬಾಂಧವ್ಯಗಳನ್ನು ಮತ್ತಷ್ಟು ಗಟ್ಟಿ ಗೊಳಿಸಲು ವಿಶ್ವವಾಣಿಯಿಂದ ಈ ಕಾರ್ಯಕ್ರಮ ಏರ್ಪಡಿ ಸಲು ಸಾಧ್ಯವಾಗಿರುವುದು ಸಂತೋಷದ ಸಂಗತಿ. ಈ ಕಾರ್ಯಕ್ರಮಕ್ಕೆ ಸಹಕರಿಸಿದ ಜಾರ್ಜಿಯಾದ ಅಧಿಕಾರಿ ಗಳಿಗೆ, ಸ್ನೇಹಿತರಿಗೆ ಕೃತಜ್ಞತೆ ಸಲ್ಲಿಸಿದರು.

ಟಿಬಿಲಿಸಿಯ ಬಿಷಪ್ ಸಿಮಿಯೋನ್ ಅಭಿನಂದನೆ

ಬೇರೆ ದೇಶಗಳಲ್ಲಿ ಮಾಧ್ಯಮ ಸಂಸ್ಥೆಯವರು ಈ ರೀತಿ ಕಾರ್ಯಕ್ರಮ ಏರ್ಪಡಿಸಿರುವುದು ವಿನೂತನ ಪ್ರಯೋಗವೇ ಸರಿ. ಭಾರತೀಯರು ಅತ್ಯಂತ ಸರಳ ಮತ್ತು ಸಜ್ಜನ ಸ್ವಭಾವದವರು ಎಂದು ಪ್ರಶಂಸಿಸಿ, ಜಾರ್ಜಿಯಾವನ್ನು ಈ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಆಯ್ಕೆ ಮಾಡಿರುವುದಕ್ಕೆ ವಿಶ್ವವಾಣಿಯನ್ನು ಟಿಬಿಲಿಸಿಯ ಬಿಷಪ್ ಸಿಮಿಯೋನ್ ಅವರು ಅಭಿನಂದಿಸಿದರು.

ಮುಖ್ಯ ಅತಿಥಿಯಾಗಿದ್ದ ಅವರು, ಭಾರತಕ್ಕೆ ದೀರ್ಘ ಇತಿಹಾಸವಿದೆ, ಪರಂಪರೆ ಇದೆ, ಜಾರ್ಜಿಯಾ ಭಾರತವನ್ನು, ಅಲ್ಲಿಯ ಸಂಸ್ಕೃತಿಯನ್ನು ಸದಾ ಗೌರವಿಸುತ್ತದೆ. ಜಾರ್ಜಿಯಾಕ್ಕೆ ಶಿಕ್ಷಣಕ್ಕಾಗಿ ಇನ್ನಷ್ಟು ಭಾರತೀಯ ವಿದ್ಯಾರ್ಥಿಗಳು ಬರುವಂತಾ ದರೆ ಸಂತೋಷ, ಅವರಿಗೆ ಇಲ್ಲಿ ಸೂಕ್ತ ಸೌಲಭ್ಯ ಒದಗಿಸಲಾಗು ವುದು ಎಂದು ತಿಳಿಸಿದರು.

ಜಾರ್ಜಿಯಾದ ಜನಪ್ರಿಯ ನಟ ನಿಕೋಲಾಜ್ ಸುಲುಕಿಜ್ ಅವರು ಕನ್ನಡ ನಾಡಿನ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿ ದರು. ತಾವು ಬೆಂಗಳೂರಿಗೆ ಅನೇಕ ಬಾರಿ ಭೇಟಿ ಕೊಟ್ಟಿರು ವುದನ್ನು, ಬಾಲಿವುಡ್ ಸಿನಿಮಾಗಳು, ಹಿಂದಿ ಸಿನಿಮಾ ಹಾಡು ಗಳು ಜಾರ್ಜಿಯಾದಲ್ಲಿ ಜನಪ್ರಿಯವಾಗಿರುವುದನ್ನು ನೆನಪಿಸಿ ದರು. ಭಾರತವು ಕಲೆ ಮತ್ತು ಸಂಸ್ಕೃತಿಗಳ ಬೀಡಾಗಿದೆ. ಇದರಿಂದಾಗಿ ಜಗತ್ತಿನ ನಕ್ಷೆಯಲ್ಲಿ ಭಾರತಕ್ಕೆ ವಿಶೇಷ ಸ್ಥಾನಮಾನ ಲಭಿಸುವಂತಾಗಿದೆ ಎಂದು ಅವರು ಕೊಂಡಾಡಿದರು.

ಮತ್ತೊಬ್ಬ ಅತಿಥಿ ಜಾರ್ಜಿಯಾದ ಖ್ಯಾತ ಲೇಖಕ ಜಾರ್ಜಿ ಕೆಕೆಲಿಡ್ಜ್ ಅವರು, ಭಾರತದ ಶ್ರೇಷ್ಠ ಗ್ರಂಥವಾದ ಭಗವದ್ಗೀತೆ ಯನ್ನು ಜಾರ್ಜಿಯಾ ಭಾಷೆಗೂ ಅನುವಾದಿಸಲಾಗಿದೆ ಎಂದು ಹೇಳಿದರು. ಜಾರ್ಜಿಯಾದಲ್ಲಿರುವ ಭಾರತೀಯ ರಾಯಭಾರಿ ಕಚೇರಿಯ ಹಿರಿಯ ಅಧಿಕಾರಿ ಚೇತನ್ ಶರ್ಮಾ ಅವರು ಉಪಸ್ಥಿತರಿದ್ದರು. ಅನಿವಾಸಿ ಭಾರತೀಯರಾದ ದರ್ಪಣ್ ಪರಾಶರ್ ಅವರು ಜಾರ್ಜಿಯಾದಲ್ಲಿನ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಬದಲಾಗಿರುವ ಪ್ರಸ್ತುತ ಸನ್ನಿವೇಶದಲ್ಲಿ ಟರ್ಕಿ, ಅಜರ್ ಬೈಜಾನ್ ದೇಶಗಳಿಗೆ ಭಾರತೀಯ ಪ್ರವಾಸಿಗರು ಹೋಗಲು ಅಷ್ಟಾಗಿ ಇಷ್ಟ ಪಡಲಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಜಾರ್ಜಿಯಾಕ್ಕೆ ಭಾರತೀಯ ಪ್ರವಾಸಿಗರು ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಬರುವಂತಹ ಬೆಳವಣಿಗೆಯಾಗಿದೆ. ಶೈಕ್ಷಣಿಕ ಕೇಂದ್ರವಾಗಿಯೂ ಜಾರ್ಜಿಯಾವು ಬೆಳೆಯುತ್ತಿರುವುದು ವಿಶೇಷ. ಭಾರತೀಯ ವಿದ್ಯಾರ್ಥಿಗಳಿಗೆ ಕಡಿಮೆ ವೆಚ್ಚದಲ್ಲಿ ಶಿಕ್ಷಣ ಪಡೆಯುವುದಕ್ಕೂ ಇದು ಅನುಕೂಲವಾಗಿದೆ ಎಂದು ದರ್ಪಣ್ ಅಭಿಪ್ರಾಯ ಪಟ್ಟರು.

ಜಾರ್ಜಿಯಾದ ಸಾಂಪ್ರದಾಯಿಕ ನೃತ್ಯ ಪ್ರದರ್ಶನ.

ಲೇಖಕ ಜಾರ್ಜಿ ಕೆಕೆಲಿಡ್ಜ್ ಅವರನ್ನು ಸ್ವಾಗತಿಸಿದ ವಿಶ್ವೇಶ್ವರ ಭಟ್.

17 ಕಿರುಚಿತ್ರ ಪ್ರದರ್ಶನ

ಜಾರ್ಜಿಯಾದ ಸುಂದರ ಕಲಾವಿದರು ಮತ್ತು ಕಲಾವಿದೆಯರು ಸೇರಿ ನೃತ್ಯ, ವಾದ್ಯ ಮೇಳ ಮತ್ತು ಕೊರಿಯೊಗ್ರಫಿ ಪ್ರದರ್ಶನ ಈ ಕಾರ್ಯಕ್ರಮಕ್ಕೆ ಕಳೆಕಟ್ಟಿತ್ತು. ಎಲ್ಲಾ ಪ್ರಶಸ್ತಿ ಪುರಸ್ಕೃತರ ಸಾಧನೆಗಳನ್ನು ವಿವರಿಸುವ 17 ಕಿರು ಚಿತ್ರವನ್ನು ಪ್ರದರ್ಶಿಸಲಾಯಿತು. ಈ ರೀತಿಯ ವೈಶಿಷ್ಟ್ಯಪೂರ್ಣ ಅಂತಾರಾಷ್ಟ್ರೀಯ ಸಮ್ಮೇಳನಗಳನ್ನು ಕಳೆದ ಒಂದುವರೆ ವರ್ಷ ದಲ್ಲಿ ವಿಶ್ವವಾಣಿ 9 ಬೇರೆ ಬೇರೆ ದೇಶಗಳಲ್ಲಿ ಯಶಸ್ವಿಯಾಗಿ ನಡೆಸಿ ರುವುದು ಉಲ್ಲೇಖಾರ್ಹ. ಕಾಂಬೋಡಿಯ, ವಿಯೆಟ್ನಾಂ, ಜಪಾನ್, ರಷ್ಯಾ, ಇಂಡೊನೇಷ್ಯಾ, ಮಾಲ್ಡೀವ್ಸ್, ಒಮಾನ್, ಮಾರಿಷಸ್ ಮುಂತಾದ ದೇಶಗಳಲ್ಲಿ ಈಗಾಗಲೇ 'ವಿಶ್ವವಾಣಿ'ಯು ಕನ್ನಡದ ಕಹಳೆ ಮೊಳಗಿಸಿದೆ.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರು.

ಪರ್ವತ ಶ್ರೇಣಿಯ ಸುಂದರ ನಗರ

ಜಾರ್ಜಿಯಾ ದೇಶದ ರಾಜಧಾನಿ ಟಿಬಿಲಿಸಿ ಕಾಕೇಷಸ್ ಪರ್ವತ ಶ್ರೇಣಿಗಳ ನಡುವಿನ ಸುಂದರ ನಗರ. ಈ ನಗರವು ತನ್ನ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಭೌಗೋಳಿಕ ಮಹತ್ವದಿಂದ ಗಮನ ಸೆಳೆಯುತ್ತದೆ. ಕೂರಾ ನದಿಯ ತೀರ ದಲ್ಲಿರುವ ಈ ನಗರ, ಪರ್ವತಗಳಿಂದ ಸುತ್ತುವರಿದಿದೆ. ಸಮುದ್ರ ಮಟ್ಟದಿಂದ ಸುಮಾರು 400 ಮೀಟರ್ ಎತ್ತರದಲ್ಲಿ ರುವ ಈ ನಗರವು ವಿಶಿಷ್ಟ ಭೌಗೋಳಿಕ ರಚನೆ ಮತ್ತು ನೈಸರ್ಗಿಕ ಸೌಂದರ್ಯದಿಂದ ಪ್ರವಾಸಿಗರನ್ನು ಆಕರ್ಷಿಸುತ್ತದೆ.

ಈ ನಗರ ಹಲವು ಶತಮಾನಗಳವರೆಗೆ ಪರ್ಷಿಯನ್, ಅರಬ್, ಮಂಗೋಲರು, ಓಟ್ಟೋಮನ್ ಮತ್ತು ರಷ್ಯನ್ ಸಾಮ್ರಾಜ್ಯಗಳ ಅಧೀನದಲ್ಲಿತ್ತು. ಇದರಿಂದ ಟಿಬಿಲಿಸಿಗೆ ಬಹುಸಾಂಸ್ಕೃತಿಕ ಆಯಾಮವಿದೆ. ಪ್ರತಿ ಆಳ್ವಿಕೆಯಿಂದಲೂ ಇಲ್ಲಿನ ಕಲಾ, ವಾಸ್ತುಶಿಲ್ಪ ಹಾಗೂ ಆಹಾರದ ವೈವಿಧ್ಯ ಶ್ರೀಮಂತವಾಗಿದ್ದನ್ನು ಕಾಣಬಹುದು. ಟಿಬಿಲಿಸಿಯ ಜನಸಂಖ್ಯೆ ಸುಮಾರು ಹನ್ನೆರಡು ಲಕ್ಷ. ಜಾರ್ಜಿಯಾದ ಜನಸಂಖ್ಯೆ ಸುಮಾರು ಮೂವತ್ತೇಳು ಲಕ್ಷ. ಬಹುಪಾಲು ಜನ ಜಾರ್ಜಿ ಯನ್ ಭಾಷೆಯನ್ನೇ ಮಾತನಾಡುತ್ತಾರೆ. ಜತೆಗೆ ರಷ್ಯನ್, ಇಂಗ್ಲಿಷ್ ಮತ್ತು ಅರ್ಮೇನಿಯನ್ ಭಾಷೆಗಳ ಬಳಕೆಯೂ ಇದೆ. ಇತ್ತೀಚಿನ ವರ್ಷಗಳಲ್ಲಿ ಪ್ರವಾಸೋದ್ಯಮದ ಬೆಳವಣಿಗೆಯು ಇಂಗ್ಲಿಷ್ ಭಾಷಾ ಬಳಕೆಯನ್ನು ಹೆಚ್ಚಿಸಿದೆ.

ಟಿಬಿಲಿಸಿ ಜಾರ್ಜಿಯಾದ ಆರ್ಥಿಕ, ಶೈಕ್ಷಣಿಕ ಮತ್ತು ವಾಣಿಜ್ಯ ಕೇಂದ್ರವಾಗಿದೆ. ಹಲವು ಬ್ಯಾಂಕುಗಳು, ಇನ್ಶುರನ್ಸ್ ಕಂಪನಿಗಳು ಮತ್ತು ಸ್ಟಾರ್ಟಪ್ ಕಂಪನಿಗಳು ಇಲ್ಲಿ ನೆಲೆಸಿವೆ.

ಪ್ರವಾಸೋದ್ಯಮ, ಮಾಹಿತಿ ತಂತ್ರಜ್ಞಾನ, ಶಿಕ್ಷಣ ಮತ್ತು ವಾಣಿಜ್ಯ ಕ್ಷೇತ್ರಗಳು ಇಲ್ಲಿನ ಆರ್ಥಿಕತೆಯ ಮುಖ್ಯ ಅಂಶಗಳು. ಟಿಬಿಲಿಸಿಯು ಬೃಹತ್ ಸಾಂಸ್ಕೃತಿಕ ಮೇಳವಾಗಿದೆ. ಇಲ್ಲಿ ಅನೇಕ ನೃತ್ಯ, ಸಂಗೀತ, ಚಿತ್ರಕಲೆ ಹಾಗೂ ನಾಟಕ ಪ್ರದರ್ಶನ ಗಳು ನಿರಂತರ ನಡೆಯುತ್ತವೆ. ಈ ನಗರದಲ್ಲಿ ಪ್ರತಿವರ್ಷವೂ

ಟಿಬಿಲಿಸಿ ಫಿಲ್ಮ್ ಫೆಸ್ಟಿವಲ್, ಜಾಜ್ ಫೆಸ್ಟಿವಲ್ ಮತ್ತು ಬೇರೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ.

ಟಿಬಿಲಿಸಿಯು ಜಾರ್ಜಿಯಾದ ಶೈಕ್ಷಣಿಕ ಕೇಂದ್ರವೂ ಆಗಿದೆ. ಟಿಬಿಲಿಸಿ ಸ್ಟೇಟ್ ಯೂನಿವರ್ಸಿಟಿ, ಜಾರ್ಜಿಯನ್ ಟೆಕ್ನಿಕಲ್ ಯುನಿವರ್ಸಿಟಿ ಮತ್ತು ಇನ್ನಷ್ಟು ಸಂಸ್ಥೆಗಳು ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿವೆ. ಬಹುಭಾಷಾ ಶಿಕ್ಷಣವು ಇಲ್ಲಿನ ವೈಶಿಷ್ಟ್ಯ. ಆಶ್ಚರ್ಯವೆಂದರೆ ಈ ನಗರದಲ್ಲಿ ಅನೇಕ ಕನ್ನಡಿಗ ವಿದ್ಯಾರ್ಥಿಗಳಿದ್ದಾರೆ. ಇವರೆಲ್ಲ ವೈದ್ಯಕೀಯ ಶಿಕ್ಷಣ ವ್ಯಾಸಂಗಕ್ಕೆ ಬಂದವರು. ಟಿಬಿಲಿಸಿಯಲ್ಲಿ ನಡೆದಾಡುವಾಗ, ಕನ್ನಡಿಗ ವಿದ್ಯಾರ್ಥಿಗಳು, ಅವರನ್ನು ನೋಡಲು ಬರುವ ಪಾಲಕರನ್ನು ಕಾಣಬಹುದು. ಟಿಬಿಲಿಸಿ ಒಂದು ಚಲನಶೀಲ ಮತ್ತು ಕ್ರಿಯಾತ್ಮಕ ನಗರ. ಇಲ್ಲಿ ಪುರಾತನ ಇತಿಹಾಸವೂ ಇದೆ ಮತ್ತು ಆಧುನಿಕತೆಯ ಸ್ಪರ್ಶವೂ ಇದೆ. ಇಲ್ಲಿನ ಸಂಸ್ಕೃತಿ, ಆಹಾರ, ವಾಸ್ತುಶಿಲ್ಪ, ಜನಪದ, ನೃತ್ಯ ಮತ್ತು ಹಿತಕರ ಹವಾಮಾನ ಈ ನಗರದ ವೈಶಿಷ್ಟ್ಯ. ಜಾರ್ಜಿಯಾದ ಅರಮನೆ ಎಂದೇ ಹೇಳಬಹುದಾದ ಈ ನಗರ, ಇಂದಿಗೂ ಅನೇಕರ ಕಲ್ಪನೆಗಳ ಮೇಲೆ ಸವಾರಿ ಮಾಡುತ್ತದೆ.

ವಿಶ್ವವಾಣಿ

ಸಂಪಾದಕೀಯ

ಸಂಚುಕೋರರಿಗೆ ಶಾಸ್ತಿಯಾಗಲಿ

'ನರ-ನಾಡಿಗಳಲ್ಲಿ ಹರಿಯುತ್ತಿರುವುದೇ ವಿಷಪೂರಿಯಾಗಿದ್ದರೆ, ಅಮೃತ ಸಿಂಚನವಾಗುವುದಾದರೂ ಹೇಗೆ, ಜೀವನೀ ಚಿಮ್ಮುವುದಾದರೂ ಹೇಗೆ?' ಎಂಬುದೊಂದು ಮಾತಿದೆ. ಮಗ್ಗುಲುಮುಳ್ಳು ದೇಶ ಎನಿಸಿಕೊಂಡಿರುವ ಪಾಕಿಸ್ತಾನಕ್ಕೂ ಮತ್ತು ಅದರ ಗುಪ್ತಚರ ಸಂಸ್ಥೆ 'ಐಎಸ್‌ಐ'ಗೂ ಒಪ್ಪುವಂಥ-ಒಗ್ಗುವಂಥ ಮಾತಿದು. ಹುಟ್ಟಿದಾರಭ್ಯ ಭಾರತದೆಡೆಗೆ ವಿಷ ಕಾರುತ್ತಿರುವುದನ್ನೇ ಉಸಿರಾಗಿಸಿಕೊಂಡಿರುವ ದೇಶವೇ ಪಾಕಿಸ್ತಾನ. ಗಡಿಭಾಗದಲ್ಲಿನ ಉಗ್ರರ ನುಸುಳಿಕೆ, ಭಯೋತ್ಪಾದಕ ದಾಳಿಗಳು, ವಿಧ್ವಂಸಕ ಕೃತ್ಯಗಳು, ಅನಗತ್ಯವಾಗಿದ್ದ ಕಾರ್ಗಿಲ್ ಯುದ್ಧ, ಮುಂಬೈ ಸ್ಫೋಟ ಪ್ರಕರಣ ಹೀಗೆ ಹೇಳುತ್ತ ಹೋದರೆ ಹಲವು ಉದಾಹರಣೆಗಳನ್ನು ಈ ನಿಟ್ಟಿನಲ್ಲಿ ಕೊಡಬಹುದು. ಇವು ಸಾಲದೆಂಬಂತೆ ಪಾಕಿಸ್ತಾನವು ತನ್ನ ಕೃಪಾಪೋಷಿತ ಉಗ್ರರ ಮೂಲಕ ಕಾಶ್ಮೀರದ ಪಹಲ್ಗಾಮ್‌ನಲ್ಲಿ ಇತ್ತೀಚೆಗೆ 26 ಅಮಾಯಕರ ಮಾರಣಹೋಮ ನಡೆಸಿತು, ಅದಕ್ಕೆ ಭಾರತದ ಕಠಿಣವಾದ ತಕ್ಕ ಶಾಸ್ತಿಯನ್ನೂ ಅನುಭವಿಸಿತು. ಆದರೆ, ಈ ಹತ್ಯಾಕಾಂಡಕ್ಕೂ ಮುನ್ನ ಭಾರತದಲ್ಲಿ ಅತಿದೊಡ್ಡ ಭಯೋತ್ಪಾದಕ ದಾಳಿಯನ್ನು ನಡೆಸಲು ಪಾಕಿಸ್ತಾನದ 'ಐಎಸ್‌ಐ' ಸಂಚು ಹೂಡಿತ್ತು ಎಂಬ ಸಂಗತಿ ಈಗ ಬಯಲಾಗಿದೆ. ಅಲ್ಲಿಗೆ, 'ಹೀನಸುಳಿ ಬೋಳಿಸಿದರೆ ಹೋದೀತೇ?' ಎಂಬ ನಮ್ಮವರ ಜಾಣನುಡಿಗೆ ಪುಷ್ಟಿ ಸಿಕ್ಕಂತಾಗಿದೆ. ಭಾರತದಲ್ಲಿ ಇಂಥ ಭಯೋತ್ಪಾದಕ ಕೃತ್ಯಗಳನ್ನು ತಾನು ನಡೆಸಿದಾಗಲೂ 'ನಾನವನಲ್ಲ, ನಾನವನಲ್ಲ' ಎಂದೇ ಅಮಾಯಕನಂತೆ ಹೇಳಿಕೊಳ್ಳುತ್ತಿದ್ದ ಪಾಕಿಸ್ತಾನದ ಮತ್ತೊಂದು ಮುಖವಾಡವೀಗ ಬಯಲಾದಂತಾಗಿದೆ. ಇಷ್ಟಾಗಿಯೂ, ಮೊನ್ನೆನ 'ಆಪರೇಷನ್ ಸಿಂದೂರ' ಕಾರ್ಯಾಚರಣೆಯಲ್ಲಿ ಬರೆ ಹಾಕಿಸಿಕೊಂಡ ನಂತರವೂ ಪಾಕಿಸ್ತಾನ ಕೆಲಕಾಲ ನಿಂತಿಲ್ಲ, ಅಂತಾರಾಷ್ಟ್ರೀಯ ಸಮುದಾಯವು ಈ ಉಗ್ರವಾದಿ ರಾಷ್ಟ್ರವನ್ನು ಸಾಮಾಜಿಕವಾಗಿ ಮೂಲೆಗುಂಪು ಮಾಡುವವರೆಗೂ ಆ ಕೆಲಕಾಲ ಪ್ರಾಯಶಃ ನಿಲ್ಲುವುದಿಲ್ಲ, ತನ್ನ ರಾಜಕೀಯ ವ್ಯವಸ್ಥೆ ಮೂರಾಬಟ್ಟೆಯಾಗಿದ್ದರೂ, ಆರ್ಥಿಕತೆಯೆಂಬುದು ಧರಾಶಾಯಿಯಾಗಿದ್ದರೂ ಭಾರತದ ವಿರುದ್ಧ ಹೀಗೆ ವಿಷ ಕಕ್ಕುತ್ತಿರುವ ಪಾಕಿಸ್ತಾನಕ್ಕೆ ಮತ್ತು ಅದಕ್ಕೆ ಒತ್ತಾಸೆಯಾಗಿರುವ ಸಂಚುಕೋರರಿಗೆ ತಕ್ಕ ಶಾಸ್ತಿಯಾಗಬೇಕಿದೆ.

ಸೊಂಪಾದಕೀಯ

ತಮ್ಮವರನ್ನ ಬಿಟ್ಟು ತಮನ್ನಾ ಯಾಕೆ?

ಕರ್ನಾಟಕದಲ್ಲಿ ಇತ್ತೀಚೆಗೆ ಸುದ್ದಿ ಮತ್ತು ಗದ್ದಲ ಮಾಡ್ತಾ ಇರೋ ವಿಷಯ ಎಂದ್ರೆ ಕನ್ನಡ ಭಾಷೆ ಮತ್ತು ಕನ್ನಡಿಗರದ್ದು. ಇತ್ತೀಚೆಗೆ ಕೋರಮಂಗಲದ ರೆಸ್ಟೋರೆಂಟ್ ಒಂದರ ಡಿಜಿಟಲ್ ನಾಮಫಲಕದಲ್ಲಿ ಕನ್ನಡಿಗರನ್ನು ಬೈದು ಸಾಲೊಂದನ್ನು ಹಾಕಿದ್ದ ಕಾರಣ ಆ ರೆಸ್ಟೋರೆಂಟ್‌ಗೆ ಬೀಗ ಜಡಿಯಲಾಗಿದೆ. ಎರಡು ದಿನದ ಹಿಂದೆ ಬ್ಯಾಂಕ್ ಅಧಿಕಾರಿಯೊಬ್ಬಳು ಕನ್ನಡ ಮಾತಾಡಲ್ಲ ಅಂತ ಹೇಳಿ ಈಗ ಎತ್ತಂಗಡಿ ಆಗಿದ್ದಾಳೆ. ಅದಕ್ಕೂ ಮುನ್ನ ಗಾಯಕ ಸೋನು ನಿಗಮ್ ಕನ್ನಡಿಗರಿಗೆ ಅಪಮಾನ ಮಾಡಿದ್ದಾರೆ ಅಂತ ಗುಲ್ಲೆದ್ದಿತ್ತು. ಸೋನು ಗಾನದ ನಂತರ ಈಗ ಇನ್ನೊಂದು ವಿಷಯಕ್ಕೆ ಕನ್ನಡಿಗರು ಅಪಸ್ವರ ಹಾಡುತ್ತಿದ್ದಾರೆ. ಅದೇನಪ್ಪಾ ಅಂದ್ರೆ ನಮ್ಮ ಮೈಸೂರು ಸ್ಯಾಂಡಲ್ ಸೋಪ್ ಫ್ಯಾಕ್ಟರಿ ತನ್ನ ರಾಯಭಾರಿ ಆಗಿ ಪರಭಾಷೆಯ ನಟಿ

ಯಾದ ತಮನ್ನಾ ಅವರನ್ನು ಆಯ್ಕೆ ಮಾಡಿ ರೋದು. ಕಾಮಿಡಿ ಕಿಲಾಡಿಗಳು ಖ್ಯಾತಿಯ ಮಡೆನೂರು ಮನು ಟ್ರಾಜಿಡಿ ಹೀರೋ ಆಗಿ ರೇಪ್ ಕೇಸಲ್ಲಿ ತಗಲಾಕಿ ಕೊಂಡಿದ್ದರೆ, ತಮನ್ನಾ ಅವರು ಸೋಪ್ ಕೇಸಲ್ಲಿ ತಗಲಾಕಿ ಕೊಂಡಿದ್ದಾರೆ. ತಮನ್ನಾ ಆಯ್ಕೆ ಪ್ರಶ್ನೆ ಮಾಡಿ, 'ಇದು ಹಾಸಿನಾ ಲೋಕವೇ ಇಲ್ಲಿ ಹುಡುಗಿಯ ಇಲ್ಲವೇ, ತಮನ್ನಾನೇ ಯಾಕೆ ಬೇಕು?' ಅಂತ ವರಾತ ತೆಗೆದಿದ್ದಾರೆ ಕೆಲವು ಕನ್ನಡಿಗರು. ಕನ್ನಡದ ನಂದಿನಿ ರಾಯಭಾರಿ ಆಗಿ ಡಾ. ರಾಜ್ ಮತ್ತು ಪುನೀತ್ ಉಚಿತವಾಗಿ ಕೆಲಸ ಮಾಡಿದ್ದರು. ಈಗ ಮೈಸೂರ್ ಸ್ಯಾಂಡಲ್ ಸೋಪ್ ಫ್ಯಾಕ್ಟರಿಗೆ ರಾಯಭಾರಿ ಆಗಲು ಕನ್ನಡದ ಹುಡುಗಿಯರೇ ಇಲ್ವಾ? ತಮನ್ನಾಗೆ 6 ಕೋಟಿ ಕೊಟ್ಟು ಕರೆಸಿರೋದು 6 ಕೋಟಿ ಕನ್ನಡಿಗರಿಗೆ ಮಾಡಿರೋ ಅನ್ಯಾಯ ಅಂತ ಬೊಬ್ಬೆ ಹೊಡೆಯ ಲಾಗುತ್ತಿದೆ. ಕನ್ನಡದಲ್ಲಿ ಹುಡುಗಿಯರಿದ್ದಾರೆ ನಿಜ. ಹೈಟಿನ ವಿಷಯದಲ್ಲಿ ಕಮ್ಮಿ ಅನ್ನಿಸಿದ್ರೆ ಹೈ ಹೀಲ್ಸ್ ಸ್ಯಾಂಡಲ್ ಹಾಕಿ ಸ್ಯಾಂಡಲ್ ಸೋಪಿಗೆ ರಾಯಭಾರಿ ಮಾಡ ಬಹುದಿತ್ತು. ಆದರೆ ತಮನ್ನಾ ಹೇಗೆ ಕೇಳಿ ತಮ್ಮ ಸ್ಕಿನ್ ಟೋನಿಗೆ ಮಿಲ್ಕಿ ಬ್ಯೂಟಿ ಅಂತಲೇ ಹೆಸರಾಗಿರುವವರು. ಆರಂಭಕ್ಕೆ ಸ್ಕಿನ್ ಟೋನ್ ಎಲ್ಲದ್ದೂಲ್ಲೂ ಸಿಗೋದು ಅಪರೂಪ. ಎಲ್ಲಕ್ಕಿಂತ ಹೆಚ್ಚಾಗಿ ತಮನ್ನಾ ಅವರಿಗೆ ದೇಶದಾದ್ಯಂತ ಹೆಸರಿದೆ. ಹಾಗಾಗಿ ಅವರು ರಾಯಭಾರಿ, ರೂಪದರ್ಶಿ ಆದರೆ ಅದರಿಂದ ಆಗೋ ಲಾಭ ಹೆಚ್ಚು ಅಂತ ವಿರೋಧಿಸುತ್ತಿರು ವವರಿಗೆ ತಿಳಿ ಹೇಳೋದು ಕಷ್ಟ. ಒಟ್ಟಿನಲ್ಲಿ ಈ ಪ್ರಕರಣದಿಂದಾಗಿ ಕನ್ನಡಿಗರು ಎಲ್ಲರಿಂದಲ್ಲೂ ಮೂರು ತೂರಿಸುತ್ತಾರೆ ಅನ್ನೋ ಅಪವಾದ ಮಾತ್ರ ನಿಂತಿಲ್ಲ.

ಸಂಪಾದಕರ ಸದ್ಯಶೋಧನೆ

ತಜ್ಞರ ಸಲಹೆ ತೀರಾ ಅಗತ್ಯ

ಮ್ಯಾನೇಜ್‌ಮೆಂಟ್ ಗುರು ರಘುರಾಮನ್ ಅವರು ಕೆಲವು ತಿಂಗಳ ಹಿಂದೆ ಬರೆದಿದ್ದನ್ನು ಇಲ್ಲಿ ಉಲ್ಲೇಖಿಸುತ್ತಿರುವೆ. ರಾಜಕುಮಾರ್ ಎಂಬವರು ತಮ್ಮ ಟ್ಯಾಕ್ಸಿಯನ್ನು ಚೆನ್ನೈ ನಗರದ ಹೊರವಲಯದಲ್ಲಿ ನಿಲ್ಲಿಸಿದ್ದರು. ಸಂಜೆ ಐದರ ಪೀಕ್ ಅವರ್ ಪ್ರಾರಂಭವಾಗುವ ಮುನ್ನ ಅಲ್ಲಿಂದ ಹೊರಡುವ ಯೋಚನೆ ಮಾಡಿದ್ದರು. ಜತೆಗೆ ಹಗುರಾಗಿ ಏನಾದರೂ ತಿನ್ನಬೇಕೆನಿಸಿತ್ತು. ಅವರ ಬ್ಯಾಂಕ್ ಖಾತೆಯಲ್ಲಿದ್ದಿದ್ದು 105 ರುಪಾಯಿ ಮಾತ್ರ. ಅವರ ಮಿತ್ರರೊಬ್ಬರು ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್‌ನಲ್ಲಿ ಒಂದು ಸಣ್ಣ ಪ್ರದೇಶವನ್ನು ಬಾಡಿಗೆಗೆ ಪಡೆದಿದ್ದರು. ಅಲ್ಲಿ ಅವರಿಗೆ ಟ್ಯಾಕ್ಸಿ ಬಿಸಿನೆಸ್ ಚೆನ್ನಾಗಿ ನಡೆಯುತ್ತಿತ್ತು. ಆ ದಿನಗಳಲ್ಲಿ ದೂರದ ಟ್ಯಾಕ್ಸಿ ಪ್ರಯಾಣಗಳಲ್ಲಿ ಹೆಚ್ಚಿನ ಲಾಭವಿರುತ್ತಿರಲಿಲ್ಲ, ವಿಶೇಷವಾಗಿ ಅಂಥ ಪ್ರಯಾಣಗಳಲ್ಲಿ ಇಂಧನಕ್ಕೆ ಹೆಚ್ಚು ಖರ್ಚಾಗುತ್ತಿತ್ತು. ಹೀಗಾಗಿ ಹೆಚ್ಚಿನ ಟ್ಯಾಕ್ಸಿ ಡ್ರೈವರುಗಳು ಬಹುಬೇಗ ತಮ್ಮ ಮೂಲಸೆಲೆಗೆ ವಾಪಸಾಗಲು ಅನುಕೂಲ ವಾಗುವಂಥ ಕಿರುಪ್ರಯಾಣಗಳಿಗೆ ಆದ್ಯತೆ ನೀಡುತ್ತಿದ್ದರು. ಅವರಲ್ಲಿ ತಿಂಗಳ ಕಮಾಯಿಯ ಕುರಿತಾಗಿ ಚಿಂತೆ ಇದ್ದೇ ಇರುತ್ತಿತ್ತು. ಅವರಿಗೆ ಕಿರು ನಿದ್ರೆ ಯೊಂದು ಬಂತು. ಅಷ್ಟರಲ್ಲಿ ಅವರ ಬ್ಯಾಂಕ್ ಖಾತೆಯ ಕುರಿತಾದ ತಮಿಳುನಾಡು ಮರ್ಕಂಟೈಲ್ ಬ್ಯಾಂಕಿನಿಂದ ಒಂದು ಮೆಸೇಜ್ ಕೂಡ ಬಂದಿತ್ತು. ಅವರಿಗೆ ತಮ್ಮ ಖಾತೆಯಲ್ಲಿ ಹೆಚ್ಚು ದುಡ್ಡಿಲ್ಲ ಎಂಬುದು ಮೊದಲೇ ಗೊತ್ತಿತ್ತು. ಆದರೆ ಬಂದ ಮೆಸೇಜ್ ಪ್ರಕಾರ ಅವರ ಖಾತೆಗೆ 9000000001 ರು. ಜಮಾ ಆಗಿತ್ತು. ಅವರು ಕಣ್ಣರಳಿಸಿ ನೋಡಿದರು. ಹೌದು, ಬಂದಿರುವುದು 9 ಸಾವಿರ ಕೋಟಿ ರುಪಾಯಿ ಹಣ. ಒಮ್ಮೆಗೆ ಅವರ ಹೆಂಡತಿ ನಿದ್ರೆಯ ಕನವರಿಕೆ ಹೊಡೆದು ಸುತ್ತಲೂ ನೋಡಿದರು. ಇದು ಹೇಗೆ ಎಂಬುದು ಅವರಿಗೆ ಗೊತ್ತೇ ಆಗಲಿಲ್ಲ. ಒಂದು ಕೋಟಿಗೆ 7 ಸೊನ್ನೆ ಎಂದು ಯಾರೋ ಹೇಳಿದ್ದು ಅವರಿಗೆ ನೆನಪಾಯಿತು. ಮೂಲತಃ ಅವರ ಖಾತೆಯಲ್ಲಿದ್ದುದು 105 ರುಪಾಯಿ ಮಾತ್ರ. ಹತ್ತು ನಿಮಿಷಗಳಲ್ಲಿ ಅವರು ನಿಜಕ್ಕೂ ಆಘಾತಕ್ಕೆ ಒಳಗಾಗಿದ್ದರು. ವಿಚಾರದ ಸತ್ಯತೆ ಅರಿಯಲು ಅವರು ಒಬ್ಬ ಮಿತ್ರರಿಗೆ 21 ಸಾವಿರ ರುಪಾಯಿ ಟ್ರಾನ್ಸ್‌ಫರ್ ಮಾಡಿದರು, ಅದು ಮಿತ್ರನಿಗೆ ತಲುಪಿತ್ತು ಕೂಡ. ಅದಾಗಲೇ ಅವರ ಖಾತೆಗೆ ಹಣ ಬಂದು 28 ನಿಮಿಷಗಳಾಗಿದ್ದವು. ಅವರ ಖುಷಿಗೆ ಪಾರವೇ ಇರಲಿಲ್ಲ. ಇಷ್ಟೊಂದು ದುಡ್ಡಿಟ್ಟುಕೊಂಡು ಏನು ಮಾಡಬಹುದು ಎಂಬ ಬಗ್ಗೆ ಅವರ ಮನಸ್ಸಿನಲ್ಲಿ ಅದಾಗಲೇ ಹಲವು ಯೋಜನೆಗಳು ಸುಳಿದಿದ್ದವು. ಹೀಗೆ ಹಣ ವರ್ಗಾವಣೆ ಆದ 30 ನಿಮಿಷಗಳ ಒಳಗಾಗಿ ಅವರಿಗೆ ಬ್ಯಾಂಕ್ ಅಧಿಕಾರಿಗಳಿಂದ ಕರೆ ಬರಲು ಶುರುವಾಯಿತು. ಅವರು ಕೂಡಲೇ ಹಣ ವಾಪಸು ಮಾಡುವಂತೆ ಬೇಡಿಕೆ ಇಟ್ಟಿದ್ದರು. ಅವರು ಕೇವಲ 30 ನಿಮಿಷಗಳ ಅವಧಿಗೆ 9 ಸಾವಿರ ಕೋಟಿ ರುಪಾಯಿ ಮಾಲೀಕರಾಗಿದ್ದರು. ಅದರಲ್ಲವರು 21 ಸಾವಿರ ರುಪಾಯಿ ಖರ್ಚು ಮಾಡಿದ್ದರು ಕೂಡ. ಮರುದಿನ ಬೆಳಗ್ಗೆ ಬ್ಯಾಂಕಿನವರು ಪೊಲೀಸರಿಗೆ ದೂರಿತ್ತು, ಈ ವ್ಯಕ್ತಿ ಬಳಸಿಕೊಂಡಿರುವ 21 ಸಾವಿರ ರುಪಾಯಿ ವಾಪಸು ಕಟ್ಟುವಂತೆ ಕೇಳಿಕೊಂಡಿದ್ದರು. ತಮ್ಮದೇನೂ ತಪ್ಪಿಲ್ಲ ಎಂದು ಈ ವ್ಯಕ್ತಿ ಅಲವತ್ತುಕೊಂಡರೂ ಬ್ಯಾಂಕ್ ಅಧಿಕಾರಿಗಳು ಕೇಳುವ ಸ್ಥಿತಿಯಲ್ಲಿರಲಿಲ್ಲ. ಅಷ್ಟರೊಳಗೆ ಅವರು ವಕೀಲರ ಸಹಾಯ ಪಡೆದಿದ್ದರು. ರಾಜಕುಮಾರ್ ಖರ್ಚು ಮಾಡಿರುವ ಹಣ ವಾಪಸು ಕೊಡಬೇಕಿಲ್ಲ, ಬದಲಾಗಿ ಅವರಿಗೆ ಒಂದು ಕಾರ್ ಲೋನ್ ಆಫರ್ ಕೊಡೋಣ ಎಂದು ಬ್ಯಾಂಕಿನವರು ಆಗಲೇ ನಿರ್ಧರಿಸಿದ್ದರು. ಬ್ಯಾಂಕ್ ಖಾತೆಗಳಲ್ಲಿ ಆಗುವ ಗಡಿಬಿಡಿಗಳಲ್ಲಿ ಇದೂ ಒಂದು. ಇಂಥ ಘಟನೆ ನಡೆದಾಗ ಆಗುವ ತಲ್ಲಣ ಊಹಿಸುವುದಕ್ಕೂ ಅಸಾಧ್ಯ. ಯಾರೂ ರಾಜಕುಮಾರ್ ಅವರ ನಡವಳಿಕೆಯ ಬಗ್ಗೆ ಸಂದೇಹಿಸು ವುದು ಸಾಧ್ಯವಿರಲಿಲ್ಲ. ನೀವು ಎಂದಾದರೂ ಇಂಥ ವಿಚಿತ್ರ ಸನ್ನಿವೇಶ ಎದುರಿಸಿದಲ್ಲಿ, ನಿಮ್ಮ ದೃಷ್ಟಿಕೋನ ಸರಿಯಿದೆ ಎಂದಾದಲ್ಲಿ, ಇನ್ನೊಬ್ಬರ ದೃಷ್ಟಿ ಕೋನದಲ್ಲಿ ಅದು ತಪ್ಪಿರಲೂಬಹುದು. ಆಗ ಯಾರಾದರೂ ವಿಶೇಷಜ್ಞರ ನೆರವು ಪಡೆಯುವುದು ವಾಸಿ. ಇಂಥ ಸಮಸ್ಯೆಯಿಂದ ಆದಷ್ಟು ಬೇಗ ಹೊರ ಬರುವುದು ಹೇಗೆ ಎಂಬ ಬಗ್ಗೆ ಯೋಚಿಸಬೇಕು.

ಪಾಕಿಸ್ತಾನದ ಭ್ರಷ್ಟ ಪ್ರಧಾನಮಂತ್ರಿಗಳು

ಪಾಕಿಸ್ತಾನದಲ್ಲಿ, ಅದರ ಹುಟ್ಟಿನಿಂದಲೂ ರಾಜಕೀಯದ ಅಸ್ಥಿರತೆ ಕಾಡುತ್ತಿದೆ. ಅಲ್ಲಿನ ಮಿಲಿಟರಿ ಅಧಿಕಾರಿಗಳು ಚುನಾಯಿತ ಪ್ರತಿನಿಧಿಗಳನ್ನು ಆಡಳಿತ ನಡೆಸಲು ಬಿಟ್ಟಿಲ್ಲ. ಅಧಿಕಾರಕ್ಕೆ ಬಂದ ಪ್ರಧಾನಮಂತ್ರಿಗಳು ಭ್ರಷ್ಟಾಚಾರದಲ್ಲಿ ಮಿಂದೆದ್ದು ಸಾವಿರಾರು ಕೋಟಿ ಹಣವನ್ನು ಲೂಟಿ ಮಾಡಿರುವ ಆರೋಪಗಳಿವೆ. ಅಧಿಕಾರಕ್ಕೆ ಬಂದ ನಂತರ ಭ್ರಷ್ಟಾಚಾರದಲ್ಲಿ ತೊಡಗಿ ವಿದೇಶಗಳಲ್ಲಿ ಆಸ್ತಿ ಮಾಡಿರುವ ಆರೋಪಗಳಿವೆ.

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ಪಾಕಿಸ್ತಾನದ ಇತಿಹಾಸದಲ್ಲಿ ಒಬ್ಬ ಪ್ರಧಾನ ಮಂತ್ರಿಯೂ ಐದು ವರ್ಷಗಳ ಸುದೀರ್ಘ ಆಡಳಿತ ಅವಧಿಯನ್ನು ಪೂರ್ಣಗೊಳಿಸಿದ ಉದಾಹರಣೆ ಇಲ್ಲ. ಏಕೆಂದರೆ, ಚುನಾಯಿತರಾದ ಸರಕಾರದ ಮುಖ್ಯಸ್ಥರನ್ನು ಭ್ರಷ್ಟಾಚಾರದ ಆರೋಪದ ಕಾರಣದಿಂದ ವಜಾಗೊಳಿಸಲಾಗಿದೆ. ಪಾಕಿಸ್ತಾನದ ಮಾಜಿ ಪ್ರಧಾನಮಂತ್ರಿ ನವಾಜ್ ಷರೀಫ್ ನಡೆಸಿದ ಭ್ರಷ್ಟಾಚಾರದ ಇತಿಹಾಸವು ಪನಾಮ ಪೇಪರ್ಸ್ ಹಗರಣವು ಬೆಳಕಿಗೆ ಬರುವ ಮುನ್ನವೇ ಪ್ರಾರಂಭವಾಗಿತ್ತು. ಷರೀಫ್ ಪಾಕಿಸ್ತಾನ ಮುಸ್ಲಿಂ ಲೀಗ್ (ಎನ್) ಪಕ್ಷದ ಅಧ್ಯಕ್ಷರಾಗಿ, ಉಕ್ಕಿನ ಗಿರಣಿ ಸಮೂಹ ಸಂಸ್ಥೆಗಳ ಮಾಲೀಕರಾಗಿ, ಶ್ರೀಮಂತ ಕೈಗಾರಿಕೋದ್ಯಮಿಗಳಲ್ಲಿ ಒಬ್ಬರಾಗಿದ್ದರು. 1977ರಿಂದ 1988ರವರೆಗೆ ಅಧಿಕಾರದಲ್ಲಿದ್ದ ಮಿಲಿಟರಿ ನಾಯಕ ಜಿಯಾ ಉಲ್ ಹಕ್‌ನ ಅಡಿಯಲ್ಲಿ ಆಶ್ರಯ ಪಡೆದು, ಮೊದಲ ಬಾರಿಗೆ ಹಣಕಾಸು ಸಚಿವರಾಗಿ ನೇಮಕವಾದರು. ಅಸ್ಥಿರವಾದ ಸಂಪ್ರದಾಯವಾದಿಗಳ ಒಕ್ಕೂಟದಿಂದ ಪ್ರೋತ್ಸಾಹಿಸಲ್ಪಟ್ಟು 1985ರಲ್ಲಿ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದರು. ನಂತರ 1988ರಲ್ಲಿ ಮರು ಆಯ್ಕೆಯಾಗಿ ಮತ್ತು ಅಂತಿಮವಾಗಿ 1990ರಲ್ಲಿ ರಾಷ್ಟ್ರದ ಪ್ರಧಾನ ಮಂತ್ರಿಯಾಗುವಲ್ಲಿ ಯಶಸ್ವಿಯಾಗಿದ್ದರು. ತದನಂತರ ಇವರ ಮೇಲೆ, ಚುನಾವಣೆಯನ್ನು ದುರ್ಬಳಕೆ ಮಾಡಿಕೊಂಡ ಆರೋಪ ಬಂದಿತ್ತು. ಪಾಕಿಸ್ತಾನಿ ಗುಪ್ತಚರ ಸಂಸ್ಥೆ ಐಎಸ್‌ಐ, ಇವರ ಚುನಾವಣಾ ಪ್ರಚಾರಕ್ಕೆ ಹಣದ ಹೊಳೆಯನ್ನು ಹರಿಸಿತ್ತು. 2016ರಲ್ಲಿ ಸೋರಿಕೆಯಾದ 'ಪನಾಮಾ ಪೇಪರ್ಸ್', ನವಾಜ್ ಷರೀಫ್ ಅವರ ಭ್ರಷ್ಟ ಚಟುವಟಿಕೆಗಳನ್ನು ಬೆಳಕಿಗೆ ತಂದಿತ್ತು. ಸೆಂಟ್ರಲ್ ಲಂಡನ್‌ನಲ್ಲಿರುವ ಅವರ ಕುಟುಂಬದ ಆಸ್ತಿಯ ಮಾಲೀಕತ್ವಕ್ಕೆ ಸಂಬಂಧಿಸಿದ ಆರೋಪಗಳು ಅಕ್ರಮ ಹಣದ ಜಾಡಿನ ಹಿನ್ನೆಲೆಯನ್ನು ಹೊಂದಿದ್ದವು. ಇವರ ಅಕ್ರಮ ಆಸ್ತಿ ಗಳಿಕೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ಜುಲೈ 28, 2017ರಂದು ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಲು ಸರ್ವೋಚ್ಚ ನ್ಯಾಯಾಲಯವು ಅನುಮತಿ ನೀಡಿತ್ತು. ನವಾಜ್ ಷರೀಫ್ ಆರಂಭದಲ್ಲಿ ತಾವು ಮಾಡಿದ ಅಕ್ರಮಗಳನ್ನು ನಿರಾಕರಿಸಿದರೂ, ತೀರ್ಪಿನ ಸ್ವಲ್ಪ ಸಮಯದ ನಂತರ ಔಪಚಾರಿಕವಾಗಿ ರಾಜೀನಾಮೆ ನೀಡಬೇಕಾಯಿತು.

ಪಾಕಿಸ್ತಾನದ ಮಾಜಿ ಪ್ರಧಾನಿ ಮತ್ತು ಅಧ್ಯಕ್ಷ ಜುಲ್ಫಿಕರ್ ಅಲಿ ಭುಟ್ಟೋ ಮಗಳು, ಆಕ್ಸ್‌ಫರ್ಡ್ ಮತ್ತು ಹಾರ್ವರ್ಡ್ ಪದವೀಧರೆಯಾದ ಬೆನಜೀರ್ ಭುಟ್ಟೋ ಸಕ್ರಿಯ ರಾಜಕಾರಣಕ್ಕೆ ಕಾಲಿಡುವ ಮೊದಲು, ವಂಚಿತ ಮತ್ತು ಹಿಂದುಳಿದ ವರ್ಗದವರ ರಕ್ಷಕಿ ಮತ್ತು ಪ್ರಜಾಪ್ರಭುತ್ವದ ಸ್ವಾತಂತ್ರ್ಯದ ಪ್ರವರ್ತಕರಾಗಿ ತಮ್ಮನ್ನು ತಾವು ತೋರಿಸಿಕೊಂಡಿದ್ದರು. ಹಾರ್ವರ್ಡ್ ವಿಶ್ವವಿದ್ಯಾಲಯದ ಆರಂಭದ ಭಾಷಣದಲ್ಲಿ, ರಾಜಕಾರಣಿಗಳ ದುರಾಸೆಯು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಸಂಪನ್ಮೂಲಗಳನ್ನು ಹೇಗೆ ಲೂಟಿ ಮಾಡುತ್ತದೆ, ಸಾಮಾನ್ಯ ಜನರನ್ನು ಹೇಗೆ ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳಲಾಗುತ್ತದೆ, ಜನರಿಗೆ ಹೇಗೆ ದ್ರೋಹ ಮಾಡಿದ್ದಾರೆ ಮತ್ತು ಅವರ ಸಾಮಾಜಿಕ-ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯವಾದ ವಿಧಾನಗಳಿಂದ ಅವರನ್ನು ಹೇಗೆ ತೆಗೆದು ಹಾಕಿದ್ದಾರೆ ಎಂಬ ದೊಡ್ಡ ದೊಡ್ಡ ಮಾತುಗಳನ್ನಾಡಿದ್ದರು. ಇಷ್ಟೆಲ್ಲಾ ಭಾಷಣ ಮಾಡಿದ್ದ ಬೆನಜೀರ್ ಭುಟ್ಟೋ ಪಾಕಿಸ್ತಾನದ ಪ್ರಧಾನಮಂತ್ರಿಯಾಗಿ ತಮ್ಮ ಎರಡು ಅವಧಿಯ ಅಧಿಕಾರದಲ್ಲಿ, ಮುಸ್ಲಿಂ ರಾಷ್ಟ್ರದ ಮೊದಲ ಮುಖ್ಯಸ್ಥಳಾಗಿ, ನೂರಾರು ಮಿಲಿಯನ್ ಡಾಲರ್ ಮೌಲ್ಯದ ಸಂಪತ್ತನ್ನು ಸಂಪಾದಿಸಿದ್ದರು. ಆಕೆಯ ಮೊದಲ ಸರಕಾರವನ್ನು ಆಗಸ್ಟ್ 6, 1990ರಂದು ಅಂದಿನ ಅಧ್ಯಕ್ಷ ಗುಲಾಮ್ ಇಶಾಕ್ ಖಾನ್ ಭ್ರಷ್ಟಾಚಾರದ ಆರೋಪದಡಿ ವಜಾಗೊಳಿಸಿದ್ದರು.

ಪಾಕಿಸ್ತಾನಿ ಸೇನಾ ಮುಖ್ಯಸ್ಥ ಪರ್ವೇಜ್ ಮುಷರಫ್ ಆಡಳಿತದ ಸಮಯದಲ್ಲಿ ಬೆನಜೀರ್ ಭುಟ್ಟೋ ಅವರ ಭ್ರಷ್ಟಾಚಾರದ ಗತಕಾಲದ ಇತಿಹಾಸದ ಅನಾವರಣವಾಯಿತು. ಆಕೆಯ ಸ್ವಿಸ್ ವಕೀಲ ಮತ್ತು ಕುಟುಂಬದ ನಿಕಟ ಸ್ನೇಹಿತ ಜೆನ್ಸ್ ಶ್ಲೆಗೆಲ್ಮಿಚ್‌ನಿಂದ ಪಡೆದ ದಾಖಲೆಗಳು ಸೋರಿಕೆಯಾಗಿದ್ದವು. ಒಂದು ವ್ಯವಹಾರದಲ್ಲಿ ಮಾರಾಟಗಾರನು ಹೇಳಿದ ಮೂಲ ಬೆಲೆ 10 ಮಿಲಿಯನ್ ಡಾಲರ್ ಆಗಿತ್ತು, ಆದರೆ ಅಂತಿಮವಾಗಿ ವ್ಯವಹಾರವನ್ನು 1 ಮಿಲಿಯನ್ ಡಾಲರ್ ನಗದು ರೂಪದಲ್ಲಿ



ಮುಗಿಸಲು ತೀರ್ಮಾನಿಸಲಾಗಿತ್ತು. ಸೋರಿಕೆಯಾದ ಪೇಪರ್‌ಗಳು ದುಬೈ ಮತ್ತು ಜಿನೀವಾದಲ್ಲಿನ ವಿವಿಧ ಖಾತೆಗಳಿಂದ ಬ್ಯಾಂಕ್ ಕಡತಗಳನ್ನು ಒಳಗೊಂಡಿದ್ದವು. ಹಣ ಪಾವತಿಗಳ ವಿವರಗಳೊಂದಿಗೆ, ಪಾವತಿಸುವ ಭರವಸೆ ನೀಡುವ ಹಿರಿಯ ಅಧಿಕಾರಿಗಳ ಪತ್ರಗಳು, ಕಮಿಷನ್‌ಗಳು ಮತ್ತು ಸಂಭಾವನೆಗಳು ಸಮ್ಮತಿಸಲ್ಪಟ್ಟ ಸಭೆಗಳನ್ನು ವಿವರಿಸುವ ಪತ್ರಗಳು, ಕಡಲಾಚೆಯ ಕಂಪನಿಗಳನ್ನು ಒಳಗೊಂಡ ಪ್ರಮಾಣಪತ್ರಗಳು, ಬ್ರಿಟಿಷ್ ವರ್ಜಿನ್ ಐಲ್ಯಾಂಡ್‌ಗಳಲ್ಲಿ ನೋಂದಾಯಿಸಿ ಹಣ ವರ್ಗಾವಣೆ ಮಾಡಿದ್ದಂಥ ಕಂಪನಿಗಳ ದಾಖಲೆಗಳು ಸಿಕ್ಕಿದ್ದವು. 1987ರಲ್ಲಿ, ಬೆನಜೀರ್ ಭುಟ್ಟೋ ಅವರು ಆಸಿಫ್ ಅಲಿ ಜರ್ದಾರಿಯನ್ನು ವಿವಾಹವಾದರು. ಇವರಿಬ್ಬರ ಮದುವೆಯ ನಂತರ ಪಾಕಿಸ್ತಾನದ ಸಾರ್ವಜನಿಕ ವಲಯದಲ್ಲಿ ಗಂಡ ಮತ್ತು ಹೆಂಡತಿಯ ನಡುವಿನ ಸಾಮಾಜಿಕ-ಆರ್ಥಿಕ ಸ್ಥಿತಿಯ ವ್ಯತ್ಯಾಸಗಳ ಬಗ್ಗೆ ಬಹಳಷ್ಟು ಚರ್ಚೆಗಳಾಗಿದ್ದವು.

1988ರಲ್ಲಿ, ಜಿಯಾ-ಉಲ್-ಹಕ್ ವಿಮಾನ ಅಪಘಾತದಲ್ಲಿ ಸಾವನ್ನಪ್ಪಿದ ನಂತರ, ಬೆನಜೀರ್ ಭುಟ್ಟೋ ಪಾಕಿಸ್ತಾನದ ಮೊದಲ ಮಹಿಳಾ ಪ್ರಧಾನ ಮಂತ್ರಿಯಾದರು.ಎರಡು ವರ್ಷದೊಳಗೆ, ಭ್ರಷ್ಟಾಚಾರ ಮತ್ತು ದುರಾಡಳಿತದ ಆಧಾರದ ಮೇಲೆ ಪಾಕಿಸ್ತಾನದ ಅಧ್ಯಕ್ಷರು ಬೆನಜೀರ್ ಭುಟ್ಟೋ ಅವರನ್ನು ವಜಾಗೊಳಿಸಿದರು. ನಂತರ ಅಧಿಕಾರಕ್ಕೆ ಬಂದ ನವಾಜ್ ಷರೀಫ್ ಸರಕಾರವು, ಬೆನಜೀರ್ ಭುಟ್ಟೋ ಅಥವಾ ಅವರ ಪತಿ ವಿರುದ್ಧ ಯಾವುದೇ ದೋಷಾರೋಪಣೆಯನ್ನು ಸಲ್ಲಿಸಲು ಸಾಧ್ಯವಾಗಲಿಲ್ಲ. ಸ್ವತಃ ನವಾಜ್ ಷರೀಫ್, ಭ್ರಷ್ಟಾಚಾರ ಮತ್ತು ದುರಾಡಳಿತಕ್ಕಾಗಿ ಅಧಿಕಾರದಿಂದ ಹೊರ ಹಾಕಲ್ಪಟ್ಟರು. 1993ರಲ್ಲಿ ಬೆನಜೀರ್ ಭುಟ್ಟೋ ಮತ್ತೊಮ್ಮೆ ಅಧಿಕಾರಕ್ಕೆ ಮರಳಿದಾಗ, ಅವಳಿ ಹುದ್ದೆಗಳನ್ನು ಅಲಂಕರಿಸಿದರು. ಪ್ರಧಾನಮಂತ್ರಿ ಮತ್ತು ಹಣಕಾಸು ಮಂತ್ರಿಯಾಗಿ, ಪಾಕಿಸ್ತಾನದ ಆದಾಯದ ಮೇಲೆ ಮುಕ್ತ ನಿಯಂತ್ರಣವನ್ನು ಪಡೆದುಕೊಂಡರು. ಅವರ ಜತೆಗೆ 1996ರಲ್ಲಿ ತಮ್ಮ ಪತಿಯನ್ನು ಹೂಡಿಕೆ ಮಂತ್ರಿಯಾಗಿ ನೇಮಿಸಿಕೊಂಡರು. ಇದು ವಾಸ್ತವಿಕವಾಗಿ ಅವರನ್ನು ಭುಟ್ಟೋ ಅವರ ಬಲಗೈ ಬಂಟನನ್ನಾಗಿ ಮಾಡಿತ್ತು.

ಮತ್ತೊಂದು ದೊಡ್ಡ ಪ್ರಮಾಣದ ಹಣಕಾಸು ಯೋಜನೆಯಲ್ಲಿ, ಮಧ್ಯಪ್ರಾಚ್ಯದ ಚಿನ್ನದ ಗಟ್ಟಿ ವ್ಯಾಪಾರಿ ಅಬ್ದುಲ್ ರಜಾಕ್ ಯಾಕೂಬ್‌ನಿಗೆ ಭುಟ್ಟೋ ಸರಕಾರ ನೀಡಿದ ವ್ಯವಹಾರವನ್ನು, ದುಬೈನಲ್ಲಿ ಆಕೆಯ ಪತಿ ಆಸೀಫ್ ಅಲಿ ಜರ್ದಾರಿ ನಿರ್ವಹಿಸುತ್ತಿದ್ದ. ಈ ವ್ಯವಹಾರದಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್‌ನ ಸಿಟಿಬ್ಯಾಂಕ್ ಖಾತೆಗೆ ಕನಿಷ್ಠ 10 ಮಿಲಿಯನ್ ಡಾಲರ್ ಹಣ ಠೇವಣಿ ಮಾಡಲಾಗಿತ್ತೆಂದು ಆರೋಪಿಸಲಾಗಿತ್ತು. ಪಾಕಿಸ್ತಾನದ ಅರಬ್ಬೀ ಸಮುದ್ರ ತೀರ ಹಿಂದಿನಿಂದಲೂ ಚಿನ್ನದ ಕಳ್ಳಸಾಗಣೆದಾರರಿಗೆ ಸ್ವರ್ಗವಾಗಿದೆ. ಭುಟ್ಟೋ ಅವರ ಎರಡನೇ ಅವಧಿಯವರೆಗೆ, ವರ್ಷಕ್ಕೆ ನೂರಾರು ಮಿಲಿಯನ್ ಡಾಲರ್ ಮೌಲ್ಯದ ವ್ಯಾಪಾರ ಯಾವುದೇ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ಇರಲಿಲ್ಲ, ದೊಡ್ಡ ಪ್ರಮಾಣದ ಚಿನ್ನದ ಗಟ್ಟಿಗಳನ್ನು, ಪರ್ಷಿಯನ್ ಗಲ್ಫ್ ಮತ್ತು ಅಸುರಕ್ಷಿತ ಪಾಕಿಸ್ತಾನಿ ಕರಾವಳಿಯ ನಡುವೆ ಪ್ರಯಾಣಿಸುವ ವಿಮಾನಗಳು ಮತ್ತು ದೋಣಿಗಳಲ್ಲಿ ಸಾಗಿಸಲಾಗುತ್ತಿತ್ತೆಂದು ಹೇಳಲಾಗುತ್ತದೆ. ಪಾಕಿಸ್ತಾನದ ಕಸ್ಟಮ್ಸ್ ಆದಾಯವನ್ನು ಹೆಚ್ಚಿಸುವ ಮೂಲಕ ಭುಟ್ಟೋ ದಂಪತಿಗಳು ಪ್ರಭಾವಶಾಲಿ ಲಾಭವನ್ನು ಗಳಿಸಿದರು. ಕೆಲವೇ ಕೆಲವು ಪಾಕಿಸ್ತಾನಿಗಳು ಆದಾಯ ತೆರಿಗೆಯನ್ನು ಪಾವತಿಸುತ್ತಾರೆ ಎಂಬುದನ್ನು ಗಣನೆಗೆ ತೆಗೆದುಕೊಂಡು, ಕಸ್ಟಮ್ಸ್ ಆದಾಯ ದೇಶದಲ್ಲಿ ದೊಡ್ಡ ಮಟ್ಟದ ಆದಾಯವನ್ನು ನೀಡುತ್ತದೆಯೆಂದು ಹೇಳಲಾಗಿತ್ತು. ಆದರೆ ಭುಟ್ಟೋ ದಂಪತಿಗಳು ಶುರುಮಾಡಿದ್ದ ವ್ಯವಸ್ಥೆ ಹಲವು ವರ್ಷಗಳಿಂದ ಭ್ರಷ್ಟಗೊಂಡಿತ್ತು. ವ್ಯವಹಾರಗಳ ಸರಕಾರಿ ಬಾಧ್ಯತೆಗಳಿಂದ ತಪ್ಪಿಸಿಕೊಳ್ಳಲು ಲಂಚವನ್ನು ನೀಡುವ ಪ್ರಸಂಗ ಪಾಕಿಸ್ತಾನದಲ್ಲಿ ಸಾಮಾನ್ಯವಾಗಿಬಿಟ್ಟಿದೆ.

ಬೆನಜೀರ್ ಭುಟ್ಟೋ ಅವರ ಎರಡು ಅಧಿಕಾರಾವಧಿಗಳಲ್ಲಿನ ಹಗರಣಗಳ ವಿಚಾರಣೆಯು, ಅವರ ಪತಿ ಮತ್ತು ಇತರ ಕುಟುಂಬ ಸದಸ್ಯರ ಹೆಸರಿನಲ್ಲಿರುವ ಐಷಾರಾಮಿ ಸಾಗರೋತ್ತರ ಆಸ್ತಿಗಳ ದೊಡ್ಡದೊಂದು ಪಟ್ಟಿಯನ್ನೇ ಬಿಚ್ಚಿಟ್ಟಿದೆ. ಲಂಡನ್‌ನಲ್ಲಿರುವ ವಿವಿಧ ಅತಿರಂಜಿತ ರಾಕ್‌ವುಡ್ ಅಪಾರ್ಟ್ಮೆಂಟ್, 355-ಎಕರೆ ಎಸ್ಟೇಟ್ ಮತ್ತು ನಾರ್ಮಂಡಿಯಲ್ಲಿ 2.5 ಮಿಲಿಯನ್ ಡಾಲರ್ ಮೌಲ್ಯದ ದೊಡ್ಡ ಬಂಗಲೆ (ಇದನ್ನು ಹೌಸ್ ಆಫ್ ದಿ ವೈಟ್ ಕ್ವೀನ್ ಎಂದು ಕರೆಯಲಾಗುತ್ತದೆ) ಹೀಗೆ ಸಾಗುತ್ತದೆ ಪಟ್ಟಿ. 1990ರ ದಶಕದಲ್ಲಿ ಜರ್ದಾರಿ ಅವರ ಅಂಗಸಂಸ್ಥೆಗಳು ಖರೀದಿಸಿದ ಸುಮಾರು 4 ಮಿಲಿಯನ್ ಡಾಲರ್ ಮೌಲ್ಯದ, ಫ್ಲೋರಿಡಾದ ಪಾಮ್ ಬೀಚ್‌ನಲ್ಲಿರುವ ಕಂಟ್ರಿ ಕ್ಲಬ್ ಮತ್ತು ಪೋಲೋ ರಾಂಚ್ ಸೇರಿದಂತೆ ಇತರ ಸಾಗರೋತ್ತರ ಬ್ಯಾಂಕ್ ಖಾತೆಗಳು ಮತ್ತು ಆಸ್ತಿಗಳನ್ನು ತನಿಖೆ ಮಾಡಲು ಇಸ್ಲಾಮಾಬಾದ್ ಅಮೆರಿಕ ನ್ಯಾಯಾಂಗ ಇಲಾಖೆಗೆ ವಿನಂತಿಸಿತ್ತು. 1996ರಲ್ಲಿ ಭ್ರಷ್ಟಾಚಾರದ ಆರೋಪದಡಿಯಲ್ಲಿ ಬೆನಜೀರ್ ಭುಟ್ಟೋ ಅವರನ್ನು ಕಚೇರಿಯಿಂದ ಹೊರಹಾಕಿದ ನಂತರ, ಆಕೆಯ ಪತಿಯೊಂದಿಗೆ ಇಬ್ಬರಿಗೂ ಐದು ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಲಾಯಿತು.

ಸೈಯದ್ ಯೂಸಫ್ ರಾಜಾ ಗಿಲಾನಿ 2008ರ ಮಾರ್ಚ್ 25ರಿಂದ ಪಾಕಿಸ್ತಾನದ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿದರು. ನಂತರ 2012ರ ಏಪ್ರಿಲ್ 26ರಂದು ಪಾಕಿಸ್ತಾನದ ಸರ್ವೋಚ್ಚ ನ್ಯಾಯಾಲಯ ಅವರನ್ನು ಪದವಿಯಿಂದ ವಜಾಗೊಳಿಸಿತ್ತು. 1993ರಿಂದ 1997ರವರೆಗೆ ರಾಷ್ಟ್ರೀಯ ಅಸೆಂಬ್ಲಿಯ ಸ್ಪೀಕರ್ ಆಗಿದ್ದಾಗ ಅವರು ತಮ್ಮ ಅಧಿಕಾರದ ಸ್ಥಾನವನ್ನು ದುರುಪಯೋಗಪಡಿಸಿಕೊಂಡರು ಎಂಬ ಆರೋಪದ ಮೇಲೆ ಮಿಲಿಟರಿ ನಿಯಂತ್ರಿತ ರಾಷ್ಟ್ರೀಯ ಹೊಣೆಗಾರಿಕೆ ಬ್ಯೂರೋ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಿಲಿಟರಿ ಪೋಲೀಸರು ಫೆಬ್ರವರಿ 11, 2001ರಂದು ಅವರನ್ನು ಬಂಧಿಸಿದ್ದರು. 600 ಜನರನ್ನು ತನ್ನ ಘಟಕಗಳಿಂದ ನೇಮಿಸಿಕೊಂಡ ಮತ್ತು ಅವರನ್ನು ಸರಕಾರಿ ವೇತನದಾರರ ಪಟ್ಟಿಗೆ ಸೇರಿಸಿದ್ದ ಆರೋಪ ಅವರ ಮೇಲಿತ್ತು. ಅಧಿಕೃತ ಸಾರಿಗೆ, ಅಧಿಕೃತ ದೂರವಾಣಿಗಳ ದುರ್ಬಳಕೆ, ಲಾಹೋರ್ ಮತ್ತು ಮುಲ್ತಾನ್‌ನಲ್ಲಿ ಕ್ಯಾಂಪ್ ಕಚೇರಿಗಳನ್ನು ಸ್ಥಾಪಿಸಿ, ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಬೆಲೆಗೆ ಐಷಾರಾಮಿ ವಾಹನಗಳನ್ನು ಖರೀದಿಸುವ ಮೂಲಕ ಲಕ್ಷಾಂತರ ರುಪಾಯಿಗಳನ್ನು ಲೂಟಿ ಮಾಡಿದ್ದಾರೆಂದು ಆರೋಪಿಸಲಾಗಿತ್ತು. ಗಿಲಾನಿ ಅಕ್ರಮಗಳಿಂದಾಗಿ ಪಾಕಿಸ್ತಾನದ ಖಜಾನೆಯು ವಾರ್ಷಿಕವಾಗಿ 30 ಮಿಲಿಯನ್ ರುಪಾಯಿಗಳಿಗಿಂತ ಹೆಚ್ಚು ನಷ್ಟವನ್ನು ಅನುಭವಿಸಿದೆ ಎಂದು ಎನ್‌ಎಬಿ ಹೇಳಿಕೊಂಡಿದೆ. ಉತ್ತರದಾಯಿತ್ವ ನ್ಯಾಯಾಲಯವು ಅವರಿಗೆ ಐದು ವರ್ಷಗಳ ಕಠಿಣ ಜೈಲುಶಿಕ್ಷೆ ಮತ್ತು 1 ಮಿಲಿಯನ್ ರುಪಾಯಿಗಳ ದಂಡವನ್ನು ವಿಧಿಸಿತ್ತು. 10 ವರ್ಷಗಳ ಅವಧಿಗೆ ಯಾವುದೇ ಹಣಕಾಸಿನ ಸಂಸ್ಥೆಗಳಿಂದ ಸಾರ್ವಜನಿಕ ಕಚೇರಿಯನ್ನು ಹೊಂದಲು ಅಥವಾ ಯಾವುದೇ ಹಣಕಾಸಿನ ಲಾಭವನ್ನು ಪಡೆಯದಂತೆ ನ್ಯಾಯಾಲಯವು ಗಿಲಾನಿಯನ್ನು ನಿರ್ಬಂಧಿಸಿತ್ತು.

ಪಾಕಿಸ್ತಾನದಲ್ಲಿ, ಅದರ ಹುಟ್ಟಿನಿಂದಲೂ ರಾಜಕೀಯದ ಅಸ್ಥಿರತೆ ಕಾಡುತ್ತಿದೆ. ಅಲ್ಲಿನ ಮಿಲಿಟರಿ ಅಧಿಕಾರಿಗಳು ಚುನಾಯಿತ ಪ್ರತಿನಿಧಿಗಳನ್ನು ಆಡಳಿತ ನಡೆಸಲು ಬಿಟ್ಟಿಲ್ಲ. ಅಧಿಕಾರಕ್ಕೆ ಬಂದ ಪ್ರಧಾನಮಂತ್ರಿಗಳು ಭ್ರಷ್ಟಾಚಾರದಲ್ಲಿ ಮಿಂದೆದ್ದು ಸಾವಿರಾರು ಕೋಟಿ ಹಣವನ್ನು ಲೂಟಿ ಮಾಡಿರುವ ಆರೋಪಗಳಿವೆ. ಅಧಿಕಾರಕ್ಕೆ ಬಂದ ನಂತರ ಭ್ರಷ್ಟಾಚಾರದಲ್ಲಿ ತೊಡಗಿ ವಿದೇಶಗಳಲ್ಲಿ ಆಸ್ತಿ ಮಾಡಿರುವ ಆರೋಪಗಳಿವೆ. ಪಾಕಿಸ್ತಾನದ ಇತಿಹಾಸ ಗಮನಿಸಿದರೆ ಅಲ್ಲಿನ ಪ್ರಧಾನ ಮಂತ್ರಿಗಳ ಮೇಲಿನ ಆರೋಪಗಳನ್ನು ಗಮನಿಸಿದರೆ ಅಲ್ಲಿ ಎಂದಿಗೂ ರಾಜಕೀಯ ಅಸ್ಥಿರತೆ ಬರುವುದು ಸಾಧ್ಯವಿಲ್ಲ.

8 ವರ್ಷದ ಹಿಂದೆ ನಡೆದಿತ್ತು ಆಪರೇಷನ್ ಸಿಂದೂರ್!

ಪಹಲ್ಗಾಮ್ ಉಗ್ರ ದಾಳಿಯ ನಂತರ ಪಾಕಿಸ್ತಾನಕ್ಕೆ ಭಾರತ ಕೊಟ್ಟ ಪ್ರತ್ಯುತ್ತರ ಇಂದು ಕೋಟ್ಯಂತರ ಭಾರತೀಯರ ಎದೆ ಉಬ್ಬುವಂತೆ ಮಾಡಿದೆ. ದೇಶದ ನಾಯಕತ್ವ ಸರಿಯಾದ ಕೈಗಳಲ್ಲಿದೆ ಎಂಬ ನಂಬಿಕೆಯನ್ನು ಕೊಟ್ಟಿದೆ. ಮುಂದಿನ ದಿನಗಳಲ್ಲಿ ದುರದೃಷ್ಟವಶಾತ್ ಕೂಡ ಎಂದಿಗೂ ಈ ದೇಶದ ಚುಕ್ಕಾಣಿ ತಪ್ಪು ಕೈಗಳಿಗೆ ಸಿಕ್ಕದಿರಲಿ. ಒಂದು ವೇಳೆ ಹಾಗೇನಾದರೂ ಆದಲ್ಲಿ ಅದು ಈ ದೇಶವನ್ನು ದಶಕಗಳಷ್ಟು ಹಿಂದೊಯ್ಯುವುದಷ್ಟೇ ಅಲ್ಲ, ಗುಲಾಮಿ ದೇಶವನ್ನಾಗಿಸೋದು ಮಾತ್ರವೂ ಅಲ್ಲ.. ಈ ಹತ್ತು ವರ್ಷಗಳ ಹೆಮ್ಮೆಯ ಇತಿಹಾಸವನ್ನು ಅಳಿಸಿ ಅಥವಾ ತಿರುಚಿ ಹಾಕುತ್ತದೆ ಎಂಬ ಮಾತನ್ನ ಬರೆದಿಟ್ಟುಕೊಳ್ಳಿ. ಅನುಮಾನವಿದ್ದರೆ, ನಮ್ಮ ಪಠ್ಯಗಳಲ್ಲಿ ನಾವು ಓದಿದ ಸುಳ್ಳು ಇತಿಹಾಸವನ್ನು, ತಿರುಚಲ್ಪಟ್ಟ ಹಿಸ್ಟರಿಯನ್ನು ಮತ್ತೊಮ್ಮೆ ನೆನಪು ಮಾಡಿಕೊಳ್ಳಿ.

ಅಂದಿನ ಕೈಗಳಿಗೆ ಮತ್ತೆ ಅಧಿಕಾರ ಸಿಕ್ಕರೆ ಅದರಲ್ಲಿ ಸರ್ಜಿಕಲ್ ಸ್ಟ್ರೈಕ್ ಉಲ್ಲೇಖವಿರುವುದಿಲ್ಲ. ಬಾಲಾಕೋಟ್ ಅಟ್ಯಾಕ್ ಬಗ್ಗೆ ಪಾಠ ಇರುವುದಿಲ್ಲ. ಉಗ್ರದಮನದ ಬಗ್ಗೆ ಪ್ರಸ್ತಾಪ ಇರುವುದಿಲ್ಲ. ಕಾರ್ಗಿಲ್ ವಿಜಯವೂ ಇರುವುದಿಲ್ಲ. ಆಪರೇಶನ್ ಸಿಂದೂರದ ಸುಳುಹೇ ಇರೋದಿಲ್ಲ. ನ್ಯಾಯಾಲಯದ ತೀರ್ಪನ್ನೂ ಮರೆಮಾಚಿ 'ಮೋದಿ ಎಂಬ ನರಹಂತಕ' ಎಂಬ ಪಾಠ ಇಡಲಾಗುತ್ತೆ. 'ಡೀಮಾನಿಟೈಸೇಷನ್ ಮಾಡಿ ದೇಶದ ಆರ್ಥಿಕತೆ ಹಾಳು ಮಾಡಿದ ಸರ್ವಾಧಿಕಾರಿ' ಎಂಬ ಸಾಲುಗಳನ್ನು ಬರೆಯಲಾಗುತ್ತೆ. 'ಜಿಎಸ್‌ಟಿ ಹೆಸರಿನಲ್ಲಿ ತೆರಿಗೆ ಸುಲಿದು ಪ್ರಜೆಗಳ ಬದುಕು ನರಕವಾಗಿಸಿದ್ದ ದೊರೆ' ಅಂತ ಬಿಂಬಿಸಲಾಗುತ್ತೆ.

ನಿಜಕ್ಕೂ ಅಂಥದ್ದೊಂದು ಭವಿಷ್ಯ ಊಹಿಸಿದರೂ ಆತಂಕವಾಗುತ್ತದೆ. ಸುಶಿಕ್ಷಿತರು, ರಾಷ್ಟ್ರಪ್ರೇಮಿಗಳು ಮತದಾನದಿಂದ ವಿಮುಖರಾಗದೇ ದೇಶದ ಧರ್ಮದ ಹಿತ ಬಯಸುವ ನಾಯಕರನ್ನು ಆಯ್ಕೆ ಮಾಡಲಿ ಎಂದು ಪ್ರಾರ್ಥಿಸುವಂತಾಗುತ್ತದೆ.

ಆಪರೇಶನ್ ಸಿಂದೂರ್‌ಗೆ ವಿರಾಮ ಸಿಕ್ಕು ವಾರಗಳೇ ಕಳೆದರೂ ಅದರ ಪ್ರಭಾವಳಿಯಿಂದ ಹೊರಬರೋದಕ್ಕೆ ಆಗಿಲ್ಲ. ಈ ಸಮಯದಲ್ಲಿ ಸೋಷಿಯಲ್ ಮೀಡಿಯಾದಲ್ಲಿ ಒಂದಷ್ಟು ಮೀಮ್‌ಗಳು ಹರಿದಾಡುತ್ತಿದ್ದವು. ಅಕ್ಷಯ್ ಕುಮಾರ್‌ಗೆ ಹೊಸ ಸಿನಿಮಾ ಮಾಡೋದಕ್ಕೆ ಕಥೆ ಸಿಕ್ತು, ಟೈಟಲ್ ಸಿಕ್ತು ಅಂತ. ದೇಶದಲ್ಲಿ ಯಾವುದೇ ಸ್ಫೂರ್ತಿದಾಯಕ ಘಟನೆ ನಡೆಯಲಿ, ರಿಯಲ್ ಹೀರೋ ಬಗ್ಗೆ ಸುದ್ದಿ ಬರಲಿ, ರಾಷ್ಟ್ರಪ್ರೇಮಕ್ಕೆ ಸಂಬಂಧಿಸಿದ ವಿಚಾರ ಚರ್ಚೆಯಾಗಲಿ ಅಥವಾ ಸೆನ್ಸೇಷನಲ್ ಸುದ್ದಿ ಹೊರಬರಲಿ, ಅಕ್ಷಯ್ ಕುಮಾರ್ ಈಗ ಅದನ್ನಿಟ್ಕೊಂಡು ಸಿನಿಮಾ ಮಾಡ್ತಾನೆ ಅಂತ ವ್ಯಂಗ್ಯವಾಣಿ ಶುರುವಾಗುತ್ತೆ.

ಹೌದು ಅಕ್ಷಯ್ ಕುಮಾರ್ ಸಾಕಷ್ಟು ರಾಷ್ಟ್ರವೀರರ, ಪ್ರೇರಣಾದಾಯಕ ವ್ಯಕ್ತಿಗಳ ಬಯೋಪಿಕ್‌ಗಳನ್ನು ನಿರ್ಮಿಸಿದ್ದಾನೆ, ನಟಿಸಿದ್ದಾನೆ. ಹಾಗಂತ ಆತ ಮಾತ್ರವೇ ನೈಜ ಘಟನೆ ಆಧರಿತ ಚಿತ್ರಗಳಲ್ಲಿ ನಟಿಸಿರೋದಾ? ಖಂಡಿತ ಇಲ್ಲ. ಕಳೆದ ಹತ್ತು ವರ್ಷಗಳಲ್ಲಿ ಹಲವಾರು ನಟರು, ದೇಶದ ಹೆಮ್ಮೆಯ ವ್ಯಕ್ತಿತ್ವಗಳ, ಆತ್ಮಕತೆಯಲ್ಲಿ ನಟಿಸಿದ್ದಾರೆ, ಚಿತ್ರನಿರ್ಮಾಣವನ್ನೂ ಮಾಡಿದ್ದಾರೆ. ಕಳೆದ ಹತ್ತು ವರ್ಷಗಳಲ್ಲಿ, ಸೇನೆಯ ಬಗ್ಗೆ ಹೆಮ್ಮೆ ತರುವಂಥ, ಪಾಕಿಸ್ತಾನದಂಥ ನೀಚ ದೇಶದ ಬಣ್ಣ ಬಯಲುಮಾಡುವಂಥ ಚಿತ್ರಗಳು ಹೆಚ್ಚು ಬಂದಿವೆ. ನಮ್ಮ ರಿಯಲ್ ಹೀರೋಗಳ ಆತ್ಮಕತೆಗಳು ಸಿನಿಮಾ ಆಗಿವೆ. ಅಂಥ ಸಿನಿಮಾ ಅಕ್ಷಯ ಕುಮಾರನೇ ಜಾಸ್ತಿ ಮಾಡಿದಾನೆ ಅಂತಾಗ್ಲಿ, ಏನೀಗ?

ಜನರಿಗೆ ನೈಜ ಇತಿಹಾಸವನ್ನು, ಸತ್ಯಗಳನ್ನು ತಿಳಿಸೋದಕ್ಕೆ, ಅದ್ಭುತ ವ್ಯಕ್ತಿಗಳನ್ನು ಪರಿಚಯಿಸೋದಕ್ಕೆ ಸಿನಿಮಾಗಿಂತ ಅತ್ಯುತ್ತಮ ಮಾಧ್ಯಮ ಬೇರೆ ಯಾವುದಿದೆ?

ಪಾಕಿಸ್ತಾನಿ ಭೂಗತ ದೊರೆಗಳನ್ನು ಹೀರೋಗಳಾಗಿ ತೋರಿಸುತ್ತಿದ್ದ, ಮುಘಲ್ ದೊರೆಗಳನ್ನು ಮಾನವತಾ ಮೂರ್ತಿಗಳಾಗಿ ತೋರುತ್ತಿದ್ದ ಸಿನಿಮಾಗಳ ಕಾಲ ಹತ್ತು ವರ್ಷದ ಹಿಂದೆಯೇ ಮುಗಿದಿದೆ. ಪಾಕಿಸ್ತಾನದ ಆಡಿಯೆನ್ಸ್

ಪದಸಾಗರ

ನವೀನ್ ಸಾಗರ್
vveditoped@gmail.com

ಗಳನ್ನೇ ಗಮನದಲ್ಲಿಟ್ಟುಕೊಂಡು, ಜಿಹಾದಿ ಲವ್ ಸ್ಟೋರಿಗಳನ್ನು ಬರೆಯುತ್ತಿದ್ದ ನೌಟಂಕಿ ಕತೆಗಳ ಸಿನಿಮಾ ಈಗ ನಡೆಯುವುದಿಲ್ಲ. ಹಿಂದೆಲ್ಲ ಪಾಕ್, ಅರಬ್ ದೇಶದ ಫ್ಯಾನ್‌ಗಳಿಗೋಸ್ಕರವೇ ಸಿನಿಮಾ ಮಾಡ್ತಾ ಇದ್ದ ಖಾನ್‌ಗಳೂ ತಮ್ಮ ಉಳಿವಿಗೆ ದೇಶಭಕ್ತಿಯ ಸಿನಿಮಾಗಳ ಮೊರೆಹೊಕ್ಕಿದ್ದಾರೆ. ಆದರೆ ಈ ನಕಲೀತನ ನಂಬುವಷ್ಟು ಅಮಾಯಕರು ಇಂದಿನ ಭಾರತದಲ್ಲಿಲ್ಲ.

ಈಗ ಅಕ್ಷಯ್ ಕುಮಾರ್, ವಿವೇಕ್ ಅಗ್ನಿಹೋತ್ರಿ, ಸುದಿಪ್ತೋ ಸೇನ್, ಶಿವಂ ನಾಯರ್, ಮುಂತಾದ ನಿರ್ದೇಶಕರು ದೇಶಭಕ್ತಿ ಪಸರಿಸೋ ನೈಜ ಘಟನೆ ಆಧರಿತ ಚಿತ್ರಗಳನ್ನು ನಿರ್ಮಿಸಿದರೆ, ಇನ್ನೊಂದು ಕೊಂಕು ಏಳುತ್ತಿದೆ. ಇವರೆಲ್ಲ ದೇಶಭಕ್ತಿಯನ್ನು ವ್ಯಾಪಾರ ಮಾಡ್ಕೊಳ್ತಾ ಇದಾರೆ, ಸಿನಿಮಾ ಮಾಡಿ ಜನರನ್ನು ಮರುಳು ಮಾಡಿ ಹಣ ಮಾಡ್ಕೊಳ್ತಾ ಇದಾರೆ ಅಂತ!

ಅರೆ ಸ್ವಾಮೀ... ಮಾಡ್ಕೊಳ್ಳಿ ಬಿಡಿ. ನೆಗೆಟಿವಿಟಿ ಬಿತ್ತೋ, ಸುಳ್ಳು ಪ್ರೊಪಗ್ಯಾಂಡಾ ಹರಡೋ, ಭಯೋತ್ಪಾದನೆ ಪ್ರೊತ್ಸಾಹಿಸೋ, ಉಗ್ರರನ್ನು ಹೀರೋ ಮಾಡೋ, ಶತ್ರುದೇಶವನ್ನು ಸ್ವರ್ಗ ಎಂಬಂತೆ ತೋರೋ ಸಿನಿಮಾಗಳನ್ನ ಮಾಡಿ ಹಣ ಮಾಡ್ಕೊಳೋಳ್ತಾ ಇಲ್ವಲ್ಲ!

ಹೀಗೆ ಕೊಂಕು ನುಡಿಯೋ ವ್ಯಕ್ತಿಗಳಿಗೂ ಅವಕಾಶ ಇದೆಯಲ್ಲ.. ಅವ್ರೂ ದೇಶಭಕ್ತಿಯ ಸಿನಿಮಾ ಮಾಡಿ ಹಣ ಮಾಡಲಿ. ಬೇಡ ಅಂದವರಾರು? ಅಥವಾ ಅಂಥ ಸಿನಿಮಾ ಮಾಡಿ, ಬರುವ ಲಾಭವನ್ನೆಲ್ಲ ದೇಶದ ಒಳಿತಿಗೆ ದಾನ ನೀಡಲಿ. ಊಹೂಂ. ಅವರಿಂದ ಸಾಧ್ಯವಿಲ್ಲ.

ಇದೆಲ್ಲ ಆಲೋಚನೆಗಳು ಬರೋದಕ್ಕೆ ಕಾರಣ ಇತ್ತೀಚೆಗೆ ಬಿಡುಗಡೆಯಾದ 'ದಿ ಡಿಪ್ಲೊಮೆಟ್' ಎಂಬ ಹಿಂದಿ ಚಲನಚಿತ್ರ. 2017ರಲ್ಲಿ ನಡೆದ ಒಂದು ನೈಜ ಘಟನೆಯ ಆಧರಿಸಿ ಬಂದಿರೋ ಚಿತ್ರ ಡಿಪ್ಲೊಮೆಟ್. 2017 ಅಂದ್ರೆ ಬಹಳ ಹಳೆಯ ಕಥೆ ಏನಲ್ಲ. ಇದೇ ಮೇ ತಿಂಗಳಿಗೆ ಎಂಟು ವರ್ಷ. ದೇಶ ಕಂಡ ಹೆಮ್ಮೆಯ ರಾಜಕಾರಣಿ ಸುಷ್ಮಾ ಸ್ವರಾಜ್ ಅವರು ವಿದೇಶಾಂಗ ಸಚಿವೆಯಾಗಿದ್ದ ಹೊತ್ತು. ಬಹುಶಃ ಸರಿಯಾಗಿ ಯೋಚಿಸಿ ನೋಡಿದರೆ 2017ರಲ್ಲಿ ಸುಷ್ಮಾ ಸ್ವರಾಜ್ ನಡೆಸಿದ ಆ ಆಪರೇಶನ್‌ಗೆ 'ಆಪರೇಶನ್ ಸಿಂದೂರ' ಎಂಬ ಹೆಸರಿಡಬಹುದಿತ್ತು. ಯಾವತ್ತಿಗೂ ದೊಡ್ಡ ಹಣೆಬೊಟ್ಟು, ಬೈತಲೆಯಲ್ಲಿ ಕುಂಕುಮ ಹೊತ್ತು ಸಾಂಪ್ರದಾಯಿಕ ಸೀರೆಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಸುಷ್ಮಾ ಸ್ವರಾಜ್ ಅಂದು ನೀಚನೊಬ್ಬನ ಕೈಗೆ ಸಿಕ್ಕು ಪಾಕಿಸ್ತಾನದ ಪಾಲಾಗಿ ನರಕ ಅನುಭವಿಸುತ್ತಿದ್ದ ಭಾರತೀಯ ಹೆಣ್ಮಗಳನ್ನು ಬಿಡಿಸಿಕೊಂಡು ಬಂದ ಕಥೆ ಇದೆಯಲ್ಲ, ಅದು ಕೂಡ ಆಪರೇಷನ್ ಸಿಂದೂರವೇ.

ಉಜ್ಮಾ ಅಹ್ಮದ್ ಎಂಬ ಮುಸಲ್ಮಾನ ಹೆಣ್ಮಗಳು, ಅಪರೂಪದ ಕಾಯಿಲೆಗೆ ತುತ್ತಾದ ತನ್ನ ಮಗಳನ್ನು ಉಳಿಸಿಕೊಳ್ಳುವ ಹೋರಾಟ ನಡೆಸುತ್ತಾ ಇರ್ತಾಳೆ. ಮಲೇಶಿಯಾದಲ್ಲಿ ಗೆಳತಿಯ ಕುಟುಂಬದ ಜತೆ ಇದ್ದಾಗ ಅಲ್ಲಿ ಆಕೆಗೆ ತಾಹಿರ್ ಎಂಬ ಟ್ಯಾಕ್ಸಿ ಡ್ರೈವರ್ ಪರಿಚಯವಾಗ್ತಾನೆ. ಸಂಭಾವಿತನಂತೆ ನಟಿಸಿ, ನಂಬಿಕೆ ಹುಟ್ಟಿಸಿ, ನಿನ್ನ ಮಗಳ ಜವಾಬ್ದಾರಿ ಇನ್ಮುಂದೆ ನನ್ನದು ಕೂಡ ಎಂದು ಹೇಳಿ, ಎಮೋಷನಲಿ ಟ್ರ್ಯಾಪ್ ಮಾಡುತ್ತಾನೆ. ಪಾಕಿಸ್ತಾನಕ್ಕೆ ಹೋಗೋಣ. ನ್ಯಾಚುರೋಪಥಿ ಚಿಕಿತ್ಸೆಯಿಂದ ಆಕೆ ಗುಣವಾಗ್ತಾಳೆ ಅಂತ ಭರವಸೆ ಹುಟ್ಟಿಸುತ್ತಾನೆ. ಆತನ ಪ್ರೀತಿ ಕಾಳಜಿ ನಿಜವೆಂದು ನಂಬುವ ಉಜ್ಮಾ ಅವನೊಂದಿಗೆ ಪಾಕಿಸ್ತಾನಕ್ಕೆ ಹೋಗಲು ಸಿದ್ಧವಾಗಿಬಿಡ್ತಾಳೆ. ಆದರೆ ಭಾರತದ ಗಡಿ ದಾಟುತ್ತಿದ್ದಂತೆಯೇ ಅವಳ ಬದುಕು ನರಕವಾಗುತ್ತದೆ. ಬುನೇರ್ ಎಂಬ ಪ್ರದೇಶಕ್ಕೆ ಅವಳನ್ನು ಕರೆದೊಯ್ಯುವ ತಾಹಿರ್ ತನ್ನ ನಿಜರೂಪ ತೋರಿಸುತ್ತಾನೆ. ಆಗಲೇ ಮದುವೆಯಾಗಿ ಮಕ್ಕಳಿರುವ ಈತನ ಭಯಂಕರ ಹ್ಯೂಮನ್ ಟ್ರಾಫಿಕಿಂಗ್ ಜಾಲದಲ್ಲಿ ಉಜ್ಮಾ ಸಿಲುಕಿರುತ್ತಾಳೆ. ಆಕೆಯನ್ನು ದೈಹಿಕವಾಗಿ ಮಾನಸಿಕವಾಗಿ, ಲೈಂಗಿಕವಾಗಿ ಹಿಂಸಿಸಲಾಗುತ್ತೆ. ಕೊನೆಗೆ ಹರಸಾಹಸಪಟ್ಟು ಮಲೇಶಿಯಾದಲ್ಲಿದ್ದ ತನ್ನ ಗೆಳತಿಗೆ ಫೋನ್ ಮಾಡುವಲ್ಲಿ ಉಜ್ಮಾ ಯಶಸ್ವಿಯಾಗುತ್ತಾಳೆ. ಗೆಳತಿಯ ಪತಿ ನೀಡುವ ಸಲಹೆಯಂತೆ ಇಂಡಿಯನ್ ಹೈಕಮಿಷನ್ ತಲುಪಲು ಪ್ಲ್ಯಾನ್ ಮಾಡಿ, ಜೆಪಿ ಸಿಂಗ್ ಎದುರಲ್ಲಿ ತನ್ನ ದಾರುಣ ಕತೆಯನ್ನು ಎಳೆಎಳೆಯಾಗಿ ಹೇಳಿಕೊಳ್ಳುತ್ತಾಳೆ. ಅಲ್ಲಿಂದ ಶುರುವಾಗುವುದೇ ಡಿಪ್ಲೊಮ್ಯಾಟಿಕ್ ವಾರ್.

ಸುಷ್ಮಾ ಸ್ವರಾಜ್ ಮತ್ತು ಜೆಪಿ ಸಿಂಗ್ ಉಜ್ಮಾಳನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತರಲು ಟೊಂಕಕಟ್ಟಿ ನಿಲ್ಲುತ್ತಾರೆ. ರಾಜತಾಂತ್ರಿಕ ಅಡೆತಡೆಗಳು, ಪಾಕಿಸ್ತಾನಿಗಳ ಕುತಂತ್ರಗಳು, ಅವ್ಯವಸ್ಥಿತ ನ್ಯಾಯವ್ಯವಸ್ಥೆಗಳು ಎಲ್ಲವನ್ನೂ ನಿವಾರಿಸಿಕೊಂಡು, ಉಜ್ಮಾಳನ್ನು ವಾಘಾ ಬಾರ್ಡರ್ ಮೂಲಕ ಬರಮಾಡಿಕೊಳ್ಳುವ ತನಕದ ಸಾಹಸಗಾಥೆಯನ್ನು ತಣ್ಣನೆಯ ನಿರೂಪಣೆಯಲ್ಲಿ, ಯಾವ ವೈಭವೀಕರಣವೂ ಇಲ್ಲದಂತೆ ನಿರ್ದೇಶಕ ಶಿವಂ ನಾಯರ್ ನಿರೂಪಿಸುತ್ತಾ ಹೋಗುತ್ತಾರೆ.

ಚಿತ್ರದ ಪ್ರಾರಂಭದಲ್ಲಿ ನೀಡುವ ಡಿಸ್‌ಕ್ಲೈಮರ್ ಹೇಳುವಂತೆ, ಸಿನಿಮಾದಲ್ಲಿ ತೋರಿಸಿದ್ದು ಬಹಳ ಸಂಕ್ಷಿಪ್ತ ರೂಪ. ಉಜ್ಮಾ ಅಹ್ಮದ್ ಅನುಭವಿಸಿದ್ದು ಸಿನಿಮಾದಲ್ಲಿ ತೋರಿಸಿದ ಹತ್ತುಪಟ್ಟು ಹೆಚ್ಚು ನರಕ. ಪಾಕಿಸ್ತಾನ ಎಂಥಾ ಭಯಾನಕ ದೇಶ ಎಂಬುದನ್ನು, ಇಲ್ಲಿ ಭಾರತೀಯರು ಒಂದೊಮ್ಮೆ ಸಿಕ್ಕಿಕೊಂಡರೆ ಗತಿ ಏನು ಎಂಬುದನ್ನು, ಇತರ ದೇಶಗಳಿಗಿಂತ ಈ ದೇಶದಲ್ಲಿ ಬದುಕು ಎಷ್ಟು ಉಸಿರುಕಟ್ಟಿಸುತ್ತದೆ ಎಂಬುದನ್ನು ಬಹಳ ಸೂಕ್ಷ್ಮವಾಗಿ, ಅಲ್ಲಲ್ಲಿ ವಾಚ್ಯದಲ್ಲಿ ಸೂಕ್ಷ್ಮವಾಗಿ ಹೇಳುತ್ತಾ ಹೋಗತ್ತೆ ಸಿನಿಮಾ. ಡಿಪ್ಲೊಮ್ಯಾಟಿಕ್ ಆಗಿ ಈ ವಿಷಯವನ್ನು ನಿಭಾಯಿಸದೇ ಹೋಗಿದ್ದಿದ್ದರೆ, ಉಜ್ಮಾಳನ್ನು ಭಾರತಕ್ಕೆ ಕರೆತರೋದು ಸಾಧ್ಯವೇ ಇರಲಿಲ್ಲ. ಉಜ್ಮಾ ಭಾರತದ ಗಡಿಯೊಳಗೆ ಬಂದಾಗ ಸುಷ್ಮಾ ಸ್ವರಾಜ್ ಅವರಿಗೆ ಕೈ ಮುಗಿದು ಹೇಳುತ್ತಾಳೆ- 'ನಮ್ಮ ನಂಬಿಕೆ ಉಳಿಸಿಕೊಂಡಿದ್ದಕ್ಕೆ ಥ್ಯಾಂಕ್ಸ್' ಅಂತ. ಅದಕ್ಕೆ ಪ್ರತಿಯಾಗಿ ಸುಷ್ಮಾಜೀ ಆಕೆಯನ್ನು ತಬ್ಬಿ ಹೇಳುತ್ತಾರೆ- 'ನಮ್ಮ ಮೇಲೆ ನಂಬಿಕೆ ಇಟ್ಟದ್ದಕ್ಕೆ ಥ್ಯಾಂಕ್ಸ್' ಅಂತ. ಈ ಎರಡು ಸಂಭಾಷಣೆಗಳು ಸಾಕಷ್ಟು ಸಂದೇಶಗಳನ್ನು ರವಾನೆ ಮಾಡುವಲ್ಲಿ ಯಶಸ್ವಿಯಾಗುತ್ತವೆ.

ಅಂದಹಾಗೆ ಈ ಸಿನಿಮಾವನ್ನು ಪಾಕಿಸ್ತಾನವೂ ಸೇರಿದಂತೆ ಅರಬ್ ಮತ್ತು ಮುಸಲ್ಮಾನ ದೇಶಗಳು ಬಹಿಷ್ಕರಿಸಿವೆ. ಅಲ್ಲಿ ಪ್ರದರ್ಶನಕ್ಕೆ ಅನುಮತಿ ಇಲ್ಲ. ಅದೇ ರೀತಿ ನಮ್ಮದೇ ದೇಶದ ಕೆಲವು ಎಡಬಿಡಂಗಿ ಪತ್ರಿಕೆಗಳು, ಈ ಸಿನಿಮಾವನ್ನು ತಮ್ಮ ಹಳದಿ ಹಸಿರು ಕನ್ನಡಕದಲ್ಲಿ ನೋಡಿ, ಕೆಟ್ಟ ವಿಮರ್ಶೆ ಕೊಟ್ಟಿವೆ. ಉಜ್ಮಾ ಅಹ್ಮದ್‌ಳ ಮೊದಲ ಪತಿಯ ಬಗ್ಗೆ ಸಿನಿಮಾದಲ್ಲಿ ಪ್ರಸ್ತಾಪ ಇಲ್ಲ, ಆಕೆಯನ್ನು ಒಳ್ಳೆಯವಳಂತೆ ತೋರಿಸಿದ್ದಾರೆ ಎಂದು ಆಕೆಯ ಚಾರಿತ್ರ್ಯವಧೆಗೂ ಮುಂದಾಗಿದ್ದಾರೆ. ಆಕೆಯನ್ನು ಸುರಕ್ಷಿತವಾಗಿ ಕಳಿಸಿದ್ದು ಪಾಕಿಸ್ತಾನದ ಒಳ್ಳೇತನಕ್ಕೆ ಸಾಕ್ಷಿ ಅಂತಲೂ ಸರ್ಟಿಫಿಕೇಟ್ ನೀಡಿದ್ದಾರೆ. ಆ ವಿಮರ್ಶಕರನ್ನು ಕೇಳಬೇಕು ಅನ್ನುತ್ತೆ. ಉಜ್ಮಾ ಜಾಗದಲ್ಲಿ ಭಾರತೀಯ ಹೆಣ್ಮಗಳು ಇದ್ದಿದ್ದರೆ ಬಿಟ್ಟು ಕಳಿಸುತ್ತಿದ್ದರಾ? ಆಕೆಯನ್ನು ರಕ್ಷಿಸೋದಕ್ಕೆ, ಭಾರತಕ್ಕೆ ಮರಳಿಸೋದಕ್ಕೆ, ಆಕೆ ಮುಸ್ಲಿಂ ಎಂಬ ಡಿಪ್ಲೊಮ್ಯಾಟಿಕ್ ಕಾರ್ಡನ್ನು ಕೂಡ ತೋರಿಸಬೇಕಾಯ್ತು ಅನ್ನೋದನ್ನು ವಿಮರ್ಶಕರು ಗಮನಿಸಿಲ್ವಾ? ಹಿಂದೂಪರ, ಮುಸ್ಲಿಂ ವಿರೋಧಿ ಸರಕಾರ ಎಂದೇ ಹಣೆಪಟ್ಟಿ ಹಾಕುತ್ತಿದ್ದ ವಿಮರ್ಶಕರಿಗೆ, ಆಕೆ ಮುಸಲ್ಮಾನ ಹೆಣ್ಮಗಳಾದರೂ ಭಾರತೀಯ ಪ್ರಜೆ ಎಂದಷ್ಟೇ ನೋಡಿ ಆಕೆಯನ್ನು ಕಾಪಾಡಿದ ಸರಕಾರದ ನಡೆಯನ್ನು ಪ್ರಯತ್ನವನ್ನು ಮೆಚ್ಚಬೇಕು ಅನಿಸಲಿಲ್ಲ ಎಂಬುದು ದುರಂತ.

ಉಜ್ಮಾ ಅಹ್ಮದ್ ಆ ಒಂದು ತಿಂಗಳ ನರಕಯಾತನೆಯನ್ನು, ಇಂಡಿಯನ್ ಹೈಕಮಿಷನ್ ಮತ್ತು ಜೆಪಿ ಸಿಂಗ್ ತೆಗೆದುಕೊಂಡ ರಿಸ್ಕನ್ನು, ಸುಷ್ಮಾ ಸ್ವರಾಜ್ ಅವರ ಪಾತ್ರವನ್ನು ಸಾರ್ವಜನಿಕವಾಗಿ ಮಾಧ್ಯಮಗಳು ಎದುರು ವಿವರಿಸಿದ ವಿಡಿಯೋಗಳಿವೆ. ಆದರೂ ಅದನ್ನು ಕಪೋಲಕಲ್ಪಿತ ಎಂದು ಗೇಲಿಮಾಡುತ್ತಿವೆ ಕೆಲ ಮೀಡಿಯಾಗಳು ಮತ್ತು ಸೋಷಿಯಲ್ ಮೀಡಿಯಾ ಬುದ್ಧಿಜೀವಿಗಳು. ಇವರೇ ನೈಜ ಇತಿಹಾಸವನ್ನು ತಿರುಚಿ, ಮರೆಮಾಚಿ ಸುಳ್ಳುಕತೆಗಳನ್ನು ಹುಟ್ಟುಹಾಕುವವರು.

ಉಜ್ಮಾ ಅಹ್ಮದ್ ಇಂದಿಗೂ ತನ್ನ ಮಗಳನ್ನು ನೋಡಿಕೊಳ್ಳುತ್ತಾ, ಬ್ಯೂಟಿ ಪಾರ್ಲರ್ ನಡೆಸುತ್ತಾ, ಹೆತ್ತವರಿಂದ, ಬಂಧುಬಳಗದಿಂದ ದೂರವಿಡಲ್ಪಟ್ಟು ಹೋರಾಟದ ಬದುಕು ಜೀವಿಸುತ್ತಾ ಇದ್ದಾಳೆ. ಆದರೆ ಆಕೆ ಎಂಟು ವರ್ಷದ ಹಿಂದೆ ಪಾಕಿಸ್ತಾನದಲ್ಲಿ ಬದುಕಿದ ಆ ಒಂದುತಿಂಗಳ ಬದುಕು ಏಳು ಜನ್ಮದ ನರಕಕ್ಕಿಂತ ಯಾತನಾಮಯವಾದದ್ದು.

ಸಾಧ್ಯವಾದರೆ ಒಮ್ಮೆ 'ದಿ ಡಿಪ್ಲೊಮೆಟ್' ನೋಡಿ. ಇಂಥ ಚಿತ್ರಗಳು ಹೆಚ್ಚೆಚ್ಚು ಬಂದು ಸಿನಿಮಾ ರೂಪದ ಇತಿಹಾಸದ ಪುಟಗಳಾಗಿ ಇಲ್ಲಿ ಉಳಿಯಬೇಕು. ದೇಶದ ಮುಂದಿನ ಪೀಳಿಗೆಗೂ ಇವು ತಲುಪಬೇಕು. ವ್ಯಾಕ್ಸಿನ್ ವಾರ್, ಮಿಶನ್ ಮಾರ್ಸ್, ಕೇರಳ ಸ್ಟೋರಿ, ಕಾಶ್ಮೀರ್ ಫೈಲ್ಸ್, ತಾಷ್ಕೆಂಟ್ ಫೈಲ್ಸ್, ದಿ ಡಿಪ್ಲೊಮೆಟ್, ಉರಿ, ಛಾವಾ ಇಂಥ ಸಿನಿಮಾಗಳು ಇತಿಹಾಸದ ಪಠ್ಯಪುಸ್ತಕದ ದೃಶ್ಯರೂಪಗಳಾಗಿ ಜನರನ್ನು ತಲುಪಿದಷ್ಟೂ ರಾಷ್ಟ್ರಪ್ರೇಮ ಹೆಚ್ಚುಕಾಲ ಜೀವಂತವಾಗಿರುತ್ತದೆ. ಉದ್ದೀಪನಗೊಳ್ಳುತ್ತಿರುತ್ತದೆ.

ಭಟ್ಟರ್ ಸ್ಕಾಚ್

- **ವೀರೇಶ ಮಂಗಸೂಳಿ, ಖಾನಾಪುರ**
ಭಟ್ರೇ, ಕೆಲವು ಹೆಂಗಸರು ನೈಟಿ ಶಾಪಿಂಗ್ ಮಾಡಲು ಹೋಗುವಾಗಲೂ ಗಂಡನನ್ನೇಕೆ ಎಳೆದೊಯ್ಯುತ್ತಾರೆ?
- **ಶಾಪಿಂಗ್‌ಗೆ ಯಾರಾದರೂ ಕೂಲಿ, ಹಮಾಲಿಯನ್ನು ಕರೆದುಕೊಂಡು ಹೋಗ್ತಾರಾ, ಗಂಡನೇ ಬೇಕಲ್ಲ?!**

- **ಗಿಡ್ಡ ಗೋಪಾಲ, ಶ್ರೀರಂಗಪಟ್ಟಣ**
ಭಟ್ರೇ, ಇಳಿವಯಸ್ಸಿನ ವೃದ್ಧರು ತಮ್ಮ ಮೊಮ್ಮಕ್ಕಳಿಗೆ ರಾಮೇಶ್ವರ ತೋರಿಸಿ ಎಂದು ಗಂಟುಬಿದ್ದರೆ ಎಲ್ಲಿಗೆ ಕರೆದೊಯ್ಯುತ್ತಾರೆ?
- **ರಾಮೇಶ್ವರಂ ಕೆಫೆ!**

- **ರಾಘಣ್ಣ, ಮೈಸೂರು**
ಭಟ್ರೇ, ಆಕಾಶ್ ಕ್ಷಿಪಣಿ ರೂವಾರಿ ಪ್ರಹ್ಲಾದ ರಾಯರನ್ನು ಮಾಧ್ವ ಸಮಾಜ ಏಕೆ ಇನ್ನೂ ಕೊಂಡಾಡಿಲ್ಲ?
- **ಅವರು ಯಾವ ಮಠದವರು ಎನ್ನುವುದು ಇನ್ನೂ ಖಾತ್ರಿ ಆಗಿಲ್ಲವಂತೆ!**

- **ಗುರು ಮಧ್ವರಾಯ, ಉಡುಪಿ**
ಭಟ್ರೇ, ಜಿರಳೆ ಬಗ್ಗೆ ಭಟ್ಟರ ಲೇಖನ ಓದಿದ ಅವರ ವಿರೋಧಿಗಳು ಏನು ಲೆಕ್ಕಾಚಾರ ಹಾಕುತ್ತಿದ್ದಾರೆ?
- **ಮುಂದಿನ ಅಚೀವರ್ಸ್ ಅವಾರ್ಡ್ ಫಂಕ್ಷನ್ ಚೀನಾದಲ್ಲಿ!**

- **ರವಿ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, ಮದುವೆ ವಿಷಯ ತೆಗೆದರೆ ಮೌನಕ್ಕೆ ಜಾರುತ್ತಾಳಲ್ಲ?
- **ಜಾರಿದ್ದು ಮೌನ ಅಲ್ಲ!**

- **ಸಂತೋಷ ಆಳ್ವ, ಕೆಂಗೇರಿ**
ಭಟ್ರೇ, ರಾಧಾ ಹಿರೇಗೌಡರ್ ದಿನಾ ಕನಸಿನಲ್ಲಿ ಬರ್ತಾರಲ್ಲ?
- **ಅದೇ ವಾಸಿ, ನಿಜಗುಣ ಸ್ವಾಮೀಜಿ ಬಂದ್ರೆ ಏನು ಮಾಡ್ತೀಯಾ?!**

- **ಅಶೋಕ ಪಾಟೀಲ, ಕಲಬುರ್ಗಿ**
ಭಟ್ರೇ, ಖರ್ಗೆಯವರು 'ನಮ್ಮ ಪಾಕಿಸ್ತಾನ' ಅಂತಾರಲ್ಲ?
- **ತಪ್ಪಿಲ್ಲ, ಪಾಕಿಸ್ತಾನವನ್ನು ಸೃಷ್ಟಿಸಿದವರು 'ನಮ್ಮ ಪಾಕಿಸ್ತಾನ' ಎಂದೇ ಹೇಳಬೇಕಲ್ಲ?!**

- **ಪ್ರಕಾಶ ಪಿ.ಗಿಡದ, ಧಾರವಾಡ**
ಭಟ್ರೇ, ಯುದ್ಧ ಹೇಗೆ ಮುಗಿಯಿತು ಅಂತಾನೇ ಗೊತ್ತಾಗಲಿಲ್ಲ?
- **ಹೂಂ.. ಆ ಪ್ರಕಾಶ ರೈ ಬೇರೆ ಏನೂ ಮಾತಾಡದೇ ಸುಮ್ಮನಿದ್ದ!**

- **ಅಶ್ರಫ್ ಅತ್ರಾಡಿ, ಮಂಗಳೂರು**
ಭಟ್ರೇ, ಇನ್ನು ಐವತ್ತು ವರ್ಷಗಳಲ್ಲಿ ಭಾರತ ಮುಸ್ಲಿಂಮಯವಾದರೆ?
- **ಲೆಕ್ಕಾಚಾರ ತಪ್ಪಿರಬೇಕು ನೋಡು, ಅಷ್ಟೆಲ್ಲ ವರ್ಷ ಬೇಡ ಅನಿಸಲ್ವಾ?!**

ನೀವು ಒಮ್ಮೆಯಾದರೂ ಭಾರತದ ಪರ ನಿಲ್ಲಬೇಕಿತ್ತು!

ಪ್ರಕಾಶಪಥ

ಪ್ರಕಾಶ್ ಶೇಷರಾಘವಾಚಾರ್

0

ಪಹಲ್ಗಾಮ್‌ನಲ್ಲಿ ಉಗ್ರರು ಧರ್ಮವನ್ನು ಕೇಳಿ 26 ಪ್ರವಾಸಿಗರನ್ನು ಅಮಾನುಷವಾಗಿ ಹತ್ಯೆಗೈದಾಗ ಇಡಿ ದೇಶವೇ ಈ ಘೋರ ಹತ್ಯಾಕಾಂಡವನ್ನು ಒಮ್ಮತದಿಂದ ಖಂಡಿಸಿತು. ಭಯೋತ್ಪಾದಕರ ವಿರುದ್ಧ ಪ್ರತೀಕಾರ ಕೈಗೊಳ್ಳಬೇಕು ಎಂಬ ಕೂಗು ದೇಶದೆಲ್ಲೆಡೆಯಿಂದ ಕೇಳಿಬಂದಿತು.

ಮೇ 6ರ ರಾತ್ರಿ, ಭಾರತೀಯ ಸೇನೆಯು 'ಆಪರೇಷನ್ ಸಿಂದೂರ' ಹೆಸರಿನಲ್ಲಿ ಪಾಕಿಸ್ತಾನ ದಲ್ಲಿನ 9 ಭಯೋತ್ಪಾದಕ ನೆಲೆಗಳ ಮೇಲೆ ವೈಮಾನಿಕ ದಾಳಿ ಕೈಗೊಂಡು, ಅವನ್ನು ನಾಶಮಾಡಿ ನೂರಾರು ಭಯೋತ್ಪಾದಕರನ್ನು ನರಕವಾಸಕ್ಕೆ ರವಾನಿಸಿತು. ತನ್ಮೂಲಕ ಮೋದಿ ಸರಕಾರವು ಪಹಲ್ಗಾಮ್ ಹತ್ಯಾಕಾಂಡಕ್ಕೆ ಪ್ರತೀಕಾರ ಕೈಗೊಂ ಡಂತಾಯಿತು. 26 ಹುತಾತ್ಮರ ಕುಟುಂಬದವರು ಈ ಕ್ರಮವನ್ನು ಮುಕ್ತಕಂಠದಿಂದ ಪ್ರಶಂಸಿಸಿ ಮೋದಿಯವರಿಗೆ ಹೃದಯಪೂರ್ವಕ ವಂದನೆ ಸಲ್ಲಿಸಿದರು. ಆಪರೇಷನ್ ಸಿಂದೂರ ಕಾರ್ಯಾ ಚರಣೆಯ ಯಶಸ್ಸನ್ನು ಜನರು ನೂರಾರು ಸ್ಥಳಗಳಲ್ಲಿ ಸಂಭ್ರಮಿಸಿದರು.

ಕೇಂದ್ರ ಸರಕಾರವು ಕರೆದಿದ್ದ ಸರ್ವಪಕ್ಷ ಸಭೆಯ ನಂತರ ಎಲ್ಲ ವಿರೋಧ ಪಕ್ಷಗಳವರು ''ನಾವು ಸರಕಾರದ ಜತೆಗಿದ್ದೇವೆ ಹಾಗೂ ಸರಕಾರ ಕೈಗೊಳ್ಳುವ ಎಲ್ಲ ಕ್ರಮಗಳಿಗೆ ನಮ್ಮ ಬೆಂಬಲವಿದೆ'' ಎಂದು ಒಮ್ಮತದಿಂದ ಘೋಷಿಸಿದರು. ಇಡೀ ದೇಶವು ಐಕಮತ್ಯದ ಮಂತ್ರವನ್ನು ಜಪಿಸಿದ ಅಪರೂಪದ ಗಳಿಗೆ ಅದಾಗಿತ್ತು. ಮೇ 8ರ ರಾತ್ರಿ ಪಾಕಿಸ್ತಾನವು ಭಾರತದ ಮೇಲೆ ಡ್ರೋನ್ ದಾಳಿ ನಡೆಸಿದಾಗ, ಭಾರತೀಯ ವೈಮಾನಿಕ ರಕ್ಷಣಾ ವ್ಯವಸ್ಥೆಯು ಅದನ್ನು ಯಶಸ್ವಿಯಾಗಿ ಹಿಮ್ಮೆ ಟ್ಟಿಸಿತು. ಮೇ 11ರಂದು ಪಾಕಿಸ್ತಾನದ ಡಿಜಿಎಂಒ ಭಾರತದ ಡಿಜಿಎಂಒಗೆ ಕರೆ ಮಾಡಿ ಕದನವಿರಾಮಕ್ಕೆ ವಿನಂತಿಸಿದಾಗ, ಭಾರತವು ಸಕಾರಾತ್ಮಕವಾಗಿ ಸ್ಪಂದಿಸಿತು, ಅಂದು ಸಂಜೆ 5 ಗಂಟೆಯಿಂದ ಕದನವಿರಾಮ ಘೋಷಣೆಯಾಯಿತು.

ತಾನು ಕೈಗೊಂಡ ಪ್ರತಿದಾಳಿಗೆ ಕೇವಲ ಮೂರೂವರೆ ದಿನದಲ್ಲೇ ಪಾಕಿಸ್ತಾನವು ತನ್ನ ಪರಾಕ್ರಮದ ಮುಂದೆ ಮಂಡಿಯೂರುವಂತೆ ಮಾಡಿದ ಕೀರ್ತಿ ಭಾರತೀಯ ಸೇನೆಗೆ ಸಲ್ಲುತ್ತದೆ. ಇದು ನಿಜಕ್ಕೂ ಹೆಮ್ಮೆಯ ಸಂಗತಿ. ದುರ್ದೈವವೆಂದರೆ, ಕದನವಿರಾಮದ ತರುವಾಯ ವಿರೋಧ ಪಕ್ಷಗಳು ಹೊಸ ವರಸೆ ತೆಗೆಯಲು ಆರಂಭಿಸಿದವು. ಯಶಸ್ವಿ ಕಾರ್ಯಾಚರಣೆ ಯಿಂದಾಗಿ ಬಿಜೆಪಿಗೆ ದಕ್ಕುವ 'ರಾಜಕೀಯ ಲಾಭ'ವನ್ನು ಲೆಕ್ಕಿಸಿ ಭಯಬಿದ್ದ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳು ತಮ್ಮ ಮೊದಲಿನ ನಿಲುವಿನಿಂದ ಹಿಂದೆ ಸರಿಯಲು ಶುರುಹಚ್ಚಿಕೊಂಡವು. 'ಆಪರೇಷನ್ ಸಿಂದೂರ' ತರುವಾಯ ಮತ್ತೆ ಸರ್ವಪಕ್ಷ ಸಭೆಯನ್ನು ಹಾಗೂ ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆಯಬೇಕು ಎಂದು ಅವು ಒತ್ತಾಯಿಸತೊಡಗಿದವು. ಇದಕ್ಕೆ ಕೇಂದ್ರ ಸರಕಾರ ಸೊಪ್ಪು ಹಾಕದಿದ್ದಾಗ, 'ಆಪರೇಷನ್ ಸಿಂದೂರ' ಕಾರ್ಯಾಚರಣೆಯ ಯಶಸ್ಸನ್ನು ಪ್ರಶ್ನಿಸಲು ಮುಂದಾದವು.

'ಆಪರೇಷನ್ ಸಿಂದೂರ' ಕುರಿತಾದ ತನ್ನ ನಿಲುವನ್ನು ವಿವರಿಸಲು ಭಾರತವು ವಿವಿಧ ಪಕ್ಷಗಳಿಗೆ ಸೇರಿದ ಸದಸ್ಯರನ್ನು ಒಳಗೊಂಡ ಏಳು ನಿಯೋಗಗಳನ್ನು ವಿವಿಧ ರಾಷ್ಟ್ರಗಳಿಗೆ ಕಳುಹಿಸಿದೆ. ಪಾಕಿಸ್ತಾನದ ನಿರೂಪಣೆಯನ್ನು ವಿರೋಧಿಸಲು ಮತ್ತು ಭಯೋತ್ಪಾದಕ ಗುಂಪುಗಳಿಗೆ ಪಾಕಿಸ್ತಾನ ನೀಡುತ್ತಾ ಬಂದಿರುವ ಬೆಂಬಲವನ್ನು ಮನದಟ್ಟು ಮಾಡಿಕೊಟ್ಟು, ಭಯೋತ್ಪಾದನೆಯ ನಿಗ್ರಹದ ಕ್ರಮವಾಗಿ 'ಆಪರೇಷನ್ ಸಿಂದೂರ್' ಕಾರ್ಯಾ ಚರಣೆಯನ್ನು ಕೈಗೊಳ್ಳಬೇಕಾಗಿ ಬಂದ ಅಗತ್ಯ ತೆಯನ್ನು ವಿವರಿಸಲು, ತನ್ಮೂಲಕ ಅಂತಾರಾ ಷ್ಟ್ರೀಯ ಬೆಂಬಲವನ್ನು ಪಡೆದು ಭಯೋತ್ಪಾ ದನೆಯ ವಿರುದ್ಧ ಒಮ್ಮತವನ್ನು ಮೂಡಿಸಲು ಈ 7 ನಿಯೋಗಗಳು ವಿವಿಧ ದೇಶಗಳಿಗೆ ಭೇಟಿ ನೀಡುತ್ತಿವೆ.

ಇಂಥ ನಿಯೋಗಗಳ ಪೈಕಿ ಒಂದಕ್ಕೆ ಸಂಸದರ ಹೆಸರು ಸೂಚಿಸುವಂತೆ ಕಾಂಗ್ರೆಸ್ ಪಕ್ಷವನ್ನು ಕೋರಿದಾಗ, ವಿದೇಶಾಂಗ ಖಾತೆಯ ಸಂಸದೀಯ ಸಲಹಾ ಸಮಿತಿಯ ಅಧ್ಯಕ್ಷರಾಗಿದ್ದ ಶಶಿ ತರೂರ್ ಅವರ ಹೆಸರನ್ನು ಅದು ಉದ್ದೇಶಪೂರ್ವಕವಾಗಿ ಕೈಬಿಟ್ಟಿತ್ತು! ವಿದೇಶಾಂಗ ವ್ಯವಹಾರದಲ್ಲಿ ಅನುಭವ ವಿರುವ ತರೂರ್ ಅವರ ಹೆಸರನ್ನು ಸೂಚಿಸದೆ ಕಾಂಗ್ರೆಸ್ ತನ್ನ ಸಣ್ಣ ಬುದ್ಧಿಯನ್ನು ಪ್ರದರ್ಶಿಸಿತು. ಮಮತಾ ಬ್ಯಾನರ್ಜಿಯವರು ತಮ್ಮ ಟಿಎಂಸಿ ಪಕ್ಷದ ಸಂಸದ ಯೂಸಫ್ ಪಠಾಣ್‌ರನ್ನು ಆಯ್ಕೆ ಮಾಡಿ ದ್ದನ್ನು ವಿರೋಧಿಸಿ, ಬದಲಿಗೆ ಅಭಿಷೇಕ್ ಬ್ಯಾನರ್ಜಿಯವರ ಹೆಸರನ್ನು ನೀಡಿದರು. ಒಮ್ಮತವನ್ನು ಕಾಪಾಡುವ ದೃಷ್ಟಿಯಿಂದ ಈ ವಿಷಯದಲ್ಲಿ ರಾಜಕೀಯವನ್ನು ಬೆರೆಸುವುದನ್ನು ಟಿಎಂಸಿ ತಪ್ಪಿಸಬಹುದಿತ್ತು.

ತಾವು ಸೂಚಿಸಿದ್ದ ಹೆಸರಿನಲ್ಲಿ ಕೇವಲ ಒಬ್ಬರನ್ನು ಆಯ್ಕೆಮಾಡಿದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಜೈರಾಮ್ ರಮೇಶ್‌ರವರು, ''ಇದು ಗಮನವನ್ನು ಬೇರೆಡೆ ಸೆಳೆಯುವ ಮತ್ತೊಂದು ಪ್ರಯತ್ನ ಎಂದು ನಾನು ಭಾವಿಸುತ್ತೇನೆ'' ಎಂದು ಟೀಕಿಸಿ, ತಮ್ಮ ಪಕ್ಷದ ಸದಸ್ಯರೂ ಭಾಗಿಯಾಗಿರುವ ಬಹುಪಕ್ಷಗಳ ನಿಯೋಗದ ಪ್ರವಾಸವನ್ನೂ ರಾಜಕೀಯೀ ಕರಣಗೊಳಿಸಿದರು. ರಾಹುಲ್ ಗಾಂಧಿಯವರು ಮೇ 17ರಂದು, ವಿದೇಶಾಂಗ ಸಚಿವ ಜೈಶಂಕರ್‌ರವರ ತುಂಡರಿಸಿದ ವಿಡಿಯೋ ತುಣುಕನ್ನು ತಮ್ಮ 'ಎಕ್ಸ್' (ಟ್ವಿಟರ್) ಖಾತೆಯಲ್ಲಿ ಹಂಚಿಕೊಂಡು, ''ಸಚಿವರು ಯುದ್ಧಾರಂಭಕ್ಕೆ ಮುನ್ನ ಪಾಕಿಸ್ತಾನಕ್ಕೆ ದಾಳಿಯ ಬಗ್ಗೆ ತಿಳಿಸಿ ದ್ರೋಹ ಮಾಡಿದ್ದಾರೆ'' ಎಂಬ ಅತ್ಯಂತ ಗಂಭೀರ ಆರೋಪವನ್ನು ಮಾಡಿದರು. ಇದಾಗಿದ್ದೇ ಆಗಿದ್ದು, ಕಾಂಗ್ರೆಸ್‌ನ ಇತರ ನಾಯಕರೂ ಅಷ್ಟೇ ಬೇಜವಾಬ್ದಾರಿಯಿಂದ ಆ ಆರೋಪವನ್ನು ಹಂಚಿಕೊಂಡು, ವಿದೇಶಾಂಗ ಸಚಿವರನ್ನು 'ದೇಶದ್ರೋಹಿ' ಎಂದು ಕರೆಯು ವಷ್ಟು, 'ದೇಶದ ಪ್ರಧಾನಿಯವರು ಶರಣಾಗಿ ದ್ದಾರೆ' ಎಂದು ಅಪಹಾಸ್ಯ ಮಾಡುವಷ್ಟು ಕೆಳಮಟ್ಟಕ್ಕೆ ತಲುಪಿದ್ದಕ್ಕೆ ಏನನ್ನುವುದು?!!

ರಾಹುಲ್ ಗಾಂಧಿಯವರ ಹೊಣೆಗೇಡಿ ಆರೋಪಕ್ಕೆ ವಿದೇಶಾಂಗ ಇಲಾಖೆಯು, ''ಇದು ಸತ್ಯಗಳ ತಪ್ಪು ನಿರೂಪಣೆ; ಸರಕಾರವು ಆಪರೇಷನ್ ಸಿಂದೂರ ಕಾರ್ಯಾಚರಣೆಯ ಆರಂಭದಲ್ಲಿ ಭಯೋತ್ಪಾದಕ ಕೇಂದ್ರಗಳ ಮೇಲೆ ದಾಳಿ ನಡೆಸುವ ಬಗ್ಗೆ ಪಾಕಿಸ್ತಾನದ ಡಿಜಿಎಂಒಗೆ ಎಚ್ಚರಿಕೆ ನೀಡಿದ್ದರ ಬಗ್ಗೆ ಸಚಿವರು ಮಾತನಾಡಿರುವುದು'' ಎಂದು ಸ್ಪಷ್ಟಪಡಿಸಿತು. 'ಆಪರೇಷನ್ ಸಿಂದೂರ'ದ ವಿವರಗಳನ್ನು ನೀಡಿದ ಲೆ.ಜ. ರಾಜೀವ್ ಘಾಯ್ ಅವರು, ''ಕಾರ್ಯಾಚರಣೆಯ ಮುನ್ನ ನಾವು 'ಭಯೋತ್ಪಾದಕರ ನೆಲೆಯ ಮೇಲೆ ದಾಳಿ ಮಾಡುತ್ತೇವೆ' ಎಂದು ಪಾಕಿಸ್ತಾನದ ತತ್ಸಮ ಸೇನಾಧಿಕಾರಿಗಳಿಗೆ ಎಚ್ಚರಿಸಿದ್ದೆವು'' ಎಂಬ ಮಾಹಿತಿಯನ್ನು ಹಂಚಿಕೊಂಡಿದ್ದರು. ರಾಹುಲ್ ಗಾಂಧಿಯವರು ಮತ್ತೆ ಮೇ 19ರಂದು ಮತ್ತೊಂದು ಟ್ವೀಟ್ ಮೂಲಕ, ''ವಿದೇಶಾಂಗ ಖಾತೆ ಸಚಿವ ಜೈಶಂಕರ್ ಅವರನ್ನು ನಾನು ಮತ್ತೊಮ್ಮೆ ಕೇಳುತ್ತೇನೆ, ಪಾಕಿಸ್ತಾನಕ್ಕೆ ದಾಳಿಯು ಮುಂಚಿತವಾಗಿ ತಿಳಿದಿದ್ದರಿಂದ ನಾವು ಎಷ್ಟು ಭಾರತೀಯ ವಿಮಾನಗಳನ್ನು ಕಳೆದುಕೊಂಡಿದ್ದೇವೆ? ಇದು ಒಂದು ಲೋಪವಲ್ಲ, ಅಪರಾಧ. ರಾಷ್ಟ್ರವು ಸತ್ಯವನ್ನು ತಿಳಿದುಕೊಳ್ಳಲು ಅರ್ಹವಾಗಿದೆ'' ಎಂದು ಕೇಳುತ್ತಾರೆ.



ರಾಹುಲ್ ಅವರು ತಮ್ಮ ಈ ಎಡವಟ್ಟಿನಿಂದ ಭಾರತೀಯ ಸೈನ್ಯಕ್ಕೆ ಅಪಮಾನ ಎಸಗಿದ್ದಲ್ಲದೆ, ಭಾರತದ ವಿರುದ್ಧ ಅಪಪ್ರಚಾರ ಕೈಗೊಳ್ಳಲು ಶತ್ರುರಾಷ್ಟ್ರಕ್ಕೆ ಗ್ರಾಸ ಒದಗಿಸಿದರು. ಇವರ ಟ್ವೀಟ್ ಅನ್ನು ಬಾಚಿಕೊಂಡ ಪಾಕಿಸ್ತಾನಿ ಮಾಧ್ಯಮಗಳು, 'ಭಾರತದ ವಿಮಾನಗಳನ್ನು ನಾವು ಹೊಡೆದುರುಳಿಸಿದ್ದನ್ನು ರಾಹುಲ್ ಗಾಂಧಿಯವರೇ ದೃಢಪಡಿಸಿದ್ದಾರೆ' ಎಂದು ಹೆಮ್ಮೆಪಟ್ಟುಕೊ ಳ್ಳುವಂತಾಗಿದೆ. ರಾಹುಲ್ ಗಾಂಧಿಯವರ ಈ ದೇಶವಿರೋಧಿ ನಿಲುವನ್ನು ಪಿ.ಚಿದಂಬರಂ ಮತ್ತು ಸಲ್ಮಾನ್ ಖುರ್ಷಿದ್‌ರಂಥ ಹಿರಿಯ ನಾಯಕರು ಬೆಂಬಲಿಸಲಿಲ್ಲ. ಬಿಜೆಪಿ-ವಿರೋಧಿ ಪತ್ರಕರ್ತೆ ಎಂದೇ ಬಿಂಬಿತರಾಗಿರುವ ಬರ್ಖಾ ದತ್ ಅವರು ಟ್ವೀಟ್ ಮೂಲಕ, ''ಸಚಿವ ಜೈಶಂಕರ್ ಅವರು ಯುದ್ಧ ಯೋಜನೆಯನ್ನು ಮುಂಚಿತವಾಗಿ ನೀಡಿ ದ್ದರು ಎಂಬ ವಿಚಿತ್ರ ಆರೋಪವನ್ನು ಕಾಂಗ್ರೆಸ್ ಮತ್ತೆ ಮತ್ತೆ ಮಾಡುತ್ತಿರುವುದು ನಂಬಲಸಾಧ್ಯ. ಮಿಲಿಟರಿ ಕಾರ್ಯಾಚರಣೆಗಳು ಹೇಗೆ ನಡೆ ಯುತ್ತವೆ ಎಂಬುದನ್ನು ಅವರು ಅರ್ಥಮಾಡಿ ಕೊಂಡಿದ್ದಾರೆಯೇ? ಇದಕ್ಕೂ ರಾಜಕೀಯಕ್ಕೂ ಯಾವುದೇ ಸಂಬಂಧವಿಲ್ಲ. ಆದರೆ ಯುದ್ಧಕಾ ಲದಲ್ಲಿ ಮೂಲಭೂತ ಪ್ರಬುದ್ಧತೆ ಮತ್ತು ಏಕತೆ ಅಗತ್ಯ. ಕಾಂಗ್ರೆಸ್‌ನ ಈ ವರ್ತನೆ ಆಘಾತಕಾರಿ'' ಎಂದು ಕಟುವಾಗಿ ಟೀಕಿಸಿದ್ದಾರೆ.

ಕದನವಿರಾಮದ ಘೋಷಣೆಯನ್ನು ಕೀಳು ಮಟ್ಟದಲ್ಲಿ ಟೀಕಿಸುವ ಮತ್ತು ಸಚಿವ ಜೈಶಂಕರ್‌ರನ್ನು 'ದೇಶದ್ರೋಹಿ' ಎಂದು ಬಿಂಬಿಸುವ ತಂತ್ರಗಾರಿಕೆಯ ಮೂಲಕ ಕಾಂಗ್ರೆಸ್ ಪಕ್ಷವು ದೇಶದ ಭದ್ರತೆಯ ವಿಷಯದಲ್ಲಿ ಹುಡುಗಾಟಿಕೆ ಆಡುತ್ತಿದೆ. ಇದನ್ನು ಕಾಂಗ್ರೆಸ್ಸಿನ ಹೊಸ ಚಹರೆ ಎಂದು ಭಾವಿಸಬೇಕೇ? ಮತ್ತೊಂದೆಡೆ ರಾಹುಲರಿಗೆ ಪೈಪೋಟಿ ನೀಡುವವರಂತೆ ಮಲ್ಲಿಕಾರ್ಜುನ ಖರ್ಗೆಯವರು, ''ಪಹಲ್ಗಾಮ್ ಭಯೋತ್ಪಾದಕ ದಾಳಿಯ ಬಗ್ಗೆ ಪ್ರಧಾನಿ ಮೋದಿಯವರಿಗೆ ಮಾಹಿತಿಯಿತ್ತು'' ಎಂಬ ಅತ್ಯಂತ ಬೇಜವಾಬ್ದಾರಿಯ ಆರೋಪವನ್ನು ಮತ್ತೆ ಮತ್ತೆ ಮಾಡುತ್ತಿದ್ದಾರೆ. ''ಇದೊಂದು ಚುಟ್-ಪುಟ್ ಯುದ್ಧ'' ಎಂದು ಲಘುವಾಗಿ ವ್ಯಾಖ್ಯಾನಿಸುವ ಖರ್ಗೆಯವರು, ತಾವು ರಾಷ್ಟ್ರೀಯ ನಾಯಕ ಸ್ಥಾನಕ್ಕೆ ಬಡ್ತಿ ಪಡೆದಿರುವುದನ್ನು ಮರೆತು ರಾಜಕೀಯ ಪ್ರೇರಿತ ಆರೋಪ ಮಾಡುತ್ತಿದ್ದಾರೆ.

1962ರ ಭಾರತ-ಚೀನಾ ಯುದ್ಧದಲ್ಲಿ ಭಾರತವು ಪರಾಭವ ಹೊಂದಿ 'ಅಕ್ಸಾಯ್ ಚಿನ್' ಪ್ರದೇಶವನ್ನು ಕಳೆದುಕೊಂಡಿತು. ಯುದ್ಧ ಮುಗಿದ ತರುವಾಯದ ಸಂಸತ್ ಅಧಿವೇಶನದಲ್ಲಿ ಅಂದಿನ ಜನಸಂಘದ ನಾಯಕ ವಾಜಪೇಯಿ ಅವರು, ಯುದ್ಧದ ಸೋಲಿಗೆ ನೆಹರು ಅವರನ್ನು ಹೊಣೆ ಮಾಡಲಿಲ್ಲ ಅಥವಾ ಅವರ ರಾಜೀನಾಮೆ ಕೇಳಲಿಲ್ಲ. ಬದಲಿಗೆ ದೇಶದ ಪರವಾಗಿ ಬಲವಾಗಿ ನಿಂತರು. 1965ರ ಭಾರತ ಮತ್ತು ಪಾಕ್ ಯುದ್ಧದಲ್ಲಿ ಭಾರತವು ಮೇಲುಗೈ ಸಾಧಿಸಿದ್ದರೂ, ಒಂದು ವಾರ ನಡೆದ ಈ ಯುದ್ಧಕ್ಕೆ ವಿಶ್ವಸಂಸ್ಥೆಯ ಮಧ್ಯಪ್ರವೇಶದಿಂದಾಗಿ ಕದನವಿರಾಮ ಘೋಷ ಣೆಯಾಯಿತು. ಪ್ರಧಾನಿ ಲಾಲ್ ಬಹಾದುರ್ ಶಾಸ್ತ್ರಿಯವರು ಶಾಂತಿ ಒಪ್ಪಂದಕ್ಕೆ ಸಹಿ ಹಾಕಲು ತಾಷ್ಕೆಂಟ್‌ಗೆ ಹೋದಾಗ ನಿಗೂಢವಾಗಿ ಸಾವನ್ನ ಪ್ಪಿದರು. ವಿರೋಧ ಪಕ್ಷಗಳು ಆ ವಿಷಮ ಗಳಿಗೆಯಲ್ಲಿ ರಾಜಕೀಯವನ್ನು ಬದಿಗಿಟ್ಟು ದೇಶದೊಂದಿಗೆ ನಿಂತವು.

1971ರ ಯುದ್ಧದ ಸಂದರ್ಭದಲ್ಲಿಯೂ ಜನಸಂಘವು ಸರಕಾರದೊಂದಿಗೆ ಬಂಡೆಯಂತೆ ನಿಂತಿತು. ಯುದ್ಧದಲ್ಲಿ ಸೈನ್ಯವು ಸಾಧಿಸಿದ ಜಯವನ್ನು ಶಾಂತಿ ಸಂಧಾನದ ಹೆಸರಲ್ಲಿ ಸೋತೆವು. ಆದರೆ ಜನಸಂಘದ ನಾಯಕತ್ವವು ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರನ್ನು ಬೆಂಬಲಿಸಿತೇ ವಿನಾ, ಶಿಮ್ಲಾ ಒಪ್ಪಂದದ ಲೋಪ ದೋಷಗಳ ಕುರಿತು ಟೀಕೆ- ಟಿಪ್ಪಣಿ ಮಾಡುವ ಸಣ್ಣತನವನ್ನು ತೋರಲಿಲ್ಲ. ಸತತ ಚುನಾವಣೆಯ ಸೋಲಿನಿಂದ ಕಂಗೆಟ್ಟಿರುವ ಕಾಂಗ್ರೆಸ್, ತನ್ನ ನಕಾರಾತ್ಮಕ ನಿಲುವಿನ ಮೂಲಕ ಜನರ ವಿಶ್ವಾಸಗಳಿಸುವ ಭ್ರಮೆಯಲ್ಲಿದೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ಭಾರತೀಯರ ಹಿತಾಸಕ್ತಿಗಿಂತ ಅಧಿಕಾರ ರಾಜಕಾರಣವೇ ಮುಖ್ಯ ವಾಗಿಬಿಟ್ಟಿತಾ? ಎಂಬ ಅನುಮಾನ ಕಾಡುತ್ತಿದೆ. ಕಾಂಗ್ರೆಸ್ ಪಕ್ಷವು ಭಾರತದ ಪರ ನಿಲ್ಲಬೇಕಾದ ಸಮಯವಿದು, ಭಾರತ-ವಿರೋಧಿ ನಿಲುವು ತಳೆಯುವ ಸಮ ಯವಲ್ಲ, ಕಾಂಗ್ರೆಸ್ ಇದನ್ನು ಮರೆಯಬಾರದು.

(ಲೇಖಕರು ಬಿಜೆಪಿಯ ವಕ್ತಾರರು)

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅದ್ಭುತ ಬರಹ

ಶಶಿಧರ ಹಾಲಾಡಿ ಅವರ 'ಶಶಾಂಕಣ' ಒಂದು ವಿಶಿಷ್ಟ ಅಂಕಣ. 'ಕಾಡಿನ ನಡುವೆ ಕಟ್ಟಿಕೊಂಡ ಬದುಕು' ಶೀರ್ಷಿಕೆಯ ಬರಹವನ್ನು (ಮೇ 23) ಓದುವಾಗ, ಅವರ ಮಾರ್ಗದರ್ಶನದಲ್ಲಿ ನಾವೇ ಅಲ್ಲಿಗೆ ಹೋಗುತ್ತಿದ್ದೇವೆ ಎನ್ನಿಸಿತು. ನಮ್ಮ ಬಾಲ್ಯದ ದಿನಗಳನ್ನು ನೆನಪಿಸುವುದರ ಜತೆಗೆ, ಪ್ರಕೃತಿಯ ಸಹಜ ಭಾಗವಾಗಿ ಬದುಕುವ ಜನರ ಬಗ್ಗೆ ಗೌರವ, ಕುತೂಹಲ ಮೂಡಿಸುವ ಲೇಖನ ಇದಾಗಿತ್ತು. ಈ ಅಂಕಣ ಬರಹವನ್ನು ಓದಿದ ಮೇಲೆ ಕುಚ್ಚೂರು ಕಬ್ಬಿನಾಲೆಗೆ ಹೋಗಿ ಅಲ್ಲಿನ ಪರಿಸರವನ್ನು ಒಮ್ಮೆ ನೋಡಿ ಬರುವಂತೆ ಅನಿಸಿದ್ದು ಸುಳ್ಳಲ್ಲ. ಹಳ್ಳಿ, ಹಳ್ಳ, ತೊರೆ, ಜಲಧಾರೆ, ಸೂರ್ಯಾಸ್ತ, ದಟ್ಟಕಾಡು, ಬಿಳಿಲು ಸೇತುವೆ ಹೀಗೆ ಅಂಕಣದ ತುಂಬೆಲ್ಲಾ ಅದ್ಭುತವೆನಿಸುವ ವಿವರಗಳು. ಸಂತಸಪಡಲು ಇನ್ನೇನು ಬೇಕು?! ಶಶಿಧರ ಹಾಲಾಡಿಯವರಿಗೆ ಅಭಿನಂದನೆಗಳು.

-ಮುರಳೀ ಮೋಹನ್ ಮತ್ತು ಕೆ.ಜನಾರ್ದನ ತುಂಗ, ಬೆಂಗಳೂರು

ಮೋಸ ಹೋಗದಿರಿ

'ಹಳೆಯ ಚಂದಮಾಮಾ ಸಂಚಿಕೆಗಳ ಲಿಂಕ್ ಒದಗಿಸುತ್ತೇವೆ, ಇಂತಿಷ್ಟು ಹಣ ಪಾವತಿಸಿ' ಎಂಬರ್ಥದ ಬಹಳಷ್ಟು ಜಾಹೀರಾತುಗಳು ಅಂತರ್ಜಾಲದಲ್ಲಿ ಕಾಣಿಸುತ್ತಿರುವುದನ್ನು ಅನೇಕರು ಗಮನಿಸಿರಬಹುದು. ಯಾರೂ ಸಮೂಹಸನ್ನಿಗೆ ಒಳಗಾಗಿ ಇದಕ್ಕೆ ಬಲಿಯಾಗಿ ಹಣವನ್ನು ಕಳೆದುಕೊಳ್ಳದಿರಿ. ಲಭ್ಯವಿರುವ ಎಲ್ಲ ಚಂದಮಾಮಾ ಸಂಚಿಕೆಗಳು archive.orgತಾಣದಲ್ಲಿ ಉಚಿತವಾಗಿ ದೊರಕುತ್ತವೆ. ಇದರಲ್ಲಿ ಹುಡುಕುವುದು ಕಷ್ಟವೆನಿಸಿದರೆ, viramatime.blogspot.com ತಾಣದಲ್ಲಿ ವಾರಕ್ಕೊಂದು ಸಂಚಿಕೆ ನೇರವಾಗಿ ಓದಲು ಸಿಗುತ್ತದೆ.

-ಚಿದಂಬರ ಕಾಕತ್ಕರ್, ಮಂಗಳೂರು

ನೆಲಮಾಳಿಗೆ ಏಕೆ?

ತಗ್ಗಿನ ಪ್ರದೇಶಗಳಲ್ಲಿ ನೆಲಮಾಳಿಗೆ ನಿರ್ಮಿಸುವುದನ್ನು ತಡೆಗಟ್ಟಬೇಕು, ಅದರ ಸಂಬಂಧ ಕಾನೂನು ತರುತ್ತೇವೆ ಎಂದು ಮಾನ್ಯ ಉಪಮುಖ್ಯಮಂತ್ರಿ ಹಾಗೂ ನಗರಾಭಿವೃದ್ಧಿ ಸಚಿವರೂ ಆದ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಈ ನಿರ್ಣಯ ಸ್ವಾಗತಾರ್ಹ. ಅನೇಕ ಕಟ್ಟಡಗಳಲ್ಲಿ ನೆಲ ಮಹಡಿ ಇದ್ದು ಅದನ್ನು ಕಾರ್ ಪಾರ್ಕಿಂಗಿಗೂ ಬಿಡದೆ ಅಲ್ಲಿ ವಾಣಿಜ್ಯ ವ್ಯವಹಾರ ನಡೆಸುತ್ತಿರುವುದು ಕಂಡು ಬರುತ್ತದೆ. ಅಂಥ ಮಾಳಿಗೆಗಳಲ್ಲಿ ನೀರು ನುಗ್ಗಿ ಹಲವರು ಜೀವ ಕಳೆದುಕೊಂಡ ಉದಾಹರಣೆಗಳೂ ಇವೆ.

ಇಷ್ಟಕ್ಕೂ ಈ ನೆಲ ಮಹಡಿ ಅವಶ್ಯವೇ ಎಂದು ಆಲೋಚಿಸಬೇಕಾದ ಕಾಲ ಇದಾಗಿದೆ. ಕಟ್ಟಡದ ಎತ್ತರ ಮಿತಿಯನ್ನು ಕೊಂಚ ಸಡಿಲಿಸಿದರೆ ನೆಲ ಮಹಡಿ ಮಾಡದೆಯೇ ನೆಲ ಅಂತಸ್ತಿನಲ್ಲಿ ವಾಹನಗಳಿಗೆ ಜಾಗ ಮಾಡಬಹುದು. ಅತ್ಯಂತ ಚಿಕ್ಕ ನಿವೇಶನಗಳಲ್ಲಿ ಸಹ ನೆಲ ಮಹಡಿ ಮಾಡಿರುವುದು ಅಪಾಯವೇ ಸರಿ. ಜತೆಗೆ ಅಕ್ಕಪಕ್ಕದ ಕಟ್ಟಡಗಳಿಗೂ ಹಾನಿಯಾಗುವ ಸಂಭವ ಇರುತ್ತದೆ. ಅಂತೆಯೇ ಒಳಚರಂಡಿಯ ನೀರು ಕಟ್ಟಡದ ಸಂಪ್‌ನೊಳಗೆ ಹಾಗೂ ಅಂತರ್ಜಲಕ್ಕೂ ಸೇರಿ ನೀರು ಕಲುಷಿತಗೊಂಡು ಜನರ ಆರೋಗ್ಯಕ್ಕೆ ಕುತ್ತು ಬರುವ ಸಂಭವ ಇದೆ.

ಈ ಎಲ್ಲ ಕಾರಣಗಳಿಂದ ದೊಡ್ಡ ದೊಡ್ಡ ಮಾಲ್‌ಗಳ ಹೊರತಾದ ಇತರ ನಿವೇಶನಗಳಲ್ಲಿ ನೆಲ ಮಹಡಿ ಕಟ್ಟುವುದನ್ನು ನಿಷೇಧಿಸುವುದು ಸೂಕ್ತ. ಸಚಿವರು ತಮ್ಮ ಆಲೋಚನೆಯನ್ನು ಮುಂದೂಡದೆ ಈ ನಿಟ್ಟಿನಲ್ಲಿ ಶೀಘ್ರ ಆದೇಶ ನೀಡಲಿ ಹಾಗೂ ಅದನ್ನು ಕಟ್ಟುನಿಟ್ಟಾಗಿ ಪಾಲಿಸುವಂತಾಗಲಿ.

- ಪತ್ತಂಗಿ ಎಸ್.ಮುರಳಿ, ಬೆಂಗಳೂರು

ಹುಷಾರಾಗಿರಿ! ಕನ್ನಡಿಗರ ಅಸ್ಮಿತೆ ಜಾಗೃತವಾಗಿದೆ

ಉತ್ತರದ ರಾಜ್ಯಗಳಲ್ಲಿ ಕೆಲಸ ಮಾಡುವ ಸಂದರ್ಭ ಬಂದಾಗ, ದಕ್ಷಿಣದವರು ಕೊಂಚವಾದರೂ ಬಾಗುತ್ತಾರೆ, ತಮ್ಮದಲ್ಲದ ಸ್ಥಳೀಯ ಭಾಷೆಯನ್ನು (ಹಿಂದಿ ಇತ್ಯಾದಿ) ಸ್ವಲ್ಪ ಮಟ್ಟಿಗಾದರೂ ಕಲಿಯುತ್ತಾರೆ. ಅದೇ, ಉತ್ತರದ ಹಿಂದಿ ರಾಜ್ಯಗಳಿಂದ ಬಂದವರು ಈ ನಿಟ್ಟಿನಲ್ಲಿ ಹಿಂದೇಟು ಹಾಕುವುದರ ಜತೆಗೆ, ''ಹಿಂದಿ ರಾಷ್ಟ್ರಭಾಷೆಯಾಗಿರುವುದರಿಂದ ಸ್ಥಳೀಯರೇ ಅದನ್ನು ಕಲಿಯಬೇಕು'' ಎಂದು ವರಾತ ಮಾಡುತ್ತಾರೆ.

ವಿಶ್ಲೇಷಣೆ

ರಮಾನಂದ ಶರ್ಮಾ

vveditoped@gmail.com

ಕನ್ನಡದ ಮತ್ತು ಕನ್ನಡಿಗರ ಅಸ್ಮಿತೆಯನ್ನು ಕೆಣಕಿದ, ಅವಮಾನ ಮಾಡಿದ, ನಿಕೃಷ್ಟವಾಗಿ ನೋಡಿದ, ನಿರ್ಲಕ್ಷಿಸಿದ, 'ಡೋಂಟ್ ಕೇರ್' ಎಂದಿದ್ದ ಬ್ಯಾಂಕ್ ಅಧಿಕಾರಿಣಿಯೊಬ್ಬರ ಕಥೆಯಿದು; ''ನಾನು ಕೇವಲ ಹಿಂದಿ ಭಾಷೆಯಲ್ಲಿ ಮಾತನಾಡುತ್ತೇನೆಯೇ ವಿನಾ ಕನ್ನಡದಲ್ಲಲ್ಲ, ಬ್ಯಾಂಕ್ ಶಾಖೆಗಳಲ್ಲಿ ಸ್ಥಳೀಯ ಭಾಷೆಗಳಲ್ಲೇ ಮಾತನಾಡಬೇಕೆನ್ನುವ ನಿಯಮವಿಲ್ಲ. ಯಾವ ಕಾರಣಕ್ಕೂ ಕನ್ನಡದಲ್ಲಿ ಮಾತನಾಡುವುದಿಲ್ಲ, ಕನ್ನಡಿಗರ ಕ್ಷಮೆ ಕೇಳುವುದಿಲ್ಲ. ಬೇಕಿದ್ದರೆ ಬ್ಯಾಂಕ್ ಚೇರ್ಮನ್‌ಗೆ ದೂರು ನೀಡಿ'' ಎಂದೆಲ್ಲಾ ದುರಹಂಕಾರದಿಂದ ಹೂಂಕರಿಸಿದ್ದ ಬ್ಯಾಂಕ್ ಒಂದರ ಮಹಿಳಾ ಮ್ಯಾನೇಜರ್ ಕೊನೆಗೂ ಪಾಠ ಕಲಿತಿದ್ದಾರೆ. ತಮ್ಮ ವಿರುದ್ಧ ಕನ್ನಡಪರ ಸಂಘಟನೆಗಳು ಮತ್ತು ಕನ್ನಡಿಗರು ಬೀದಿಗಿಳಿಯುತ್ತಿದ್ದಂತೆ ತಮ್ಮ ಉದ್ಧಟತನದ ಹೇಳಿಕೆಗೆ ಕ್ಷಮೆಯಾಚಿಸಿದ್ದಾರೆ. ಬ್ಯಾಂಕ್‌ನ ಆಡಳಿತ ಮಂಡಳಿಯೂ ಆಕೆಯನ್ನು ಮತ್ತೊಂದೆಡೆಗೆ ವರ್ಗಾಯಿಸುವ ಮೂಲಕ, ದೊಡ್ಡ ವಿವಾದವಾಗಬಹುದಾಗಿದ್ದ ಘಟನೆಯನ್ನು ಮೊಳಕೆಯಲ್ಲೇ ಚಿವುಟಿ, ಪ್ರಬುದ್ಧತೆಯನ್ನು ಮೆರೆದಿದೆ.

ದಶಕಗಳ ಹಿಂದೆ ಬ್ಯಾಂಕುಗಳಲ್ಲಿ ಬಹುತೇಕವಾಗಿ ಇರುತ್ತಿದ್ದುದು ಸ್ಥಳೀಯರು ಮತ್ತು ಸ್ಥಳೀಯ ಭಾಷೆಗಳನ್ನು ಮಾತಾಡಬಲ್ಲ ಸಿಬ್ಬಂದಿಗಳು. ಆಗ ಗ್ರಾಹಕರಿಗೆ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳಲು ಅನುಕೂಲವಾಗುತ್ತಿತ್ತು. ಬ್ಯಾಂಕುಗಳಲ್ಲಿ ಸಿಬ್ಬಂದಿ ನೇಮಕಾತಿ ನಿಟ್ಟಿನಲ್ಲಿ, 'ಶಾಸ್ತ್ರಿ ಟ್ರಿಬ್ಯೂನಲ್ ಅವಾರ್ಡ್' ಅಡಿಯಲ್ಲಿ ಕ್ಲರಿಕಲ್ ಸಿಬ್ಬಂದಿಗಳನ್ನು ಅವರ ಭಾಷಾ ಪ್ರದೇಶದಲ್ಲಿ, ಅಧಿಕಾರಿ ಮತ್ತು ಮೇಲಿನ ವರ್ಗದ ಸಿಬ್ಬಂದಿಗಳನ್ನು ದೇಶಾದ್ಯಂತ ನೇಮಕ ಮಾಡಲಾ ಗುತ್ತಿತ್ತು. ಆದರೂ ಬ್ಯಾಂಕುಗಳಲ್ಲಿ ಸ್ಥಳೀಯರೇ ಹೆಚ್ಚಿನ ಪ್ರಮಾಣದಲ್ಲಿ ಇರುತ್ತಿದ್ದರು. ಕಾಲಕ್ರಮೇಣ ಬ್ಯಾಂಕುಗಳು ಕ್ಲರಿಕಲ್ ಸೇರಿದಂತೆ ಎಲ್ಲಾ ವರ್ಗದ ಸಿಬ್ಬಂದಿಗಳನ್ನೂ ದೇಶದ ಮೂಲೆ ಮೂಲೆಗೆ ವರ್ಗಾವಣೆ ಮಾಡಲು/ನಿಯೋಜಿಸಲು ಶುರು ಮಾಡಿದವು. ಬ್ಯಾಂಕುಗಳಲ್ಲಿ ಆಗಾಗ ಕಾಣಬರುವ ಭಾಷಾ ಸಂಘರ್ಷಕ್ಕೆ ಇದುವೇ ಕಾರಣವಾಗಿದೆ ಎನ್ನಬೇಕು. ಹೀಗೆ ಸೇವೆಗೆ ನಿಯುಕ್ತರಾದ ಅಥವಾ ವರ್ಗಾವಣೆಯಾದ ಸಿಬ್ಬಂದಿಗಳು ಒಂದು ವರ್ಷದೊಳಗೆ ಸ್ಥಳೀಯ ಭಾಷೆಯನ್ನು ಕಲಿಯಬೇಕು ಎನ್ನುವ ಕಟ್ಟುನಿಟ್ಟಾದ ನಿಯಮವಿದ್ದರೂ, ಇದನ್ನು ಬ್ಯಾಂಕುಗಳು ಪಾಲಿಸುತ್ತಿಲ್ಲ, ಈ ನಿಬಂಧನೆಯ ಪಾಲನೆಯಾಗಿದೆಯೇ ಎಂಬುದನ್ನು ಪರೀಕ್ಷಿಸುವ ವ್ಯವಸ್ಥೆಯೂ ಇಲ್ಲ. ಈ ನಿಯಮಾವಳಿ ಮತ್ತು ನಿಬಂಧನೆ ಸುತ್ತೋಲೆಗೆ ಸೀಮಿತವಾಗಿವೆ; ಒಂದೊಮ್ಮೆ ಕಟ್ಟುನಿಟ್ಟಾಗಿ ಅವುಗಳ ಪಾಲನೆಯಾಗಿದ್ದರೆ ಇಂಥ ಘಟನೆಗಳಿಗೆ ಅವಕಾಶ ಇರುತ್ತಿರಲಿಲ್ಲ.

ಹಾಗೆಂದ ಮಾತ್ರಕ್ಕೆ, ಹೊರರಾಜ್ಯದ ಸಿಬ್ಬಂದಿಗಳು ಸ್ಥಳೀಯ ಭಾಷೆಯನ್ನು ಕಲಿಯುವುದೇ ಇಲ್ಲ, ಅದನ್ನು ಬಳಸಿ ಕೊಂಡು ಗ್ರಾಹಕರಿಗೆ ಸೇವೆ ಸಲ್ಲಿಸುವುದೇ ಇಲ್ಲ ಎಂದೇನಲ್ಲ; ಆದರೆ ಇಂಥವರ ಸಂಖ್ಯೆ ಗಣನೀಯ ವಾಗಿಲ್ಲ ಎಂಬುದೇ ವಿಷಾದನೀಯ ಸಂಗತಿ. ಹೀಗೆ ಹೊರರಾಜ್ಯದಿಂದ ಬಂದವರಲ್ಲಿ ಬಹಳಷ್ಟು ಸಿಬ್ಬಂದಿ ಸ್ಥಳೀಯ ಭಾಷೆಯನ್ನು ಕಲಿಯುವ ಯತ್ನವನ್ನೇ ಮಾಡುವುದಿಲ್ಲ. ''ಇರುವ 2-3 ವರ್ಷಗಳಿಗಾಗಿ ನಾವೇಕೆ ಹೊಸಭಾಷೆಯನ್ನು ಕಲಿಯಬೇಕು?'' ಎನ್ನುವ ಧಾರ್ಷ್ಟ್ಯ ಇಂಥವರದ್ದು. ಜತೆಗೆ, ''ನಮ್ಮನ್ನು ಹೊರ ರಾಜ್ಯಗಳಿಗೆ ಕಳಿಸಿದ್ದೇಕೆ, ನಮ್ಮ ರಾಜ್ಯದಲ್ಲಿಯೇ ಉಳಿಸಿಕೊಳ್ಳಬಹುದಿತ್ತಲ್ಲಾ?'' ಎಂಬ ಉಡಾಫೆಯ ಮಾತು ಬೇರೆ!

ಅನ್ಯ ರಾಜ್ಯಗಳಲ್ಲಿ ಕೆಲಸ ಮಾಡುವ ಸಂದರ್ಭ ಬಂದಾಗ, ದಕ್ಷಿಣ ರಾಜ್ಯದವರು ಸ್ವಲ್ಪಮಟ್ಟಿಗಾದರೂ ಬಾಗುತ್ತಾರೆ. ಅಂದರೆ ಉತ್ತರದ ರಾಜ್ಯಗಳಲ್ಲಿ ಕೆಲಸ ಮಾಡಬೇಕಾಗಿ ಬಂದಾಗ, ತಮ್ಮದಲ್ಲದ ಸ್ಥಳೀಯ ಭಾಷೆಯನ್ನು (ಹಿಂದಿ ಇತ್ಯಾದಿ) ಸ್ವಲ್ಪ ಮಟ್ಟಿಗಾದರೂ ಕಲಿಯುತ್ತಾರೆ. ಆದರೆ, ಅದೇ ಉತ್ತರದ ಹಿಂದಿ ರಾಜ್ಯಗಳಿಂದ ಬಂದವರು ಈ ನಿಟ್ಟಿನಲ್ಲಿ ಹಿಂದೇಟು ಹಾಕುವುದರ ಜತೆಗೆ, ''ಹಿಂದಿ ರಾಷ್ಟ್ರಭಾಷೆಯಾಗಿರುವುದರಿಂದ ಸ್ಥಳೀಯರೇ ಅದನ್ನು ಕಲಿಯಬೇಕು'' ಎಂದು ವರಾತ ಮಾಡುತ್ತಾರೆ. ಹಿಂದಿಯು ರಾಷ್ಟ್ರಭಾಷೆ ಯಲ್ಲದಿದ್ದರೂ, ಹಾಗಂತ ಕೆಲವರು ಅಂಟಿಸಿರುವ ಹಣೆಪಟ್ಟಿಯನ್ನು ಹಿಂದಿಯೇತರರನ್ನು ದಬಾಯಿಸಲು ಹಿಂದಿ ಭಾಷಿಕರು ದುರುಪಯೋಗ ಮಾಡಿಕೊಳ್ಳುತ್ತಾರೆ. ಉದ್ಯೋಗಕ್ಕಾಗಿ ಅನ್ಯರಾಜ್ಯಗಳಿಗೆ ಹೋದ ಕನ್ನಡಿಗರು ಹಿಂದಿರುಗಿ ಬರುವಾಗ, ಆಯಾ ರಾಜ್ಯದ ಭಾಷೆಗಳಲ್ಲಿ ಪಳಗಿಯೇ ಬರುತ್ತಾರೆ. ಆದರೆ, ದಕ್ಷಿಣಕ್ಕೆ ಬಂದ ಉತ್ತರ ಭಾರತೀಯರು ಇಲ್ಲಿನ ಭಾಷೆಗಳಲ್ಲಿ ಪಂಡಿತರಾಗು ವುದಿರಲಿ, ದಿನನಿತ್ಯದ ಬದುಕಿಗೆ ಅನಿವಾರ್ಯವಾಗುವ ಶಬ್ದಗಳನ್ನೂ ಕಲಿಯುವುದಿಲ್ಲ!

ದಕ್ಷಿಣ ರಾಜ್ಯಗಳಿಗೆ ಬಂದು 3-4 ವರ್ಷ ಕಳೆದರೂ ಉತ್ತರ ಭಾರತದ ಉದ್ಯೋಗಿಗಳು ಸ್ಥಳೀಯ ಭಾಷೆ ಯನ್ನು ಕಲಿಯು ವುದಿಲ್ಲ ಎಂಬ ಆರೋಪದಲ್ಲಿ ಸತ್ಯವಿಲ್ಲದಿಲ್ಲ. ಆದರೆ, ಈ ಸ್ಥಿತಿಗೆ ಅವರಷ್ಟೇ ನಮ್ಮಂಥ ಸ್ಥಳೀಯರೂ ಕಾರಣ ಎನ್ನುವ ಸತ್ಯ ಎಷ್ಟು ಜನರಿಗೆ ಗೊತ್ತು? ನಮ್ಮ ಪ್ರದೇಶಗಳ ಬ್ಯಾಂಕು/ಕಚೇರಿಗಳಿಗೆ ನಿಯೋಜಿಸಲ್ಪಟ್ಟ ಅಥವಾ ವರ್ಗಾಯಿಸಲ್ಪಟ್ಟ ಪರಭಾಷಿ ಕರಿಗೆ ನಮ್ಮ ಭಾಷೆಯನ್ನು ಕಲಿಸಲು ನಾವು ಎಂದಾದರೂ ಪ್ರಯತ್ನಿಸಿದ್ದೇವೆಯೇ? ಸರಿಯಾಗಿ ಬರದಿ ದ್ದರೂ ಅವರ ಭಾಷೆಯಲ್ಲೇ ಸಂವಹನ ಮಾಡಿ ಅವರನ್ನು ಸುಪ್ರೀತ ಗೊಳಿಸಿ, ಅವರಿಂದ ಮೆಚ್ಚುಗೆ ಪಡೆಯುವುದಿಲ್ಲವೇ? ಮೊನ್ನೆ ಬ್ಯಾಂಕ್ ಅಧಿಕಾರಿಣಿಯೊಬ್ಬರು ಕನ್ನಡದ ಮತ್ತು ಕನ್ನಡಿಗರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡು ವಾಗ ಸ್ಥಳೀಯ ಸಿಬ್ಬಂದಿಯೊಬ್ಬರು ಅವರ ಪರವಾಗಿ ವಾದಿಸಿದ್ದರಂತೆ. ನಮ್ಮ ಶತ್ರುಗಳು ಹೊರಗಲ್ಲದೇ, ನಮ್ಮ ನಡುವೆಯೇ ಇದ್ದಾರೆ ಎಂಬ ಗ್ರಹಿಕೆಗೆ ಇದು ಪುಷ್ಟಿ ನೀಡುವು ದಿಲ್ಲವೇ? ಸಾಮಾಜಿಕ ಮಾಧ್ಯಮಗಳಲ್ಲಿ ಅನೇಕರು ಅವರ ಪರವಾಗಿ ಪೋಸ್ಟ್ ಹಾಕಿದ್ದರು, ಅವರಲ್ಲಿ ಹಲವರು ಕನ್ನಡಿ ಗರು ಎನ್ನುವುದು ಅಚ್ಚರಿಯ ವಿಷಯ.

ನನ್ನ ಅನುಭವವನ್ನೇ ಹೇಳಿಕೊಳ್ಳುವುದಾದರೆ, ಉದ್ಯೋಗ ನಿಮಿತ್ತ ವರ್ಗಾವಣೆಯಾಗಿ ನಾನು ಕೋಲ್ಕತ್ತಾಗೆ ಹೋದಾಗ, ಬಂಗಾಳಿ ಭಾಷೆ ಕಲಿಯುವಂತೆ ಎಲ್ಲರೂ ಮೊದಲ ದಿನವೇ ಕಚೇರಿಯಲ್ಲಿ ತಾಕೀತು ಮಾಡಿದ್ದರು. ಎಲ್ಲರೂ ನನ್ನೊಡನೆ ಬಂಗಾಳಿಯಲ್ಲಿಯೇ ಸಂವಹನ ನಡೆಸುತ್ತಿದ್ದರು. ದಿನಸಿ ಅಂಗಡಿಯವನು ಈ ನಿಟ್ಟಿನಲ್ಲಿ ನನಗೆ ಎಚ್ಚರಿಕೆಯನ್ನೂ ಕೊಟ್ಟಿದ್ದ. ಕೋಲ್ಕತ್ತಾ ದಿಂದ ಮರಳುವಾಗ ನಾನು ಇನ್ನೊಂದು ಭಾಷೆಯನ್ನು ಕಲಿತ ಹೆಮ್ಮೆಯಲ್ಲಿದ್ದೆ. ಸಭೆ-ಸಮಾರಂಭಗಳಲ್ಲಿ ಬಂಗಾಳಿ ಯೇತರರು ಸಾಕಷ್ಟು ಇದ್ದರೂ, ಕಾರ್ಯಕಲಾಪಗಳು ಬಂಗಾಳಿ ಭಾಷೆಯಲ್ಲೇ ನಡೆಯುತ್ತಿದ್ದವು. ''ಸರ್ವಾನ್ವಯಿ ಭಾಷೆ ಇರಲಿ'' ಎನ್ನುವ ನಮ್ಮ ಬೇಡಿಕೆಗೆ, ''ಇದು ಕೋಲ್ಕತ್ತಾ. ಇಲ್ಲಿ ಬಂಗಾಳಿಯನ್ನು ಕಲಿಯಲೇ ಬೇಕು. ತಿಳಿಯದಿದ್ದರೆ ಸಭೆಯಿಂದ ಹೊರಟುಹೋಗಿ'' ಎನ್ನುವ ಸಂದೇಶ ದೊರಕಿತ್ತು. ಕರ್ನಾಟಕದಲ್ಲಿ ಇದು ಸಾಧ್ಯವೇ?

ಈ ಸಮಸ್ಯೆ ಬಿಗಡಾಯಿಸಲು ನಮ್ಮ ಜನಪ್ರತಿನಿಧಿಗಳೂ ಕಾರಣ ಎನ್ನುವ ಮಾತು ಕೇಳಿಬರುತ್ತಿದೆ. ನಮ್ಮ ಭಾಷೆ ಮತ್ತು ಸಂಸ್ಕೃತಿಗಳ ರಕ್ಷಣೆಯ ವಿಷಯದಲ್ಲಿ ನಮ್ಮ ರಾಜಕಾರಣಿಗಳಿಗೆ ಅಷ್ಟೊಂದು ಆಸಕ್ತಿಯಿಲ್ಲ ಎಂಬುದು ಹಳೆಯ ಸಂಗತಿ. ಆಗೊಮ್ಮೆ ಈಗೊಮ್ಮೆ ಒಂದೆರಡು ಹೇಳಿಕೆಗಳನ್ನು ನೀಡುವುದನ್ನು ಬಿಟ್ಟರೆ ಅವರು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಲಿಲ್ಲ, ಈ ಸಮಸ್ಯೆಯನ್ನು ಆಳುಗ ವ್ಯವಸ್ಥೆಯ ಉನ್ನತ ಸ್ತರದಲ್ಲಿ ನಿವೇದಿಸಿ ಪರಿಹಾರ ಪಡೆಯಲು ಅವರು ಮನಸ್ಸು ಮಾಡಲಿಲ್ಲ. ಹೀಗಾಗಿ ಈ ಸಮಸ್ಯೆ ಈಗ ಹೆಮ್ಮರವಾಗಿ ಬೆಳೆದಿದ್ದು ನಿರಂತರವಾಗಿ 'ಹೆಡ್‌ಲೈನ್ಸ್'ನಲ್ಲಿ ಕಾಣುವಂತಾಗಿದೆ. ಈಗ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಅಖಾಡಕ್ಕೆ ಇಳಿದಿದ್ದಾರೆ. ಇಂಥ ವಿಷಯಕ್ಕೆ ಮುಖ್ಯ ಮಂತ್ರಿಗಳೇ ನೇರವಾಗಿ ಇಳಿದಿರುವುದು ಕರ್ನಾಟಕದ ಇತಿಹಾಸದಲ್ಲಿ ಬಹುಶಃ ಇದೇ ಮೊದಲ ಬಾರಿಯೋ ಏನೋ? ಬಿಜೆಪಿಯ ಶಾಸಕ ವಿಜಯೇಂದ್ರ ಮತ್ತು ಸಂಸದ ತೇಜಸ್ವಿ ಸೂರ್ಯ ಕೂಡ ಕನ್ನಡಿಗರ ಬೆಂಬಲಕ್ಕೆ ನಿಂತಿರುವುದು ಇನ್ನೊಂದು ವಿಶೇಷ. ಹಿಂದಿನ ಎಲ್ಲಾ ಇಂಥ ಘಟನೆಗಳಿಗಿಂತ ಇದು ಗಂಭೀರವಾಗಿರುವುದಕ್ಕೋ ಏನೋ ಈ ಬೆಳವಣಿಗೆ ಎನ್ನಲಾಗುತ್ತದೆ.

ಕೇಂದ್ರ ಸರಕಾರ ಕೂಡ ಭಾಷಾ ವಿಷಯದಲ್ಲಿ ದೃಢವಾದ ನಿಲುವು ತಳೆಯದೆಯೆ, ಯಾವುದೋ 'ಇಸಂ' ಹೆಸರಿನಲ್ಲಿ ಕೆಲವರಿಗೆ ಬೆಣ್ಣೆ ನೀಡಿ, ಮತ್ತೆ ಕೆಲವರಿಗೆ ಸುಣ್ಣ ಹಚ್ಚುತ್ತಿರುವಂತೆ ತೋರುತ್ತದೆ. ಭಾಷೆ ತಿಳಿಯದವರನ್ನು ಹೊರರಾಜ್ಯದಿಂದ ತಂದು ಇಲ್ಲಿ ನಿಯೋಜಿಸುತ್ತಿರುವುದರ ಹಿಂದಿನ ಉದ್ದೇಶ ಅರ್ಥ ವಾಗುತ್ತಿಲ್ಲ. ಇಂಥವರ ನಿಯೋಜನೆಯಿಂದ ಗ್ರಾಹಕರಿಗೆ ಅನನುಕೂಲವಾಗುವುದಾದರೆ, ಅಂಥ ಕ್ರಮಕ್ಕೆ ಮುಂದಾ ಗುವುದಾದರೂ ಏಕೆ? ಗ್ರಾಹಕರ ಸೇವೆಯೇ ಇಂಥ ಕ್ರಮದ ಉದ್ದೇಶವಾಗಿರಬೇಕೇ ಹೊರತು ಬೇರೆ ಯಾವ ಕಾರಣವೂ ಅದರ ನೇಪಥ್ಯದಲ್ಲಿ ಇರಬಾರದಲ್ಲವೇ? ರಾಷ್ಟ್ರೀಕೃತ ಬ್ಯಾಂಕುಗಳಲ್ಲಿನ ಇಂಥ ಭಾಷಾ ತೊಂದರೆಯಿಂದಾಗಿ, ಸ್ಥಳೀಯ ಭಾಷೆಯಲ್ಲಿ ವ್ಯವಹಾರ ನಡೆಯುವ ಮತ್ತು ಸ್ಥಳೀಯ ಸಿಬ್ಬಂದಿಗಳು ಇರುವ ಸಹಕಾರಿ ಬ್ಯಾಂಕುಗಳಿಗೆ ಹಲವು ಗ್ರಾಹಕರು ಶಿಫ್ಟ್ ಆಗುತ್ತಿದ್ದಾರೆ ಎಂದು ರಾಷ್ಟ್ರೀಕೃತ ಬ್ಯಾಂಕುಗಳ ಮ್ಯಾನೇಜರ್‌ಗಳು ಅಲವತ್ತುಕೊಳ್ಳುತ್ತಿದ್ದಾರೆ.

ಮೊನ್ನೆ ಗಲಾಟೆ ಮಾಡಿಕೊಂಡ ಬ್ಯಾಂಕಿನ ಅಧಿಕಾರಿಣಿಯ ವಿಷಯಕ್ಕೆ ಮತ್ತೆ ಬರೋಣ. ಅಖಿಲ ಭಾರತ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೇರ್ಗಡೆ ಯಾಗಿ ಮ್ಯಾನೇಜರ್ ಆಗಿ ನೇಮಕಗೊಂಡಿದ್ದ ಆಕೆ, ಈ ಸಮಸ್ಯೆಯನ್ನು ಇನ್ನೂ ನಾಜೂಕಾಗಿ, ಯಾರಿಗೂ ಮನನೋಯದಂತೆ ಬಗೆಹರಿಸಬಹುದಿತ್ತು. ಆದರೆ ದರ್ಪ ಮತ್ತು ಅಹಂಕಾರ ಅವರಿಗೆ ಕೈಕೊಟ್ಟಂತೆ ಕಾಣುತ್ತದೆ. ಈ ದೇಶದಲ್ಲಿ ಜಾತಿ ಮತ್ತು ಧರ್ಮದಂತೆ ಭಾಷೆಯೂ ಬಹುಸೂಕ್ಷ್ಮ ಮತ್ತು ಭಾವನಾತ್ಮಕ ವಿಷಯವಾಗಿದ್ದು, ಇದನ್ನು ಅತಿ ಎಚ್ಚರಿಕೆಯಿಂದ ನಿರ್ವಹಿಸಬೇಕು ಎಂಬ ವಾಸ್ತವವನ್ನು ತಿಳಿಯದೇ ಅವರು ಎಡವಟ್ಟು ಮಾಡಿ ಕೊಂಡರು. ಮನಸ್ಸಿನಲ್ಲಿ ಏನೇ ಇರಲಿ, ''ನಾನು ಈ ಊರಿಗೆ ಮತ್ತು ಇಲ್ಲಿನ ಭಾಷೆಗೆ ಹೊಸಬಳು, ಇನ್ನು ಕೆಲವು ದಿನಗಳಲ್ಲಿ ಕನ್ನಡವನ್ನು ಸರಾಗವಾಗಿ ಮಾತನಾಡುವೆ'' ಎಂಬ ನಾಜೂಕಿನ ಶೈಲಿಯಲ್ಲಿ ಹೇಳಿದ್ದರೆ, ಈಗ ಆದ ಅವಮಾನ ಮತ್ತು ಮುಜುಗರದಿಂದ ಅವರು ಪಾರಾಗಬಹುದಿತ್ತು. ಆದರೆ ಅವರ ದರ್ಪ, ದುರಹಂ ಕಾರವೇ ಅವರಿಗೆ ಮುಳು ವಾಗಿ ಪರಿಣಮಿಸಿತು. ಅವರೇನೋ ಈಗ ಕ್ಷಮಾಪಣೆ ಕೇಳಿದ್ದಾರೆ. ಆದರೆ, ಕನ್ನಡಪರ ಹೋರಾಟಗಾರರು ಅದನ್ನು ಒಪ್ಪುತ್ತಿಲ್ಲ. ''ಇದು ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಲು ಆಡಿದ ನಾಟಕವೇ ವಿನಾ, ಹೃದಯ ಪೂರ್ವಕವಾಗಿ ಬಂದ ದ್ದಲ್ಲ'' ಎಂದು ಅವರು ತಕರಾರು ತೆಗೆದಿದ್ದಾರೆ, ಲಿಖಿತ ಕ್ಷಮಾಪಣೆಯನ್ನು ಕೇಳುತ್ತಿದ್ದಾರೆ. ''ಕ್ಷಮಾಪಣೆ ಕೇಳುವಾಗ ಅವರಲ್ಲಿ ಪಶ್ಚಾತ್ತಾಪದ ಮುಖಭಾವ ಇರಲಿಲ್ಲ, ಇದು ಮ್ಯಾನೇಜ್‌ಮೆಂಟ್‌ನ ಒತ್ತಡದಿಂದ ಕೇಳಿದ ಕಾಟಾಚಾರದ ಕ್ಷಮಾಪಣೆ'' ಎನ್ನಲಾಗುತ್ತಿದೆ. ಇದು ಇನ್ನು ಯಾವ ತಿರುವನ್ನು ತೆಗೆದುಕೊಳ್ಳುತ್ತದೋ ತಿಳಿಯದು. ಏಕೆಂದರೆ, ಮಹಾರಾಷ್ಟ್ರದಲ್ಲಿ ಸಿಬ್ಬಂದಿ ಮೇಲೆ ದೈಹಿಕ ಹಲ್ಲೆ ಮಾಡುವವರೆಗೆ ಭಾಷಾ ಸಂಘರ್ಷ ತಾರಕಕ್ಕೇರಿದೆ.

ಕೆಲವು ದಿನಗಳ ಹಿಂದೆ, ವಿಂಗ್ ಕಮಾಂಡರ್ ಶೈಲಾದಿತ್ಯ ಬೋಸ್ ಅವರು ಕನ್ನಡಿಗನೊಬ್ಬನ ಮೇಲೆ ಮಾಡಿದ ಹಲ್ಲೆ, ಕೋರಮಂಗಲದಲ್ಲಿ ಹೋಟೆಲ್ ಒಂದು ತನ್ನ ಡಿಜಿಟಲ್ ಬೋರ್ಡ್‌ನಲ್ಲಿ ಕನ್ನಡಿಗರನ್ನು ಅವ ಮಾನಿಸಿದ ಘಟನೆ, ಈಗ ಬ್ಯಾಂಕ್ ಒಂದರ ಅಧಿಕಾರಿಣಿ ಕನ್ನಡವನ್ನು ಮತ್ತು ಕನ್ನಡಿಗರನ್ನು ಹಗುರವಾಗಿ ನಡೆಸಿಕೊಂಡ ರೀತಿ- ಇವೆಲ್ಲಕ್ಕೂ ಈ ನೆಲದಲ್ಲಿ ಹೊಮ್ಮಿರುವ ಆಕ್ರೋಶ ಮತ್ತು ಪ್ರತಿಭಟನೆಗಳು, ಕನ್ನಡಿಗರು ತಮ್ಮ ನಾಡು-ನುಡಿಗಳಿಗಾಗಿ ಜಾಗೃತರಾ ಗಿದ್ದಾರೆ ಎಂಬ ದೃಢವಾದ ಸಂದೇಶವನ್ನು ನೀಡಿವೆ. ಮಾತ್ರವಲ್ಲದೆ, ಪರರಾಜ್ಯಗಳಿಂದ ಬಂದ ಉದ್ಯೋಗಿಗಳು, ಕನ್ನಡದ ಮತ್ತು ಕನ್ನಡಿಗರ ಬಗೆಗಿನ ತಮ್ಮ ಧೋರಣೆಯನ್ನು ಬದಲಿಸಿಕೊಳ್ಳುತ್ತಾರೆ ಎಂಬ ಆಶಾಭಾವನೆಯನ್ನು ಇದು ಮೂಡಿಸಿದೆ.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಕಳಕಳಿ

ಸತ್ಯಬೋಧ, ಬೆಂಗಳೂರು

ಹಾವಳಿಯನ್ನು ತಡೆಗಟ್ಟಿರಿ

ರಾಜಧಾನಿ ಬೆಂಗಳೂರಿನಲ್ಲಿ ವ್ಯಾಪಿಸಿರುವ ನಕಲಿ ವೈದ್ಯರ ಜಾಲದ ಕುರಿತು ಇತ್ತೀಚೆಗೆ ವಾಹಿನಿಯೊಂದರಲ್ಲಿ ಬಿತ್ತರವಾದ ಸುದ್ದಿ ಬೆಚ್ಚಿ ಬೀಳಿಸುವಂತಿತ್ತು. ಇದೇನೂ ಗುಟ್ಟಾಗಿ ನಡೆಯುತ್ತಿಲ್ಲ, ನಕಲಿ ವೈದ್ಯರು ಕ್ಲಿನಿಕ್ ಸ್ಥಾಪಿಸಿ ರಾಜಾರೋಷವಾಗಿ ಚಿಕಿತ್ಸೆ ನೀಡುತ್ತಿದ್ದಾರೆ, ರೋಗಿಗಳೂ ಅಲ್ಲಿಗೆ ತೆರಳುತ್ತಿದ್ದಾರೆ. ನಕಲಿ ವೈದ್ಯರ ಚಿಕಿತ್ಸೆಯು ಜನರ ವಿಶ್ವಾಸಕ್ಕೆ ಪಾತ್ರವಾಗಿರುವುದು ಒಂದು ವಿಸ್ಮಯ. ಮುಚ್ಚುಮರೆಯಿಲ್ಲದೆ ನಡೆದಿದ್ದರೂ ಇದು ಆರೋಗ್ಯ ಇಲಾಖೆಯ ಗಮನಕ್ಕೆ ಬಂದಿಲ್ಲ, ಪೊಲೀಸರೂ ಗಮನಿಸಿಲ್ಲ. ಇದು ಏಕೆಂದು ಅರ್ಥವಾಗುತ್ತಿಲ್ಲ.

ಇಂಥ ನಕಲಿ ದಂಧೆಗೆ ಕಾರಣವೇನಿರಬಹುದು ಎಂಬುದನ್ನು ಅವಲೋಕಿಸೋಣ. ಈಗಂತೂ ವೈದ್ಯಕೀಯ ಪದವಿ ಪಡೆಯಲು ಲಕ್ಷಗಟ್ಟಲೆ ಹಣ ಖರ್ಚಾಗುತ್ತದೆ. ಇದಕ್ಕೆ ಮಾಡಿದ ಸಾಲವನ್ನು ತೀರಿಸಬೇಕು, ಜತೆಗೆ ವೈದ್ಯವೃತ್ತಿಗೆ ಅನುಗುಣವಾದ ಜೀವನವನ್ನು ನಡೆಸಬೇಕು. ಈ ಎಲ್ಲ ಕಾರಣ ಗಳಿಂದಾಗಿ ವೈದ್ಯರ ಶುಲ್ಕ ದುಬಾರಿ ಯಾಗುತ್ತಿದ್ದು ಜನಸಾಮಾನ್ಯರಿಗೆ ಅದು ಎಟುಕುತ್ತಿಲ್ಲ. ಇಂಥವರಿಗೆ ನಕಲಿ ಕ್ಲಿನಿಕ್ಕುಗಳೇ ಗತಿ.

ಈಗೀಗ ಎಂಬಿಬಿಎಸ್ ವೈದ್ಯರೆಲ್ಲ ಹೆಚ್ಚುವರಿಯಾಗಿ ಎಂ.ಡಿ. ಪದವಿ ಪಡೆದು, ವಿಶೇಷ ತಜ್ಞರಾಗಿ ಒಂದಲ್ಲಾ ಒಂದು ಹೈಟೆಕ್ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಾ, ಸಾಯಂಕಾಲದ ವೇಳೆ ತಮ್ಮದೇ ಕ್ಲಿನಿಕ್ ನಡೆಸು ತ್ತಾರೆ. ಇಲ್ಲಿ ಚಿಕಿತ್ಸೆ ದುಬಾರಿ. ಜ್ವರ ಇದ್ದರೆ, ಇದು ಯಾವ ಜ್ವರ ಅಂತ ರಕ್ತಪರೀಕ್ಷೆಯಿಂದ ದೃಢಪಡಿಸಿಕೊಂಡು ಸೂಕ್ತ ಔಷಧ ನೀಡುತ್ತಾರೆ. ಹೀಗಾಗಿ ರೋಗಿಗೆ ಆರ್ಥಿಕ ಹೊರೆ ಯಾಗಿ ತತ್ತರಿಸಬೇಕಾಗುತ್ತದೆ. ಆದ್ದರಿಂದ ನಕಲಿ ಕ್ಲಿನಿಕ್ಕುಗಳೇ ಇಂಥ ವರಿಗೆ ಆಪದ್ಬಾಂಧವರಿದ್ದಂತೆ. ನಕಲಿ ವೈದ್ಯರ ಕ್ಲಿನಿಕ್‌ನ ಹೊರಗಡೆ ನೇತುಹಾಕಿರುವ ಫಲಕದಲ್ಲಿ ವೈದ್ಯರ ಹೆಸರಿನ ಮುಂದೆ ದಂಡಿಯಾಗಿ ಪದವಿಗಳ ಹೆಸರು ಇರುತ್ತವೆಯಾದ್ದರಿಂದ, ಇವರು ವೈದ್ಯಕೀಯ ಪದವೀಧರರೆಂದೇ ಅಮಾಯಕರು ನಂಬುತ್ತಾರೆ. ಕೆಮ್ಮು, ನೆಗಡಿ, ಜ್ವರ, ಮೈಕೈ ನೋವು, ಚರ್ಮವ್ಯಾಧಿ ಇವುಗಳಿಗೆ ರೆಡಿಮೇಡ್ ಔಷಧಿಗಳು ಲಭ್ಯವಿವೆ. ಅದೂ ಅಲ್ಲದೆ, ಕೈಯಲ್ಲಿರುವ ಮೊಬೈಲ್‌ನಲ್ಲೇ ಗೂಗಲ್ ನೆರವಿನಿಂದ, ಯಾವ ಕಾಯಿಲೆಗೆ ಯಾವ ಔಷಧಿ ಎಂದು ಈಗ ಸುಲಭವಾಗಿ ತಿಳಿಯಲು ಸಾಧ್ಯ. ಇದನ್ನು ತಿಳಿದ 'ಬುದ್ಧಿವಂತರು', ಮಾರಾಟಕ್ಕಿರುವ, ನೋಂದಣಿಯ ಅಗತ್ಯವಿಲ್ಲದ ಪದವಿಯನ್ನು ಖರೀದಿಸಿ, ನಕಲಿ ಕ್ಲಿನಿಕ್ ಅನ್ನು ತೆರೆಯುತ್ತಾರೆ.

ಹಿಂದೆ 'ಎಲ್.ಎಂ.ಪಿ' ಎನ್ನುವ ಅಲೋಪತಿ ಡಿಪ್ಲೊಮಾ ಇತ್ತು. ಎಸ್‌ಎಸ್‌ಎಲ್‌ಸಿ ನಂತರ ಸಾಮಾನ್ಯ ವಿದ್ಯಾರ್ಥಿಗಳೂ ಇದನ್ನು ಓದುತ್ತಿದ್ದರು. ಈ ಶಿಕ್ಷಣ ಕ್ರಮದಲ್ಲಿ, ರೋಗಲಕ್ಷಣಗಳು, ಅದಕ್ಕೆ ಕಾರಣ ಮೊದಲಾಗಿ ಎಲ್ಲ ಅಗತ್ಯ ವಿವರಗಳನ್ನೂ ಬೋಧಿಸಲಾಗುತ್ತಿತ್ತು; ಆದರೆ ಪ್ರಾಥಮಿಕ ಹಂತದ ಈ ಶಿಕ್ಷಣ ಕ್ರಮದಲ್ಲಿ ಮುಂಬರಿಕೆಯ ಚಿಕಿತ್ಸಾ ಕ್ರಮಗಳು ಮತ್ತು ಶಸ್ತ್ರಚಿಕಿತ್ಸೆಯ ಕುರಿತಾದ ಬೋಧನೆ ಮಾತ್ರ ಇರುತ್ತಿರಲಿಲ್ಲ. ಇಲ್ಲಿ ಚಿಕಿತ್ಸೆ ಶಾಸ್ತ್ರೀಯವಾಗಿದ್ದು ಚಿಕಿತ್ಸಾ ವೆಚ್ಚವೂ ಜನಸಾಮಾನ್ಯರಿಗೆ ಎಟಕುವಂತೆ ಇರುತ್ತಿತ್ತು. ಹೀಗಾಗಿ ನಕಲಿ ವೈದ್ಯರ ಹಾವಳಿ ಅಷ್ಟೊಂದು ಇರಲಿಲ್ಲ.

ಪ್ರಸ್ತುತ, ಅಂಥ ಎಲ್‌ಎಂಪಿ ಡಿಪ್ಲೊಮಾ ಕೋರ್ಸ್ ಅನ್ನು ಆರಂಭಿಸುವತ್ತ ಸರಕಾರವು ಗಮನಹರಿಸಿದರೆ, ಸಾಮಾನ್ಯ ಕುಟುಂಬದ ಮಕ್ಕಳೂ 'ಪ್ರಾಥಮಿಕ ಹಂತ'ದ ವೈದ್ಯರಾಗಲು ಸಾಧ್ಯವಾಗುತ್ತದೆ. ಶಾಸ್ತ್ರೋಕ್ತ ಚಿಕಿತ್ಸೆ ಲಭ್ಯವಾಗುವುದರಿಂದ, ಜನಸಾಮಾನ್ಯರಿಗೂ ಸುಲಭದಲ್ಲಿ ಮತ್ತು ಕೈಗೆಟುಕುವ ದರದಲ್ಲಿ ಚಿಕಿತ್ಸೆ ದೊರೆಯುತ್ತದೆ ಮತ್ತು ನಕಲಿ ವೈದ್ಯರ ಹಾವಳಿಗೂ ತಡೆ ಬಿದ್ದಂತಾಗುತ್ತದೆ. ಸರಕಾರವು ವಿವಿಧ ಕ್ಷೇತ್ರತಜ್ಞರೊಡನೆ ಸಮಾಲೋಚಿಸಿ ಈ ವಿಷಯದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಿ.

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: **VISHWESHWAR BHAT**, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : **Vishweshwar Bhat.** ಪ್ರಧಾನ ಸಂಪಾದಕ: **ವಿಶ್ವೇಶ್ವರ ಭಟ್**
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:130

ಸಮಾಚಾರ ಸಣ್ಣದಲ್ಲ

ಪತ್ನಿ ಸೀಮಂತದ ವೇಳೆ ಕುಸಿದು ಬಿದ್ದು ಪತಿ ಸಾವು

ವಿಟ್ಲ: ವಿಟ್ಲ ಸಮೀಪದ ಕನ್ಯಾನದಲ್ಲಿ ತನ್ನ ಪತ್ನಿಯ ಸೀಮಂತ ಕಾರ್ಯಕ್ರಮದ ಸಿದ್ಧತೆಯಲ್ಲಿ ತೊಡಗಿದ್ದ ವ್ಯಕ್ತಿಯೊಬ್ಬರು ಮನೆಯಲ್ಲಿ ಕುಸಿದು ಬಿದ್ದು ಶುಕ್ರವಾರ ಮೃತಪಟ್ಟಿದ್ದಾರೆ. ಕನ್ಯಾನ ಮಿತ್ತನಡ್ಕ ನಿವಾಸಿ ಪಿಕಪ್ ವಾಹನದ ಚಾಲಕ ಸತೀಶ್ (33) ಮೃತ ವ್ಯಕ್ತಿ. ಅವರ ಪತ್ನಿಯ ಸೀಮಂತ ಶುಕ್ರವಾರ ನಿಗದಿಯಾಗಿತ್ತು. ಮನೆಯಲ್ಲಿ ಬೆಳಗ್ಗೆ ಕುಸಿದು ಬಿದ್ದ ಅವರನ್ನು ಕೂಡಲೇ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಯಿತು. ಬಳಿಕ ಹೆಚ್ಚಿನ ಚಿಕಿತ್ಸೆಗೆ ಮಂಗಳೂರಿನ ಆಸ್ಪತ್ರೆಯೊಂದಕ್ಕೆ ಕರೆದೊಯ್ಯಲಾಯಿತು. ಅಷ್ಟರಲ್ಲಿ ಅವರು ಕೊನೆಯುಸಿರೆಳೆದಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಸೀಮಂತದ ಸಂಭ್ರಮದಲ್ಲಿದ್ದ ಮನೆಯಲ್ಲಿ ಈಗ ಆಕ್ರಂದನ ಮುಗಿಲು ಮುಟ್ಟಿದೆ. ಸಾವಿಗೆ ವೈದ್ಯಕೀಯ ಕಾರಣ ತಿಳಿದು ಬಂದಿಲ್ಲ.

ಮದುವೆ ಮಾಡಿಸಿದ್ದ ಬ್ರೋಕರ್‌ನನ್ನೇ ಹತ್ಯೆಗೈದ ಭೂಪ

ಮಂಗಳೂರು: ಹೆಂಡತಿ ಮನೆ ಬಿಟ್ಟು ಹೋದ ವಿಚಾರಕ್ಕೆ ಕೋಪಗೊಂಡ ಪತಿಯೊಬ್ಬ ಮದುವೆ ಬ್ರೋಕರ್‌ನನ್ನೇ ಹತ್ಯೆ ಮಾಡಿದ ಘಟನೆ ನಡೆದಿದೆ. ನಗರದ ಹೊರವಲಯದ ವಳಚಿಲ್‌ನಲ್ಲಿ ಗುರುವಾರ ರಾತ್ರಿ ಸುಲೇಮಾನ್ (50) ಎಂಬವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ. ಘಟನೆಯಲ್ಲಿ ಸುಲೇಮಾನ್ ಅವರ ಇಬ್ಬರು ಪುತ್ರರಾದ ರಿಯಾಬ್ ಮತ್ತು ಸಿಯಾಬ್ ಗಾಯಗೊಂಡಿದ್ದಾರೆ. ಮುಸ್ತಫಾ (30) ಎಂಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಮೃತ ಸುಲೇಮಾನ್, ವಿವಾಹ ದಲ್ಲಾಳಿಯಾಗಿ ಕೆಲಸ ಮಾಡುತ್ತಿದ್ದರು. ಇವರು ಆರೋಪಿ ಮುಸ್ತಫಾ ಎಂಬಾ ತನಿಗೆ ಮಹಿಳೆಯೊಂದಿಗೆ ಸುಮಾರು 8 ತಿಂಗಳ ಹಿಂದೆ ವಿವಾಹ ಮಾಡಿಸಿದ್ದರು. ಆದರೆ, ವೈವಾಹಿಕ ಜೀವನದಲ್ಲಿ ಉಂಟಾದ ಕಲಹದಿಂದ ಮಹಿ ಳೆಯು ಎರಡು ತಿಂಗಳ ಹಿಂದೆ ತಮ್ಮ ತವರು ಮನೆಗೆ ಮರಳಿದ್ದರು. ಇದರಿಂದ ಮುಸ್ತಫಾ ಮತ್ತು ಸುಲೇಮಾನ್ ನಡುವೆ ಒಡಕು ಉಂಟಾಗಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರತಿಯೊಬ್ಬರೂ ವರ್ಷಕ್ಕೆ ಒಂದು ಬಾರಿ ಆದರೂ ದೇಹವನ್ನು ಪೂರ್ಣ ತಪಾಸಣೆ ಮಾಡಿಸಿಕೊಳ್ಳಿ: ಸಿಎಂ

16 ಜಿಲ್ಲಾಸ್ಪತ್ರೆಗಳಲ್ಲಿ ಕಿಮೋಥೆರಪಿ ಕೇಂದ್ರ

ಮೈಸೂರು: ಕರ್ನಾಟಕದ 16 ಜಿಲ್ಲಾ ಆಸ್ಪತ್ರೆಗಳಲ್ಲಿ ಕಿಮೋಥೆರಪಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನ ಮೇಟಗಳ್ಳಿ ಜಿಲ್ಲಾ ಆಸ್ಪತ್ರೆಯಲ್ಲಿ ಕಿಮೋಥೆರಪಿ ಆರೈಕೆ ಕೇಂದ್ರಗಳ ಉದ್ಘಾಟನೆಯನ್ನು ನೆರವೇರಿಸಿ ಅವರು ಮಾತನಾಡಿ, ಮೈಸೂರಿನಲ್ಲಿ 20 ಬೆಡ್ ಗಳ ಹಾಗೂ ಇತರೆಡೆ 10 ಬೆಡ್ ಗಳ ಕೇಂದ್ರಗಳನ್ನು ತೆರೆಯಲಾಗಿದೆ. ಈ ಕೇಂದ್ರಗಳನ್ನು ಕಳೆದ ವರ್ಷದ ಬಜೆಟ್ ನಲ್ಲಿ ಘೋಷಣೆ ಮಾಡಲಾಗಿತ್ತು. ಹಲವು ಜನ ಕ್ಯಾನ್ಸರ್ ಚಿಕಿತ್ಸೆಗೆ ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಬೇಕಿತ್ತು. ಇದನ್ನು ತಪ್ಪಿಸಲು ಕಿಮೋಥೆರಪಿ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಪ್ರತಿ ವರ್ಷ 70 ಸಾವಿರ ಜನ ಕ್ಯಾನ್ಸರ್ ರೋಗಕ್ಕೆ ತುತ್ತಾಗುತ್ತಿದ್ದಾರೆ. ಇವರೆಲ್ಲಾ ಚಿಕಿತ್ಸೆ ಪಡೆಯಲು ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಗೆ ಹೋಗಬೇಕಿತ್ತು. ಇವರಿಗೆ ಹತ್ತಿರದಲ್ಲಿ ಚಿಕಿತ್ಸೆ ನೀಡಲು 16 ಜಿಲ್ಲಾ ಆಸ್ಪತ್ರೆಗಳಲ್ಲಿ ಕಿಮೋಥೆರಪಿ ಕೇಂದ್ರಗಳನ್ನು ತೆರೆಯಲಾಗಿದೆ. ಕಿಮೋಥೆರಪಿ ಚಿಕಿತ್ಸೆ ಪಡೆದು 10, 15, ವರ್ಷ ಬದುಕಿದ್ದಾರೆ. ಕ್ಯಾನ್ಸರ್ ಬಂದರೆ ಯಾರು ಧೃತಿಗೆಡಬಾರದು. ಪ್ರತಿಯೊಬ್ಬರೂ ವರ್ಷಕ್ಕೆ ಒಂದು ಬಾರಿ ಆದರೂ ದೇಹವನ್ನು ಪೂರ್ಣ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ನಾನು 2013ರಲ್ಲಿ ಅಧಿಕಾರಕ್ಕೆ ಬಂದಾಗ ಉಚಿತವಾಗಿ 5 ಕೆ ಜಿ ಅಕ್ಕಿಯನ್ನು ಉಚಿತವಾಗಿ ಬಿಪಿಎಲ್ ಕಾರ್ಡ್ ದಾರರಿಗೆ ನೀಡಲಾಗಿತ್ತು ಇದರ ಉದ್ದೇಶ ಯಾರು ಹಸಿವಿನಿಂದ ಮಲಗಬಾರದು. 2023 ರಲ್ಲಿ ಅಧಿಕಾರಕ್ಕೆ ಬಂದಾಗ ಅದನ್ನು 10 ಕೆ.ಜಿ ಗೆ ಹೆಚ್ಚಳ ಮಾಡಲಾಗಿದೆ. ಮೈಸೂರು ಜಿಲ್ಲಾ ಆಸ್ಪತ್ರೆಗೆ ಎಂಆರ್ ಐ ಸ್ಕ್ಯಾನಿಂಗ್ ಸೌಲಭ್ಯವನ್ನು ನೀಡಲಾಗುತ್ತಿದೆ. ರಾಜ್ಯದ 240 ಕೇಂದ್ರಗಳಲ್ಲಿ ಡಯಾಲಿಸಿಸ್ ಚಿಕಿತ್ಸೆಯನ್ನು ಒದಗಿಸಲಾಗಿದೆ ಎಂದು ಮಾಹಿತಿ ನೀಡಿದರು.

ಶಾಸಕ ಕೆ.ಹರೀಶ್ ಗೌಡ, ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕ ನವೀನ್ ಭಟ್, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ ಮಹದೇವಪ್ಪ, ವಿಧಾನ ಪರಿಷತ್ ನ ಸದಸ್ಯರಾದ ಡಿ. ತಿಮ್ಮಯ್ಯ, ಡಾ. ಯತಿಂದ್ರ ಸಿದ್ದರಾಮಯ್ಯ, ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಒ ಎಸ್ ಯುಕೇಶ್ ಕುಮಾರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಉಪಸ್ಥಿತರಿದ್ದರು.

ಮೈಸೂರಿನ ಮೇಟಗಳ್ಳಿ ಜಿಲ್ಲಾ ಆಸ್ಪತ್ರೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಿಮೋಥೆರಪಿ ಆರೈಕೆ ಕೇಂದ್ರಗಳ ಉದ್ಘಾಟನೆ ನೆರವೇರಿಸಿದರು. ಸಚಿವರಾದ ದಿನೇಶ್ ಗುಂಡೂರಾವ್, ಎಚ್.ಸಿಮಹದೇವಪ್ಪ ಇದ್ದರು.

> ಎಲ್ಲರಿಗೂ ಶಿಕ್ಷಣ ಸಿಗಬೇಕು. ಎಲ್ಲರಿಗೂ ಸಮಾನವಾಗಿ ವೈದ್ಯಕೀಯ ಶಿಕ್ಷಣ ಹಾಗೂ ವೈದ್ಯಕೀಯ ಸೇವೆ ದೊರೆಯಬೇಕು. ಎಲ್ಲರೂ ಆರ್ಥಿಕವಾಗಿ ಸಬಲರಾಗಬೇಕು. ಹಿಂದೆ ಮೈಸೂರು ಜಿಲ್ಲೆಯಲ್ಲಿ ಜಿಲ್ಲಾ ಆಸ್ಪತ್ರೆ ಇರಲಿಲ್ಲ, ಜಯದೇವ ಆಸ್ಪತ್ರೆ ಇರಲಿಲ್ಲ. ನಾನು ಅಧಿಕಾರಕ್ಕೆ ಬಂದ ನಂತರ ಇವುಗಳನ್ನು ಮೈಸೂರಿನಲ್ಲಿ ಪ್ರಾರಂಭ ಮಾಡಿದೆನು.
>
> -ಸಿದ್ದರಾಮಯ್ಯ, ಮುಖ್ಯಮಂತ್ರಿ

> ಅನೇಕ ಬಡಜನರು ಕ್ಯಾನ್ಸರ್ ಚಿಕಿತ್ಸೆ ಪಡೆಯಲು ಪರದಾಡುತ್ತಾರೆ. ಅವರಿಗೆ ಚಿಕಿತ್ಸೆ ಕೊಡಿಸಲು ಹಣ ಇರುವುದಿಲ್ಲ. ಆದ್ದರಿಂದ ಕ್ಯಾನ್ಸರ್ ಚಿಕಿತ್ಸೆ ಕಿದ್ವಾಯಿ ಆಸ್ಪತ್ರೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ. ಮುಂದಿನ ದಿನಗಳಲ್ಲಿ ಮೈಸೂರು ನಗರದಲ್ಲಿ ಸ್ಥಾಪಿಸಲಾಗುವುದು. 16 ಜಿಲ್ಲಾ ಆಸ್ಪತ್ರೆಗಳಲ್ಲಿ 10 ಬೆಡ್ ನ ಕಿಮೋಥೆರಪಿ ಆರೈಕೆ ಕೇಂದ್ರಗಳನ್ನು ತೆರೆಯಲಾಗಿದೆ.
>
> ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಪರಂ, ಡಿಕೆಶಿ ಹೇಳಿಕೆಗಳು ಅನುಮಾನಾಸ್ಪದವಾಗಿವೆ: ಈಶ್ವರಪ್ಪ

ಇಡಿ ದಾಳಿ ಬಗ್ಗೆ ಪರಂ ಡಿಕೆಶಿ, ಸ್ಪಷ್ಟನೆ ನೀಡಲಿ



ಶಿವಮೊಗ್ಗ: ಚಿನ್ನ ಸ್ಮಗ್ಲಿಂಗ್ ಪ್ರಕರಣದಲ್ಲಿ ಬಂಧಿತಳಾಗಿರುವ ನಟಿ ರನ್ಯಾರಾವ್ ಜತೆಗಿನ ಸಂಪರ್ಕದ ವಿಚಾರದಲ್ಲಿ ಗೃಹ ಮಂತ್ರಿ ಡಾ.ಜಿ.ಪರಮೇಶ್ವರ್ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಗಳು ಗೊಂದಲದ ಸಾಕಷ್ಟು ಅನುಮಾನಕ್ಕೆ ಕಾರಣವಾಗಿದ್ದು, ಈ ಇಬ್ಬರು ನಾಯಕರು ರಾಜ್ಯದ ಜನತೆಗೆ ಸ್ಪಷ್ಟ ಪಡಿಸಲಿ ಎಂದು ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಚಿನ್ನ ಸ್ಮಗ್ಲಿಂಗ್ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕರ ನಡೆಗಳು ಒಂದು ರೀತಿ ಗೃಹ ಇಲಾಖೆಯನ್ನೇ ತಪ್ಪಿತಸ್ಥ ಸ್ಥಾನದಲ್ಲಿಡುವಂತೆ ಮಾಡಿದೆ. ಡಾ.ಜಿ. ಪರಮೇಶ್ವರ್ ಅವರು ಸಜ್ಜನರು. ಅವರ ಮೇಲೆ ಅಪಾದನೆ ಮಾಡುವುದಿಲ್ಲ, ಆದರೆ ಚಿನ್ನ ಸ್ಮಗ್ಲಿಂಗ್ ಪ್ರಕರಣದಲ್ಲಿ ಬಂಧಿತಳಾಗಿರುವ ಆ ನಟಿಗೆ ಪರಮೇಶ್ವರ್ ಅವರು ಸುಮಾರು 40 ಲಕ್ಷ ಉಡುಗೊರೆ ಕೊಟ್ಟಿರಬಹುದು ಎಂದಿದ್ದಾರೆ. ಇದಕ್ಕೆ ಪರಮೇಶ್ವರ್ ಅವರು ಪ್ರತಿಕ್ರಿಯಿಸಿ, ಅವರನ್ನೇ ಕೇಳಿ ಎಂದಿದ್ದಾರೆ. ಈ ಇಬ್ಬರು ನಾಯಕರ ಹೇಳಿಕೆಗಳು ಗೊಂದಲ ಜತೆಗೆ ಅನುಮಾನ ಹುಟ್ಟಿಸುತ್ತವೆ ಎಂದರು.

ಪಮೇಶ್ವರ್ ಅವರು ನಟಿ ರನ್ಯಾ ರಾವ್ ಅವರಿಗೆ ಉಡುಗೊರೆ ಕೊಟ್ಟರೋ, ಇನ್ನೇನೋ ಕೊಟ್ಟರೋ ಗೊತ್ತಿಲ್ಲ, ಆದರೆ ಇದು ಆ ಇಬ್ಬರು ಕಾಂಗ್ರೆಸ್ ನಾಯಕರ ವೈಯಕ್ತಿಕ ವಿಚಾರ ಅಲ್ಲ, ಕೋಟ್ಯಾಂತರ ರು. ಮೌಲ್ಯದ ಚಿನ್ನ ಕಳ್ಳ ಸಾಗಣೆಯಲ್ಲಿ ಆ ನಟಿ ಬಂಧಿತಳಾಗಿದ್ದಾಳೆ. ಆ ನಟಿಯ ಜತೆಗಿನ ಸ್ಮಗ್ಲಿಂಗ್ ಪ್ರಕರಣದಲ್ಲಿ ಏನೆಲ್ಲ ಬೆಳವಣಿಗೆ ಆಗುತ್ತಿದೆ ಎಂದು ಇಡೀ ರಾಜ್ಯವೇ ನೋಡುತ್ತಿದೆ. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಈ ಇಬ್ಬರು ನಾಯಕರು ತಮ್ಮ ಸ್ಥಾನದ ಜವಾಬ್ದಾರಿ ಅರಿಯದೆ ಹುಡುಗಾಟಿಕೆ ಹೇಳಿಕೆ ನೀಡುವುದಲ್ಲ ಎಂದು ಹರಿಹಾಯ್ದರು.

ಜನೌಷಧಿ ಮುಚ್ಚಿದರೆ ಜನಾಂದೋಲನ

ಇದೇ ವೇಳೆ, ರಾಜ್ಯದಲ್ಲಿನ ಸುಮಾರು 180 ಜನೌಷಧಿ ಕೇಂದ್ರಗಳನ್ನು ಮುಚ್ಚಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಈಶ್ವರಪ್ಪ, ಬಡವರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ಔಷಧಿಗಳು ಸಿಗಲಿ ಎನ್ನುವ ಉದ್ದೇಶದೊಂದಿಗೆ ಕೇಂದ್ರ ಸರ್ಕಾರ ಈ ಜನೌಷಧಿ ಕೇಂದ್ರ ಗಳನ್ನು ಆರಂಭಿಸಿದೆ. ಇಂತಹ ಸಂದರ್ಭದಲ್ಲಿ ಇವುಗಳನ್ನು ಮುಚ್ಚುವ ಕ್ರಮ ಸರಿಯಾದದ್ದು ಅಲ್ಲ, ಹಾಗೇನಾದರೂ ಮಾಡಿದರೆ ಜನಾಂದೋಲನ ನಡೆಸಲಾಗುವುದು ಎಂದು ಎಚ್ಚರಿಸಿದರು.

ಡಿಕೆಶಿ, ಪರಂಗೆ ಇಡಿ ಸಂಕಷ್ಟ

← ಮೊದಲಪುಟದಿಂದ

ಹೆಚ್ಚುವರಿ ಚಾರ್ಜ್‌ಶೀಟ್‌ನಲ್ಲಿ ಡಿ.ಕೆ.ಸಹೋದರರ ಹೆಸರು ಸೇರ್ಪಡೆಯಾಗಿರುವುದನ್ನು ಡಿ.ಕೆ. ಶಿವಕುಮಾರ್ ಒಪ್ಪಿಕೊಂಡಿದ್ದು, ಡಿಕೆ ಸಹೋದರರು ನ್ಯಾಷನಲ್ ಹೆರಾಲ್ಡ್‌ಗೆ 25 ಲಕ್ಷ ರು. ದೇಣಿಗೆ ನೀಡಿರುವುದನ್ನು ಒಪ್ಪಿಕೊಂಡಿದ್ದಾರೆ. ಆದರೆ ಜಾರ್ಜ್‌ಶೀಟ್‌ನಲ್ಲಿ ಯಂಗ್ ಇಂಡಿಯಾಗೆ ಡಿ.ಕೆ.ಶಿವಕುಮಾರ್ ಹಾಗೂ ಡಿ.ಕೆ.ಸುರೇಶ್ ಕೋಟ್ಯಂತರ ರುಪಾಯಿ ಹಣ ನೀಡಿದ್ದಾರೆ ಎನ್ನುವ ಆರೋಪವನ್ನು ಇಡಿ ಮಾಡಿದೆ. ಈ ಇಬ್ಬರೊಂದಿಗೆ ಹೈಕಮಾಂಡ್ ಸೂಚನೆಯ ಮೇರೆಗೆ ದೇಣಿಗೆಯನ್ನು ತೆಲಂಗಾಣ ಸಿಎಂ ರೇವಂತ್ ರೆಡ್ಡಿ ನೀಡಿದ್ದಾರೆ ಎನ್ನುವ ಗಂಭೀರ ಆರೋಪವನ್ನು ಮಾಡಿದ್ದಾರೆ. ಆರೋಪಪಟ್ಟಿಯಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಮತ್ತು ಅವರ ಸಹೋದರ ಮಾಜಿ ಸಂಸದ ಡಿ.ಕೆ. ಸುರೇಶ್ ಅವರಿಗೆ 2022ರಲ್ಲಿ ತಲಾ 25 ಲಕ್ಷ ರು.ಗಳನ್ನು ದೇಣಿಗೆ ನೀಡುವಂತೆ ಸೂಚಿಸಿದ್ದಾರೆ. ಅದೇ ತಿಂಗಳಲ್ಲಿ, ಶಿವಕುಮಾರ್ ಅವರೊಂದಿಗೆ ಸಂಪರ್ಕ ಹೊಂದಿದ ಟ್ರಸ್ಟ್, ಯಂಗ್ ಇಂಡಿಯಾಗೆ ಎರಡು ಕೋಟಿ ದೇಣಿಗೆ ನೀಡಿದ್ದಾರೆ ಎಂದು ಹೇಳಲಾಗಿದೆ.

ಹಲವು ರಾಜ್ಯಗಳ ನಾಯಕರಿಂದ ದೇಣಿಗೆ: ಆರೋಪಪಟ್ಟಿಯಲ್ಲಿ ಯಂಗ್ ಇಂಡಿಯನ್ ಲಿಮಿಟೆಡ್ ಕಂಪನಿಗೆ ದೊಡ್ಡ ಮೊತ್ತದ ದೇಣಿಗೆ ನೀಡುವಂತೆ ಹಿರಿಯ ಕಾಂಗ್ರೆಸ್ ನಾಯಕರಿಗೆ ನಿರ್ದೇಶನ ನೀಡಲಾಗಿದೆ ಎಂದು ಜಾರಿ ನಿರ್ದೇಶನಾಲಯ ಆರೋಪಿಸಿದೆ. ಕೇವಲ ಕರ್ನಾಟಕ ಮಾತ್ರವಲ್ಲದೇ, ಹಲವು ರಾಜ್ಯಗಳ ಹಿರಿಯ ನಾಯಕರು ಕಂಪನಿಗೆ ಲಕ್ಷಾಂತರ ರು. ದೇಣಿಗೆ ನೀಡಿದ್ದಾರೆ ಎಂದು ಸಂಸ್ಥೆ ಹೇಳಿಕೊಂಡಿದ್ದು, ಅದನ್ನು ಯೋಜಿಸಿ ಮುಚ್ಚಿಟ್ಟಿದ್ದಕ್ಕಾಗಿ ತನಿಖೆ ನಡೆಸಲಾಗುತ್ತಿದೆ. ದೇಣಿಗೆಯ ನೆಪದಲ್ಲಿ ಯಂಗ್ ಇಂಡಿಯಾಗೆ ವರ್ಗಾಯಿಸಲಾದ ನಿಧಿಯ ಫಲಾನುಭವಿಗಳು ರಾಹುಲ್ ಮತ್ತು ಸೋನಿಯಾ ಗಾಂಧಿ ಎಂದು ಆರೋಪಪಟ್ಟಿಯಲ್ಲಿ ಹೇಳಿದೆ.

ಶೈಕ್ಷಣಿಕ ಟ್ರಸ್ಟ್‌ಹಣ ದುರ್ಬಳಕೆ: ಪರಂಗೆ ನೋಟಿಸ್?

← ಮೊದಲಪುಟದಿಂದ

ಗೋಲ್ಡ್ ಸ್ಮಗ್ಲಿಂಗ್ ಆರೋಪಕ್ಕಿಂತ, ತೆರಿಗೆ ವಿನಾಯಿತಿ ಪಡೆದಿರುವ ಟ್ರಸ್ಟ್‌ಗಳಿಂದ ಇತರೆ ಖರ್ಚು ಮಾಡಲು ಅವಕಾಶವಿಲ್ಲ. ಆದರೆ ರನ್ಯಾ ಕ್ರೆಡಿಟ್ ಕಾರ್ಡ್ ಬಿಲ್ ಮತ್ತು ಅವರ ಇತರ ಖರ್ಚುಗಳಿಗೆ 40 ಲಕ್ಷ ರು.ಗಳನ್ನು ಭರಿಸಿರುವುದು ಕಂಡುಬಂದಿದೆ. ಟ್ರಸ್ಟ್ ಹಣವನ್ನು ಟ್ರಸ್ಟಿಗಳು ಅಥವಾ ಅವರ ಸ್ನೇಹಿತರ ವೈಯಕ್ತಿಕ ವೆಚ್ಚಗಳಿಗೆ ಬಳಸದೇ ದತ್ತಿ ಸಂಸ್ಥೆಯ ಚಟುವಟಿಕೆಗಳಿಗೆ ಮಾತ್ರ ಬಳಸಬೇಕು. ಆದ್ದರಿಂದ ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ವಿವರಣೆ ನೀಡಲು ಸಮನ್ಸ್ ಜಾರಿಗೊಳಿಸುವ ಸಾಧ್ಯತೆಯಿದೆ. ಇದಕ್ಕೆ ಪೂರಕವಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ರನ್ಯಾ ರಾವ್ ಅವರಿಗೆ ಪರಮೇಶ್ವರ ಅವರು 15 ರಿಂದ 25 ಲಕ್ಷದ ಗಿಫ್ಟ್ ಕೊಟ್ಟಿರಬಹುದು. ಅದು ಮದುವೆಗೆ ಕೊಟ್ಟ ಉಡುಗೊರೆಯಾಗಿದೆ ಎನ್ನುವ ಹೇಳಿಕೆ ಪರಮೇಶ್ವರ ಅವರಿಗೆ ಇನ್ನಷ್ಟು ಸಂಕಷ್ಟ ತಂದೊಡ್ಡುವ ಸಾಧ್ಯತೆಯಿದೆ ಎನ್ನಲಾಗಿದೆ.

> ಇ.ಡಿ ಹಾಗೂ ಐಟಿಯವರು ತನಿಖೆ ಮಾಡುವುದೇ ಆಗಲಿ, ಕಪ್ಪು ಹಣ ವ್ಯವಹಾರವನ್ನು ಪತ್ತೆ ಹಚ್ಚುವುದಕ್ಕೆ ಅಕ್ಷೇಪವಿಲ್ಲ. ಆದರೆ ಇಡಿ ಮತ್ತು ಐಟಿ ದಾಳಿಗಳು ರಾಜಕೀಯ ದುರುದ್ದೇಶದಿಂದ ನಡೆಯಕೂಡದು. ಪ್ರಸ್ತುತ ಗೃಹ ಸಚಿವ ಜಿ.ಪರಮೇಶ್ವರ ಅವರ ಶಿಕ್ಷಣ ಸಂಸ್ಥೆಯ ಮೇಲೆ ಇಡಿ ದಾಳಿ ರಾಜಕೀಯ ಪ್ರೇರಿತ.
>
> - ಸಿದ್ದರಾಮಯ್ಯ ಮುಖ್ಯಮಂತ್ರಿ

ತಾಳಿ ಕಟ್ಟುವ ವೇಳೆ ಮುರಿದು ಬಿದ್ದ ಮದುವೆ

ಹಾಸನ: ಮಹೂರ್ತದ ವೇಳೆ ಮದುವೆ ಮುರಿದು ಬಿದ್ದ ಘಟನೆ ಹಾಸನದ ಆದಿಚುಂಚನಗಿರಿ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಬೆಳಗ್ಗೆ ನಡೆದಿದೆ.

ಹಾಸನದ ಬೂವನಹಳ್ಳಿಯ ಯುವತಿ ಸ್ನಾತಕೋತ್ತರ ಪದವೀಧರೆ ಪಲ್ಲವಿ ಮತ್ತು ಆಲೂರು ತಾಲೂಕು ಈಶ್ವರಹಳ್ಳಿ ಕೂಡುಗೆ ಗ್ರಾಮದ ಯುವಕ, ಶಿಕ್ಷಕ ವೇಣುಗೋಪಾಲ್ ಮದುವೆ ಶುಕ್ರವಾರ ನಿಗದಿಯಾಗಿತ್ತು. ತಾಳಿ ಕಟ್ಟುವ ಕೆಲ ಕ್ಷಣಗಳ ಮುನ್ನ ವಧುವಿಗೆ ದೂರವಾಣಿ ಕರೆಯೊಂದು ಬಂತು. ತಕ್ಷಣವೇ ನನಗೆ ಈ ಮದುವೆ ಬೇಡ ಎಂದು ಹಸೆಮಣೆ ಮೇಲಿಂದ ಎದ್ದ ಯುವತಿ ಕೊಠಡಿ ಸೇರಿಕೊಂಡರು. ಪೋಷಕರು ಮನವೊಲಿಸಿದರೂ ಯುವತಿ ಮದುವೆಗೆ ಒಪ್ಪಲಿಲ್ಲ. ವರನ ಕಡೆಯವರೂ ನಮಗೂ ಈ ಮದುವೆ ಬೇಡ ಎಂದು ಹೊರಟರು. ಸ್ಥಳಕ್ಕೆ ಪೊಲೀಸರು ಆಗಮಿಸಿದ್ದು, ಅಹಿತಕರ ಬೆಳವಣಿಗೆ ತಡೆದಿದ್ದಾರೆ. ಯುವತಿ ಪಲ್ಲವಿ ಯುವಕನೊಬ್ಬನನ್ನು ಪ್ರೀತಿಸುತ್ತಿದ್ದರು, ಪ್ರಿಯಕರನ ಫೋನ್ ಕರೆ ಬಂದ ತಕ್ಷಣ ವೇಣುಗೋಪಾಲ್ ಜೊತೆ ಮದುವೆ ಬೇಡ ಎಂದು ಪಲ್ಲವಿ ಹಸೆಮಣೆ ಬಿಟ್ಟು ಮೇಲೆದ್ದರು ಎನ್ನಲಾಗಿದೆ.

ಕಣ್ಣೀರಿಟ್ಟ ಪೋಷಕರು

ಸರಕಾರಿ ಶಾಲೆಯೊಂದರಲ್ಲಿ ಶಿಕ್ಷಕರಾಗಿರುವ ವರನ ಕಡೆಯವರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಅದ್ದೂರಿ ಮದುವೆಗೆ ವ್ಯವಸ್ಥೆ ಮಾಡಿದ್ದರು. ಬಂಧು ಬಳಗ, ಆಪ್ತರನ್ನೂ ಆಹ್ವಾನಿಸಿದ್ದರು. ಆದರೆ ಕೊನೆಯ ಕ್ಷಣದಲ್ಲಿ ಈ ಘಟನೆ ನಡೆದಿದ್ದು, ವರ ಸೇರಿದಂತೆ ಅವರ ಕುಟುಂಬಸ್ಥರು ಕಣ್ಣೀರಿಡುತ್ತಿದ್ದರು. ಮದುವೆ ಬೇಡ ಎಂದ ಮಗಳನ್ನು ಅವರ ಪೋಷಕರು ಪರಿಪರಿಯಾಗಿ ಬೇಡಿಕೊಂಡರೂ, ಆದರೆ ಮಗಳು ನಿರ್ಧಾರ ಬದಲಿಸಲಿಲ್ಲ. ಮಗಳ ನಿರ್ಧಾರದಿಂದ ಆಘಾತಗೊಂಡ ಪೋಷಕರು ಕಣ್ಣೀರಿಟ್ಟರು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ತುಮಕೂರು–572105. 0816–2200209/9480813134.

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾಮಗಾರಿ ಹೆಸರು: ಪುರಸಭೆ ಪಾವಗಡ ರವರ ಕೇವಣಿ ಕೊಡುಗೆಯಡಿ ಕಾವಲಗೆರೆಯಲ್ಲಿ 2.50 ಲ.ಲೀ ಓ.ಹೆಚ್.ಟಿ ತೆರವುಗೊಳಿಸುವುದು ಹಾಗೂ 1 ಸಂಖ್ಯೆ 2.50ಲ.ಲೀ ಓ.ಹೆಚ್.ಟಿ ನಿರ್ಮಿಸುವ ಕಾಮಗಾರಿ.
ಟೆಂಡರ್ ಸಂಖ್ಯೆ: KUWSDB/2025-26/WS/WORK_INDENT336/CALL-3.
ಟೆಂಡರ್ ಮೊತ್ತ: ರೂ. 63.70 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ).
ಟೆಂಡರ್ ವಿವರ: ಟೆಂಡರ್ ಸ್ವೀಕರಿಸಲು ಕೊನೆಯ **ದಿನಾಂಕ: 31–05–2025.**
ಹೆಚ್ಚಿನ ವಿವರಗಳನ್ನು https://kppp.karnataka.gov.in website ನಲ್ಲಿ ಪಡೆಯುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕನನೀಸ ಮತ್ತು ಒಚ ಮಂಡಳಿ,
ತುಮಕೂರು.
DIPR/TUM/RO-29/25-26/Oysters

ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯಿತಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು
Ph: 08262–220936 E-Mail: zpedckm@rediffmail.com
ಟೆಂಡರ್ ಪ್ರಕಟಣೆ ಸಂಖ್ಯೆ:09/2024–25/6ನೇ ಕರೆ/380 ದಿ: 21.05.2025

ಟೆಂಡರ್ ಪ್ರಕಟಣೆ – 6ನೇ ಕರೆ

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರುರವರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಬೂದು ನೀರು ನಿರ್ವಹಣೆ (ಎಂ.ಜಿ.ಎನ್.ಆರ್.ಇ.ಜಿ.ಎ.) ಯೋಜನೆಯಡಿ ಸಾಮಾಗ್ರಿ ಸರಬರಾಜು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ. ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಗರಿಷ್ಠ ಅಂದಾಜು ಮೊತ್ತ ರೂ.57,65,369.82 ಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document KG-2 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ. ಮೂಲಕ ಡೌನ್‌ಲೋಡ್ ಮಾಡಿದ ಡಾಕ್ಯೂಮೆಂಟ್‌ಗಳನ್ನು ದಿ:21.05.2025 ರಿಂದ ದಿ:29.05.2025 ರವರೆಗೆ ಸಂಜೆ 5.30 ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ತಾಂತ್ರಿಕಬಿಡ್ಡನ್ನು ಸಾಧ್ಯವಾದಲ್ಲಿ ದಿ:31.05.2025 ರಂದು ಸಂಜೆ 5.05 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿ:02.06.2025 ರಂದು ಸಂಜೆ 5.05 ಗಂಟೆಗೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು kppp.karnataka.gov.in website ನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/25–26/27/311

ಪುರಸಭಾ ಕಾರ್ಯಾಲಯ, ಬೇಲೂರು
E-mail: itstaff_ulb_belur@yahoo.co.in,
townmunicipal.belur@gmail.com ದೂರವಾಣಿ: 08177–222221
ಸಂಖ್ಯೆ: ಪು.ಬೇ/ಜೆ.ಇ/ಟೆಂಡರ್–10/2024–25 ದಿನಾಂಕ: 22.05.2025

ಮರು ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಸಿವಿಲ್ ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ವೇಳಾಪಟ್ಟಿ ವಿವರ ಕೆಳಗಿನಂತಿದೆ 1)ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ ದಿನಾಂಕ: 06.06.2025 ಸಂಜೆ 5.30 ಗಂಟೆಗೆ 2)ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ ದಿನಾಂಕ: 09.06.2025 ಬೆಳಿಗ್ಗೆ 11.30 ಗಂಟೆಗೆ 3)ಆರ್ಥಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ ದಿನಾಂಕ: 11.06.2025 ಬೆಳಿಗ್ಗೆ 11.30 ಗಂಟೆಗೆ 4)ಕೆಲಸ ಮುಗಿಸಲು ಕಾಲಾವಧಿ: 06 ತಿಂಗಳು (ಮಳೆಗಾಲ ಹೊರತುಪಡಿಸಿ) (ಟೆಂಡರ್‌ನ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಪ್ರಚುರ ಪಡಿಸಲಾಗುವುದು) ಕ್ರಸಂ.1)ಕಾಮಗಾರಿ ವಿವರ: DMA/2024-25/WS/WORK_INDENT34642/CALL-2 ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)76,51,257–00 ಇ.ಎಂ.ಡಿ. ಮೊತ್ತ:1,53,025–00 ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕಾಮಗಾರಿ ಶಾಖೆಯಲ್ಲಿ ಕೆಲಸದ ವೇಳೆಯಲ್ಲಿ ಮತ್ತು http://kppp.karnataka. gov.in ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–(ಅಶೋಕ್ ಎ.ಆರ್) ಮುಖ್ಯಾಧಿಕಾರಿ, ಪುರಸಭೆ, ಬೇಲೂರು
ಸಹಿ/–(ಎಸ್.ಎಂ. ಸುಜಯ ಕುಮಾರ್) ಮುಖ್ಯಾಧಿಕಾರಿ, ಪುರಸಭೆ, ಬೇಲೂರು
ವಾಸಾಸಂಇ/ಹಿಸನಿ/ಹಾಸನ/134/ಕೆಎಸ್‌ಎಂಸಿಎ/2025–26

ಕಾರ್ಯಪಾಲಕ ಇಂಜಿನಿಯರ್‌ರವವ ಕಚೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು.
ಸಂಖ್ಯೆ: ಕಾಇಂ/ಪಂರಾಇಂವಿ/ತುಮ/ತಾಂಶಾ/ಟೆಂಡರ್/2025–26 ದಿನಾಂಕ: 20.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–03/2025–26
(ಕೆ.ಪಿ.ಪಿ ಪೋರ್ಟಲ್ ಮುಖಾಂತರ ಏಕ ಮತ್ತು ದ್ವಿ ಲಕೋಟೆ ಪದ್ದತಿ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-1, KW-2 & KW-3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಪೋರ್ಟ್‌ಗಾಗಿ 1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು–560 025, ದೂರವಾಣಿ:080–22485867, 080–22485927 ರಲ್ಲಿ ಹಾಗೂ ಪಂಚಾಯತ್‌ರಾಜ್ ಇಂಜಿನಿಯರಿಂಗ್ / ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ಅರ್ಹ (ಸಿವಿಲ್) ನೊಂದಾಯಿಸಿದ ಗುತ್ತಿಗೆದಾರರುಗಳಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ವಿಭಾಗ ವ್ಯಾಪ್ತಿಯ 2024–25 ನೇ ಸಾಲಿನಲ್ಲಿ ರಾಜ್ಯವಲಯ ಮುಂದುವರೆದ ಯೋಜನೆಯಡಿ ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲೆಗಳಲ್ಲಿ ಹೊಸ ಕೊಠಡಿಗಳ ನಿರ್ಮಾಣ (4202–01–204–1–08–422 ರಡಿ) &(4202–01–204–1–08–42 ರಡಿ), 2023–24ನೇ ಸಾಲಿನಲ್ಲಿ 5054–ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾರ್ಯಕ್ರಮ (5054–03–337–0–75–422/423), 2023–24ನೇ ಸಾಲಿನ ಆಯವ್ಯಯ ಘೋಷಣೆಯಂತೆ ಸಾಮಾನ್ಯ ಯೋಜನೆಯಡಿ ಕರ್ನಾಟಕ ಪಬ್ಲಿಕ್ ಶಾಲೆಯ ಕೊಠಡಿ ನಿರ್ಮಾಣ ಕಾಮಗಾರಿ ಯೋಜನೆಯಡಿ, 2023–24ನೇ ಸಾಲಿನ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಬಿವೃದ್ಧಿ ಯೋಜನೆಯಡಿ ಅನುಮೋದನೆಯಾಗಿರುವ (Indent No: (RDPR/2024-25/RD/WORK_INDENT13701/CALL-2) (RDPR/2024-25/RD/WORK_INDENT13706/CALL-2) (RDPR/2025-26/BD/WORK_INDENT14346) (RDPR/2024-25/RD/WORK_INDENT13738/ CALL-2) (RDPR/2024-25/RD/WORK_INDENT13740/CALL-2) (RDPR/2024-25/RD/WORK_INDENT13742/CALL-2) (RDPR/2025-26/BD/WORK_INDENT14607) (RDPR/2025-26/RD/ WORK_INDENT 14143/CALL-2) (RDPR/2025-26/RD/WORK_INDENT14145/CALL-2)(RDPR/2025-26/RD/WORK_INDENT 14886)(RDPR/2025-26/BD/WORK_INDENT 14608)(RDPR/2025-26/BD/WORK_INDENT 14867)(RDPR/2025-26/BD/WORK_INDENT 14612)

ಕಾಮಗಾರಿಗಳಿಗೆ ಟೆಂಡರ್‌ನ್ನು ಕೆ.ಪಿ.ಪಿ.ಪೋರ್ಟಲ್ ಮುಖಾಂತರ ಏಕ ಮತ್ತು ದ್ವಿ – ಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.
ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ http://www.KPPP.karnataka.gov.in ಮುಖಾಂತರ ದಿನಾಂಕ: 21.05.2025 ರಿಂದ 28.05.2025 ಸಂಜೆ 5.00 ಗಂಟೆವರೆಗೆ ಫಾರಂ ಫೀ ಕೆ.ಪಿ.ಪಿ.ಪೋರ್ಟಲ್ ಮುಖಾಂತರ (ಹಿಂತಿರುಗಿಸಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ. ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: 0816–2272620 ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಕೆ.ಪಿ.ಪಿ.–ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ. ವಿಭಾಗ, ತುಮಕೂರು.
DIPR/TUM/95/KSMCA/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಇಲಾಖೆ
ವಿಭಾಗ ಕೊಪ್ಪಳ. ದೂ:08539–220054.
ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2025–26/1751 ದಿ:21.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯ ಟೆಂಡರ ಕಾಮಗಾರಿಗಾಗಿ 4702–ವಿಶೇಷ ಘಟಕ ಹಾಗೂ ಗಿರಿಜನ ಉಪಯೋಜನೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 10 ಪ್ಯಾಕೇಜ್ ಕಾಮಗಾರಿಗಳ ದ್ವಿ ಲಕೋಟೆ ಪದ್ದತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಗಿಟ್ಟ ಕನಿಷ್ಠ ಮೊತ್ತ **ರೂ. 27.33 ಲಕ್ಷಗಳಿಂದ ಗರಿಷ್ಠ ಮೊತ್ತ ರೂ. 71.91 ಲಕ್ಷಗಳಿರುತ್ತದೆ.** ಟೆಂಡರಗಳನ್ನು **ದಿನಾಂಕ: 26–05–2025 ರಿಂದ ದಿನಾಂಕ: 03–06–2025 ಸಂಜೆ. 5.30** ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ: 31–05–2025 ರಂದು ಬೆಳಿಗ್ಗೆ 11.00 ಗಂಟೆಗೆ ಈ ಕಛೇರಿಯಲ್ಲಿ ಜರುಗುವುದು. ತಾಂತ್ರಿಕ ಬಿಡ್ಡನ್ನು **ದಿನಾಂಕ: 05–06–2025 ರಂದು ಬೆಳಿಗ್ಗೆ 11.00** ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು **ದಿನಾಂಕ:07–06–2025 ರಂದು ಬೆಳಿಗ್ಗೆ 11.00** ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಕೆ.ಪಿ.ಪಿ ಪೋರ್ಟಲ್" ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.
ಡಿಐಪಿಆರ್/ಕೊಪ್ಪಳ/110/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ – ಆಯುಷ್ ಇಲಾಖೆ
ಪ್ರಾಚಾರ್ಯರವರ ಕಛೇರಿ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ & ಬೋಧನಾ ಆಸ್ಪತ್ರೆ, ಸಾಗರ ರಸ್ತೆ, ಪ್ರವಾಸಿ ಮಂದಿರದ ಎದುರು, ಶಿವಮೊಗ್ಗ–577201
G-mail: principalgamcshimoga@gmail.com
Ph: 08182-223230
ಕ್ರ.ಸಂ: ಸಆವೈಮಬೋಆಶಿ/06/ಹೊ.ಗು.(1)/2024–25 ದಿ: 21–05–2025

ಇ–ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರಮೆಂಟ್ ಪೋರ್ಟಲ್) (ದ್ವಿಲಕೋಟೆ ಪದ್ಧತಿ)

ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಬೋಧನಾ ಆಸ್ಪತ್ರೆ, ಶಿವಮೊಗ್ಗ ಇಲ್ಲಿಗೆ 2025–26 ಮತ್ತು 2026–27ನೇ ಸಾಲಿಗೆ ವಿವಿಧ ಗ್ರೂಪ್–ಡಿ ಹುದ್ದೆಗಳ ಸೇವೆಯನ್ನು ಪಡೆಯಲು ಕೆ.ಟಿ.ಪಿ.ಪಿ. ಅಧಿನಿಯಮ 1999 ನಿಯಮ 2000ರನ್ವಯ ಅರ್ಹ ಟೆಂಡರ್‌ದಾರರಿಂದ ಹಾಗೂ ಮಾನ್ಯತೆ ಪಡೆದ ಸಂಘ–ಸಂಸ್ಥೆಗಳಿಂದ ಇ–ಟೆಂಡರ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ.

ಇ–ಟೆಂಡರ್ ವೇಳಾಪಟ್ಟಿ

1. ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ: GAMCTHS/06/OS(1)/2024-25 ದಿನಾಂಕ 21–05–2025 ರ ಸಂಜೆ 5.00 ಗಂಟೆಗೆ **2.** ಟೆಂಡರ್ ಅಂದಾಜು ಮೊತ್ತ: ರೂ.235.00 ಲಕ್ಷ **3.** ಇ.ಎಂ.ಡಿ ಮೊತ್ತ (1.5%): ರೂ.3,53,000/– ಇ–ಪ್ರಕ್ಯೂರ್‌ಮೆಂಟ್ ಮೂಲಕ ಪಾವತಿ ಮಾಡುವುದು **4.** ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:20.06.2025 ರ ಸಂಜೆ 5.30 ಗಂಟೆಯವರೆಗೆ **5.** ಟೆಂಡರ್ ತೆರೆಯುವ ಸ್ಥಳ: ಪ್ರಾಚಾರ್ಯರ ಕಛೇರಿ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಬೋಧನಾ ಆಸ್ಪತ್ರೆ, ಶಿವಮೊಗ್ಗ. **6.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ/ ಸಮಯ: 23–06–2025 ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ನಮೂನೆಗಳಿಗಾಗಿ, ಟೆಂಡರ್ ಷರತ್ತು/ನಿಬಂಧನೆಗಳ ಬಗ್ಗೆ ಮತ್ತು ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ.

ಸಹಿ/– ಪ್ರಾಚಾರ್ಯರು, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಬೋಧನಾ ಆಸ್ಪತ್ರೆ, ಸಾಗರ ರಸ್ತೆ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/25–26/152/05/318

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ,
ಕಾರವಾರ, ಉತ್ತರ ಕನ್ನಡ
ಸಂಖ್ಯೆ: ಸಿಬ್ಬಂದಿ–1/30/2025–26 ದಿನಾಂಕ: 22.05.2025

ಪ್ರಕಟಣೆ

ಉತ್ತರ ಕನ್ನಡ ಜಿಲ್ಲೆಯ ತಾಲೂಕಾ ಆಸ್ಪತ್ರೆ, ಕುಮಟಾ ಇಲ್ಲಿ ಬಿ.ಇ.ಎಲ್., ಬೆಂಗಳೂರು ಸಂಸ್ಥೆಯು CSR ಯೋಜನೆಯಡಿ ನಿರ್ಮಿಸಿದ 07 ಹಾಸಿಗೆಗಳ ತುರ್ತು ಚಿಕಿತ್ಸಾ ಘಟಕಕ್ಕೆ (Trauma Care Centre) ಈ ಕೆಳಕಂಡ ವೈದ್ಯಕೀಯ/ಅರೇವೈದ್ಯಕೀಯ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
1) ಕೀಲು ಮತ್ತು ಮೂಳೆ ತಜ್ಞರು : ವಿದ್ಯಾರ್ಹತೆ: ಸ್ನಾತಕೋತ್ತರ ಪದವಿ
2) ಅರವಳಿಕೆ ತಜ್ಞರು : ವಿದ್ಯಾರ್ಹತೆ: ಸ್ನಾತಕೋತ್ತರ ಪದವಿ
} ರೋಸ್ಟರ್ ಅನ್ವಯಿಸುವುದಿಲ್ಲ
3) ಶುಶ್ರೂಷಕರು : ಹುದ್ದೆ – 01
ವಿದ್ಯಾರ್ಹತೆ: ಮಾನ್ಯತೆ ಪಡೆದ ಸಂಸ್ಥೆಯಿಂದ GNM, ಮೀಸಲಾತಿ: ಪ.ಜಾ. (ಇತರೇ)
4) ಲ್ಯಾಬ್ ಟೆಕ್ನಿಶಿಯನ್ : ಹುದ್ದೆ – 01
ವಿದ್ಯಾರ್ಹತೆ: ಮಾನ್ಯತೆ ಪಡೆದ ಸಂಸ್ಥೆಯಿಂದ DMLT ಕೋರ್ಸ್, ಮೀಸಲಾತಿ : ಪ.ಜಾ.(ಇತರೇ)
ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ಕಚೇರಿಯ ವೇಳೆಯಲ್ಲಿ, ಈ ಕಛೇರಿಯಿಂದ ಅರ್ಜಿಯನ್ನು ಪಡೆದು ಅಗತ್ಯ ಧೃಡೀಕೃತ ದಾಖಲಾತಿಗಳೊಂದಿಗೆ ದಿನಾಂಕ: 06.06.2025 ರ ಸಾಯಂಕಾಲ 5:30 ರೊಳಗೆ ಈ ಕಚೇರಿಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 08382–226339

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ,
ಉ.ಕ. ಕಾರವಾರ.
DIPR/ADK/KSMCA/125/25-26 dt. 23.05.2025

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ – 586201
ತಾ: ಬ.ಬಾಗೇವಾಡಿ, ಜಿ:ವಿಜಯಪುರ.
ಸಂ:ಕೃ.ಭಾ.ಜ.ನಿ.ನಿ/ಎಎಲ್‌ಬಿಸಿ ವಿ/ಉಗ್ರಾಣ ಶಾಖೆ/2025–26/217
ದಿನಾಂಕ:22.05.2025

ಇನ್‌ಫಾರ್ಮೇಶನ್ ಕೊಟೇಶನ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎ.ಎಲ್.ಬಿ.ಸಿ. ವಿಭಾಗ ಆಲಮಟ್ಟಿ ತಾ: ಬಸವನ ಬಾಗೇವಾಡಿ ಜಿಲ್ಲೆ: ವಿಜಯಪುರ ಇವರು ನೊಂದಾಯಿತ ಫರ್ಮ / ಅಥರಾಯಿಸ್ಡ್ ಏಜೆನ್ಸಿರವರಿಂದ **"quotations** for competitive rates from Reputed Firm/Authorized Agencies for **"Servicing & Overhauling & replacing the damage spare parts of 50/5 tonne capacity of EOT crane at ALBC Head work Almatti Dam Site"**. ಕಾಮಗಾರಿಗಾಗಿ ಸ್ಪರ್ಧಾತ್ಮಕ ದರಗಳಿಗಾಗಿ ಮೊಹರಾದ ಕೊಟೇಶನ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರಗಳಿಗಾಗಿ ಹಾಗೂ ವಿವರವಾದ ಐಟಂಗಳಿಗಾಗಿ ಈ ಕಛೇರಿಯ ಸಮಯದಲ್ಲಿ ಭೇಟಿ ನೀಡಿ ಅಥವಾ ಈ ಕಛೇರಿಯ ಇ–ಮೇಲ್‌ಗೆ ee09albc@gmail.com ಮತ್ತು ದೂರವಾಣಿ ಸಂಖ್ಯೆ: 9035782142 ರ ಮೂಲಕ ತಮ್ಮ ಬೇಡಿಕೆಯನ್ನು **ದಿನಾಂಕ: 29.05.2025** ರೊಳಗಾಗಿ ಸಲ್ಲಿಸಿ ವಿವರಗಳನ್ನು ಪಡೆದುಕೊಳ್ಳಬಹುದು ಹಾಗೂ ಭರ್ತಿಗೊಳಿಸಿದ ಕೊಟೇಶನ್‌ಗಳನ್ನು **ದಿನಾಂಕ: 30.05.2025 ರಂದು ಸಾಯಂಕಾಲ 5.00 ಘಂಟೆಯೊಳಗಾಗಿ** ಈ ಕಛೇರಿಗೆ ಸಲ್ಲಿಸುವದು ಹಾಗೂ **ದಿನಾಂಕ: 31.05.2025 ರಂದು ಬೆಳಿಗ್ಗೆ 11.00 ಘಂಟೆಗೆ** ಭರ್ತಿಗೊಳಿಸಿದ ಕೊಟೇಶನ್‌ಗಳನ್ನು ವಿಭಾಗ ಕಛೇರಿಯಲ್ಲಿ ತೆರೆಯಲಾಗುವದು. ಸದರಿ ವಿಷಯಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಅವಧಿಯಲ್ಲಿ ಸಂಪರ್ಕಿಸಿ ಪಡೆದುಕೊಳ್ಳಬಹುದು.

ವಾಸಾಸಂಇ/ವಿಜಯಪುರ/93/ಕೆಎಸ್‌ಎಂಸಿಎ/2025–26
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ

ಸಮಾಚಾರ ಸಣ್ಣದಲ್ಲ

ಕಾಡಾನೆ ದಾಳಿಗೆ ಮಹಿಳೆ ಬಲಿ

ಹಾಸನ: ಜಿಲ್ಲೆಯಲ್ಲಿ ಕಾಡಾನೆಗಳ ದಾಳಿಗೆ ಮತ್ತೊಂದು ಬಲಿಯಾಗಿದೆ. ಬೇಲೂರು ತಾಲೂಕಿನ ಅಂಕಿಹಳ್ಳಿ ಗ್ರಾಮದಲ್ಲಿ ಕಾಡಾನೆಗಳ ಗುಂಪೊಂದು ಮಹಿಳೆ ಮೇಲೆ ದಾಳಿ ಮಾಡಿದ್ದು, ಆನೆ ದಾಳಿಗೆ ಮಹಿಳೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಗಜೇಂದ್ರಪುರ ಗ್ರಾಮದ ಚಂದ್ರಮ್ಮ(45) ಕಾಡಾನೆ ದಾಳಿಗೆ ಮೃತಪಟ್ಟ ಮಹಿಳೆ. ಚಂದ್ರಮ್ಮ ಶುಕ್ರವಾರ ಬೆಳಗ್ಗೆ ಡಾ.ಕರುಣ್ ಎಂಬುವವರ ಕಾಫಿ ತೋಟದ ಕೆಲಸಕ್ಕೆ ಬಂದಿದ್ದರು. ಒಟ್ಟು ಹನ್ನೆರಡು ಮಂದಿ ಮಹಿಳೆಯರು ತೋಟಕ್ಕೆ ತೆರಳುತ್ತಿದ್ದ ವೇಳೆ ಏಕಾಏಕಿ ಐದು ಕಾಡಾನೆಗಳು ದಾಳಿ ಮಾಡಿವೆ. ಈ ವೇಳೆ ಎಲ್ಲರೂ ದಿಕ್ಕಾಪಾಲಾಗಿ ಓಡಿದ್ದು ಚಂದ್ರಮ್ಮ ಕಾಡಾನೆ ಬಳಿ ಸಿಲುಕಿಕೊಂಡಿದ್ದರು. ಚಂದ್ರಮ್ಮನನ್ನು ಸೊಂಡಿಲಿನಿಂದ ಎತ್ತಿ ಬಿಸಾಡಿದ ಆನೆ ಕಾಲಿನಿಂದ ತುಳಿದು ಭೀಕರವಾಗಿ ಸಾಯಿಸಿದೆ. ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಟ್ವೀಟೂ-ಖಾರಾ

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಹಾವೇರಿಯ ಹಾನಗಲ್ ನಲ್ಲಿ ಸಾಮೂಹಿಕ ಅತ್ಯಾಚಾರದ ಆರೋಪ ಹೊತ್ತ ಕ್ರಿಮಿನಲ್ ಹಿನ್ನೆಲೆಯ ದುರುಳರು ನ್ಯಾಯಾಲಯದಿಂದ ಜಾಮೀನಿನ ಮೇಲೆ ಬಿಡುಗಡೆಯಾದ ಸಂದರ್ಭವನ್ನು ರೋಡ್ ಶೋ ಮೂಲಕ ಸಂಭ್ರಮಿಸಿರುವುದು ಹಾಗೂ ಇದಕ್ಕೆ ಅವಕಾಶ ಮಾಡಿಕೊಟ್ಟಿರುವ ಕಾನೂನು ಸುವ್ಯವಸ್ಥೆಯ ಸ್ಥಿತಿಯನ್ನು ಗಮನಿಸಿದರೆ ಈ ರಾಜ್ಯದಲ್ಲಿ ಸಭ್ಯ ನಾಗರಿಕ ಸಮಾಜ ಮರೆಯಾಗುತ್ತಿರುವ ಆತಂಕ ಉಂಟಾಗುತ್ತಿದೆ. ಅಪರಾಧ ಎಸಗುವುದು ವಿಜಯದ ಸಂಕೇತ' ಎಂಬಂತೆ ವರ್ತಿಸಿರುವ ರಕ್ಕಸೀ ಮನಸ್ಥಿತಿಯ ಈ ದುಷ್ಟರ ಅತಿರೇಕದ ವರ್ತನೆಯನ್ನು ಹತ್ತಿಕ್ಕುವಲ್ಲಿ ವಿಫಲವಾಗಿರುವ INCKarnataka ಸರಕಾರದ ವ್ಯವಸ್ಥೆಯಲ್ಲಿ ಮಾನವಂತ ಹೆಣ್ಣು ಮಕ್ಕಳಿಗೆ, ಸಭ್ಯ ನಾಗರಿಕರಿಗೆ ರಕ್ಷಣೆ ಎನ್ನುವುದು ಮರೀಚಿಕೆ ಎಂಬುದನ್ನು ಸಂಕೇತಿಸಿದೆ.ಸುಸಂಸ್ಕೃತ ನಾಗರಿಕ ಸಮಾಜ ಭಯದಲ್ಲಿ ಬದುಕುವ ದುಸ್ಥಿತಿಗೆ ರಾಜ್ಯದ ಆಡಳಿತ ವ್ಯವಸ್ಥೆ ಸಾಗಿರುವುದು ಅತ್ಯಂತ ಆತಂಕಕಾರಿ ಬೆಳವಣಿಗೆಯಾಗಿದೆ.

ಗಂಗಾಧರ ಮುನಿರತ್ನಯ್ಯ

ನ್ಯಾಯಾಂಗ ವ್ಯವಸ್ಥೆಯನ್ನು ಹಾಳು ಮಾಡಿಟ್ಟಿರುವ ನೀವು ಇದರ ಬಗ್ಗೆ ಮಾತನಾಡಲು ಅರ್ಹರೇ?

ಮುಂದೆ ಎಲ್ಲವೂ ಬದಲಾಗುತ್ತೆ, ಹೆಸರೂ ಬದಲಾಗುತ್ತದೆ ಎಂದ ಕೇಂದ್ರ ಸಚಿವ

ಕೆಂಗಲ್ ಹೆಸರು ಇಟ್ಟಿದ್ದರೆ ಅಭಿನಂದಿಸುತ್ತಿದ್ದೆ: ಎಚ್‌ಡಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಐತಿಹಾಸಿಕ ಮಹತ್ವ ಹೊಂದಿರುವ ರಾಮನಗರ ಹೆಸರನ್ನು ಕಿತ್ತು ಹಾಕಿ ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡಿರುವ ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ದೆಹಲಿಯ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇವರೇನು ಶಾಶ್ವತವಾಗಿ ಅಧಿಕಾರದಲ್ಲಿ ಇರುತ್ತಾರೆಯೇ ಎಂದು ಆಕ್ರೋಶ ವ್ಯಕ್ತಪಡಿಸಿರುವ ಅವರು, ಮುಂದೆ ಪರಿಸ್ಥಿತಿ ಬದಲಾಗಲಿದೆ. ಆಗ ಇವರು ಇಟ್ಟಿರುವ ಹೆಸರೂ ಬದಲಾಗಲಿದೆ ಎಂದು ಎಚ್ಚರಿಕೆ ನೀಡಿದರು.

2007ರಲ್ಲಿ ನಾನು ತೀರ್ಮಾನ ಮಾಡುವಾಗ ಆಗ ವಿರೋಧ ಮಾಡಬಹುದಾಗಿತ್ತು ಆಗ ಮಾಡಲಿಲ್ಲ. ಈ ರಾಜ್ಯಕ್ಕೆ ಮೂವರು ಮುಖ್ಯಮಂತ್ರಿಗಳನ್ನು ರಾಮನಗರ ಕೊಟ್ಟಿದೆ. ಇಡೀ ಜಗತ್ತೇ ನಿಬ್ಬೆರಗಾಗುವ ವಿಧಾನಸೌಧವನ್ನು ಕೆಂಗಲ್ ಹನುಮಂತಯ್ಯ ಅವರು ಕಟ್ಟಿಸಿದ್ದರು. ನೆಹರು ಅವರಿಗೆ ಸೆಡ್ಡು ಹೊಡೆದು ರಾಜಕೀಯ ಮಾಡಿದ್ದರು. ಅಂತಹ ಮಹನೀಯರ ಹೆಸರನ್ನಾದರೂ ಜಿಲ್ಲೆಗೆ ಇಡಬಹುದಿತ್ತು. ಅವರ ಹೆಸರು ಇಟ್ಟಿದ್ದಿದ್ದರೆ ನಾನು ಅಭಿನಂದಿಸುತ್ತಿದ್ದೆ. ಕೆಂಗಲ್ ಅವರ ಹೆಸರಿಟ್ಟರೆ ಇವರ ಭೂಮಿಗಳಿಗೆ ಬೆಲೆ ಬರುವುದಿಲ್ಲವಲ್ಲ? ಎಂದು ಟೀಕಿಸಿದರು.

- ಹೆಸರು ಬದಲಿಸಿದವರ ಭೂಮಿಗೆ ಬೆಲೆ ಏರಬಹುದು, ಅದಕ್ಕೆ ಹೆಸರು ಬದಲಿಸಿದ್ದಾರೆ.
- ಡಿಸಿಎಂ ಡಿ.ಕೆ. ಶಿವಕುಮಾರ್ ತಮ್ಮ ಭೂಮಿಗಳ ಬೆಲೆಯನ್ನು ಏರಿಸುವ ಷಡ್ಯಂತ್ರದ ಭಾಗ
- ಇಂತಹ ರಾಜಕಾರಣಕ್ಕೆ ನಾನು ಸೊಪ್ಪು ಹಾಕುವುದಿಲ್ಲ.

ಇವರು ನನ್ನ ವಿರುದ್ಧ ಕಿರುಕುಳ, ಕುತಂತ್ರ ಮಾಡುತ್ತಿದ್ದಾರೆ. ಹೀಗೆಯೇ ಅವರು ಮಾಡುತ್ತಿರಲಿ, ಇವರು ಲೂಟಿ ಹೊಡೆದಿರುವ ಶೇ.50ರಷ್ಟು ಸರಕಾರಿ ಭೂಮಿಗಳಿವೆ. ಇವರು ಏನೆಲ್ಲಾ ಅನ್ಯಾಯ, ಅಕ್ರಮ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿದೆ.

– ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ರಾಮನಗರ ಹೆಸರನ್ನು ತೆಗೆದುಹಾಕಿ ಬೆಂಗಳೂರು ದಕ್ಷಿಣ ಎಂದು ಹೆಸರು ಇಟ್ಟುಕೊಂಡಿರುವುದು ಡಿಸಿಎಂ ಡಿ.ಕೆ. ಶಿವಕುಮಾರ್ ತಮ್ಮ ಭೂಮಿಗಳ ಬೆಲೆಯನ್ನು ಏರಿಸುವ ಷಡ್ಯಂತ್ರದ ಭಾಗವಾಗಿದೆ. ಅವರು ಏತಕ್ಕಾಗಿ ಜಿಲ್ಲೆಯ ಹೆಸರು ಬದಲಿಸಿದ್ದಾರೆ? ಅದರ ಹಿಂದಿನ ದುರುದ್ದೇಶ ಏನಿದೆ? ಎಂಬುದು ಗೊತ್ತಿದೆ. ಇದರ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಯಾವಾಗ ಅದಕ್ಕೆ ತಿರುಗಿಸಿ ಉತ್ತರ ಕೊಡಬೇಕೋ ಆಗ ಕೊಡುತ್ತೇನೆ. ಇಂತಹ ರಾಜಕಾರಣಕ್ಕೆ ನಾನು ಸೊಪ್ಪು ಹಾಕುವುದಿಲ್ಲ. ಇವರು ಕೇಂದ್ರ ಗೃಹ ಸಚಿವರಿಗೆ ಹೆಸರು ಬದಲಾವಣೆ ರಾಜ್ಯ ಸರಕಾರ ಪ್ರಸ್ತಾಪ ಕಳಿಸಿದ್ದು, ಅದು ತಿರಸ್ಕೃತವಾಗಿದ್ದು ನನಗೆ ಗೊತ್ತಿಲ್ಲ ಎಂದರು.

ರಿಯಲ್ ಎಸ್ಟೇಟ್ ವ್ಯಾಪಾರಿ

ಇವರೇನು ಶಾಶ್ವತವಾಗಿ ಅಧಿಕಾರದಲ್ಲಿ ಇರುತ್ತಾರೆಯೇ? ಇವರು ಮಾಡಿದ್ದು ಮುಂದೆ ಬದಲಾಗಲಿದೆ. ಅದೂ ನನಗೆ ಗೊತ್ತಿದೆ. ಹೇಳಿ ಕೇಳಿ ಈ ವ್ಯಕ್ತಿ ರಿಯಲ್ ಎಸ್ಟೇಟ್ ವ್ಯಾಪಾರಿ. ಏನೆಲ್ಲಾ ತಂತ್ರಗಾರಿಕೆ ಹೂಡಿದರೆ ತಮ್ಮ ಜಮೀನುಗಳಿಗೆ ಬೆಲೆ ಬರುತ್ತಿದೆ ಎನ್ನುವುದು ಅವರಿಗೆ ಗೊತ್ತಿದೆ. ರಾಮನಗರ ಜಿಲ್ಲೆಯಾದಾಗಲೇ ರೈತರ ಭೂಮಿಗೆ ಬೆಲೆ ಬಂದಿರಲಿಲ್ಲವೇ? ನನ್ನ ಜಮೀನಿಗೆ ಬೆಲೆ ಬರುತ್ತದೆ ಎಂದು ಅವರು ಹೇಳಿದ್ದಾರೆ. ಆ ಜಮೀನನ್ನು ಕೂಡ ಕಿತ್ತುಕೊಳ್ಳಲು ಕುತಂತ್ರ ಮಾಡಿದ್ದಾರೆ. 40 ವರ್ಷಗಳ ಹಿಂದೆ ಖರೀದಿ ಮಾಡಿದ ಜಮೀನಿಗೆ ಎಸ್ಐಟಿ ಅಂತ ರಚನೆ ಮಾಡಿಕೊಂಡು ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ನನಗೆ ಕಿರುಕುಳ ಕೊಡುತ್ತಿದ್ದಾರೆ. ಇದರ ವಿರುದ್ಧ ನಾನೂ ಕಾನೂನು ಹೋರಾಟ ಮಾಡುತ್ತಿದ್ದೇನೆ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಿಡಿ

ಸುಳ್ಳಿಗೆ ಮತ್ತೊಂದು ಹೆಸರು ಎಚ್.ಡಿ.ಕುಮಾರಸ್ವಾಮಿ

ವಿಜಯಪುರ: ಸುಳ್ಳಿಗೆ ಮತ್ತೊಂದು ಹೆಸರು ಕುಮಾರಸ್ವಾಮಿ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಕಿಡಿಕಾರಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಚಿನ್ನ ಕಳ್ಳಸಾಗಣೆಯ ರನ್ಯಾ ರಾವ್ ಪ್ರಕರಣದ ಮಾಹಿತಿಯನ್ನು ನೀವೇ ನೀಡಿದ್ದೀರ ಎನ್ನುವ ಕುಮಾರಸ್ವಾಮಿ ಆರೋಪದ ಬಗ್ಗೆ ಕೇಳಿದಾಗ, ಕುಮಾರಸ್ವಾಮಿ ಒಬ್ಬ ಮೆಂಟಲ್. ಅವರ ಮಾನಸಿಕ ಆರೋಗ್ಯ ಹದಗೆಟ್ಟಿರ ಬೇಕು. ತಲೆ ಕೆಟ್ಟು ಹೋಗಿದೆ ಎಂದು ಜರಿದರು.

ರಾಮನಗರದ ನಾಮಫಲಕಕ್ಕೆ ಚಿನ್ನದ ತಗಡು ಹೊಡೆಯಲಾಗುತ್ತದೆಯೇ ಎನ್ನುವ ಕುಮಾರಸ್ವಾಮಿ ಅವರ ಸರಣಿ ಟೀಕೆಗಳ ಕುರಿತು ಕೇಳಿದಾಗ, ಕುಮಾರಸ್ವಾಮಿ ರಾಜಕೀಯ ಮಾಡಲು ರಾಮನಗರಕ್ಕೆ ಏಕೆ ಬಂದರು? ಹಾಸನದಲ್ಲಿಯೇ ಏಕೆ ರಾಜಕೀಯ ಮಾಡಲಿಲ್ಲ. ಮೊದಲು ಎಚ್.ಡಿ.ಕುಮಾರಸ್ವಾಮಿ ಎನ್ನುವ ಹೆಸರಿನಲ್ಲಿರುವ ಅವರ ಊರಿನ ಹೆಸರು ಹಾಗೂ ತಂದೆಯ ಹೆಸರನ್ನು ಏಕೆ ಇನ್ನು ಇಟ್ಟುಕೊಂಡಿದ್ದಾರೆ. ಮೊದಲು ಅದನ್ನು ಬದಲಾವಣೆ ಮಾಡಿಕೊಳ್ಳಲಿ ಎಂದು ತಿರುಗೇಟು ನೀಡಿದರು.

ನಾವು ಬೆಂಗಳೂರು ಜಿಲ್ಲೆಯವರು. ಒಂದೊಂದು ಊರಿನ ಹೆಸರಿಗೆ ತನ್ನದೇ ಆದ ಇತಿಹಾಸವಿರುತ್ತದೆ. ಮದ್ರಾಸ್ ಅನ್ನು ಮತ್ತೆ ಏಕೆ ಚೆನ್ನೈ ಎಂದು ಕರೆದರು. ಗುಲ್ಬರ್ಗಾವನ್ನು ಕಲಬುರ್ಗಿ ಎಂದು ಮರುನಾಮಕರಣ ಮಾಡಲಾಗಿದೆ. ನಮಗೂ ನಮ್ಮದೇ ಆದಂತಹ ಆಸೆ ಇರುತ್ತದೆ. ಅವರಿಗೆ ಏನು ತೊಂದರೆಯಾಗಿದೆ? ಎಂದು ಪ್ರಶ್ನಿಸಿದರು.

ಸಂಸತ್ ಕ್ಷೇತ್ರವನ್ನು ಮೊದಲು ಕನಕಪುರ ಎಂದು ಕರೆಯಲಾಗುತ್ತಿತ್ತು. ಅದನ್ನು ಬೆಂಗಳೂರು ಗ್ರಾಮಾಂತರ ಎಂದು ಆನಂತರ ಏಕೆ ಮಾಡಿದರು? ರಾಮನಗರದ ಹೆಸರು ಬದಲಾವಣೆ ಮಾಡುತ್ತಿಲ್ಲ. ಜತೆಗೆ ರಾಮನಗರವೇ ಜಿಲ್ಲಾ ಕೇಂದ್ರವಾಗಿರುತ್ತದೆ. ನಾವು ಕೇವಲ ಜಿಲ್ಲೆಯ ಹೆಸರನ್ನು ಬದಲಾವಣೆ ಮಾಡುತ್ತಿದ್ದೇವೆ.

ಡಿ.ಕೆ.ಶಿವಕುಮಾರ್, ಡಿಸಿಎಂ

ಹಳ್ಳಿಯ ಜನ ಉದ್ಧಾರವಾಗಬೇಕು

ರಿಯಲ್ ಎಸ್ಟೇಟ್ ಗಾಗಿ ಹೆಸರು ಬದಲಾವಣೆ ಮಾಡಲಾಗಿದೆ ಎನ್ನುವ ಆರೋಪದ ಬಗ್ಗೆ ಕೇಳಿದಾಗ, ಹೌದು, ನಮ್ಮ ಹಳ್ಳಿಯ ಜನ ಉದ್ಧಾರವಾಗಬೇಕು. ಎಲ್ಲರಿಗೂ ಉದ್ಯೋಗ ಸಿಗಬೇಕು. ನಮ್ಮ ಜನರ ಆಸ್ತಿ ಮೌಲ್ಯ ಜಾಸ್ತಿಯಾಗಬೇಕು. ಪ್ರತಿಯೊಬ್ಬ ರೈತನಿಗೂ ಒಳ್ಳೆಯದಾಗಬೇಕು. ಹೊರಗಡೆ ದೇಶದಿಂದ ಜನರು ಬಂದು ಬಂಡವಾಳ ಹೂಡಿಕೆ ಮಾಡಬೇಕು. ಅಭಿವೃದ್ಧಿ ಆಗಬೇಕು ಎಂಬುದು ನಮ್ಮ ಆಸೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಕಾವೇರಿ ಆರತಿಗೆ ವಿಶೇಷ ಗೀತೆ ರಚಿಸಲು ಮನವಿ

ಬೆಂಗಳೂರು: ಕರ್ನಾಟಕದ ಹೆಮ್ಮೆಯ ಜೀವನದಿ ಕಾವೇರಿಗೆ ಗಂಗಾರತಿ ಮಾದರಿಯಲ್ಲಿ ಕಾವೇರಿ ಆರತಿ ನಡೆಸುವ ರಾಜ್ಯ ಸರಕಾರದ ಮಹತ್ವದ ನಿರ್ಧಾರಕ್ಕೆ ಪೂರಕವಾಗಿ, ವಿಶೇಷ ಗೀತೆಯೊಂದನ್ನು ರಚಿಸಲು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಹಿರಿಯ ಸಂಗೀತ ನಿರ್ದೇಶಕ ಹಂಸಲೇಖ, ಸಾಧು ಕೋಕಿಲ ಹಾಗೂ ಅರ್ಜುನ್ ಜನ್ಯ ಅವರಿಗೆ ಪತ್ರ ಬರೆದಿದ್ದಾರೆ.

ರಾಜ್ಯ ಸರಕಾರವು ಕಾವೇರಿ ಆರತಿಯನ್ನು ಸಾಂಸ್ಕೃತಿಕವಾಗಿ ಮತ್ತು ಸಾಹಿತ್ಯಾತ್ಮಕವಾಗಿ ಶ್ರೀಮಂತಗೊಳಿಸುವ ಉದ್ದೇಶವನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಜಾನಪದ ಸೊಬಗು, ಧಾರ್ಮಿಕತೆಯ ಮೆರಗು ಹಾಗೂ ಭಕ್ತಿ ಭಾವದಿಂದ ಕೂಡಿರುವ ಗೀತೆಯನ್ನು ರಚಿಸುವ ಅಗತ್ಯವಿದೆ. ಬದಲಾದ ಕಾಲಘಟ್ಟಕ್ಕೆ ಹೊಂದಿಕೊಳ್ಳುವಂತೆ, ವರ್ಣರಂಜಿತವಾಗಿ ಮೂಡಿಬರಲಿರುವ ಈ ಗೀತೆಯು ಕಾವೇರಿ ಮಾತೆಯ ಸಂಪೂರ್ಣ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತಿರಬೇಕು. ಕಾವೇರಿ ಮಾತೆಯ ಪರಂಪರೆಯನ್ನು ಉಳಿಸುವುದರ ಜತೆಗೆ, ಜಲ ಶ್ರೀಮಂತಿಕೆ ಸಹಿತ ಕಾವೇರಿ ವೈಭವವನ್ನು ದೇಶ ವಿದೇಶಗಳಿಗೆ ಹಾಡು ಮತ್ತು ಸಂಗೀತದ ಮೂಲಕ ಸಾರುವ ಹಾಗೂ ಆರತಿಯ ಮಹಿಮೆಯನ್ನು ಮೇಳೈಸುವ ಅದ್ಭುತವಾದ ಸಾಹಿತ್ಯ ಮತ್ತು ಗೀತ ಸಂಯೋಜನೆ ಆಗಬೇಕಿದೆ. ರಚನೆಯಾದ ಈ ಗೀತೆಯನ್ನು ಧ್ವನಿ ಸುರಳಿ ರೂಪದಲ್ಲಿ ತಂದು, ಕಾವೇರಿ ಆರತಿ ಸಂದರ್ಭದಲ್ಲಿ ಬರುವ ಭಕ್ತಾದಿಗಳಿಗೆ ಕಣ್ಣು ತುಂಬಿಕೊಳ್ಳುವಂತೆ ಮಾಡುವುದು ಇದರ ಪ್ರಮುಖ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ, ಕಾವೇರಿಯ ಮೆರುಗನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕಾವೇರಿ ಮಾತೆ ಹಾಗೂ ಕಾವೇರಿ ಆರತಿಗೆ ಸಂಬಂಧಿಸಿದಂತೆ ಗೀತ ರಚನೆ ಮಾಡುವಂತೆಯೂ, ಆಯ್ಕೆಯಾದ ಗೀತೆಯನ್ನು ಕಾವೇರಿ ಆರತಿ ಸಂದರ್ಭದಲ್ಲಿ ಪ್ರಸಾರ ಮಾಡಲಾಗುವುದು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಮೂಲಕ ಕಾವೇರಿ ನದಿಯ ಮಹತ್ವವನ್ನು ಸಾಂಸ್ಕೃತಿಕವಾಗಿ ಎತ್ತಿ ಹಿಡಿಯುವ ಮತ್ತು ಭಕ್ತಾದಿಗಳಲ್ಲಿ ಭಕ್ತಿ ಭಾವವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ತಮನ್ನಾ ರಾಯಭಾರಿ: ಯದುವೀರ್ ಬೇಸರ

ಮೈಸೂರು: ಮೈಸೂರು ಸ್ಯಾಂಡಲ್ ಸೋಪಿಗೆ ನಟಿ ತಮನ್ನಾ ಭಾಟಿಯಾ ಅವರನ್ನು ರಾಯಭಾರಿಯನ್ನಾಗಿ ಮಾಡಿದ್ದು ಬೇಜವಾಬ್ದಾರಿಯುತ ನಿರ್ಧಾರ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಿಡಿಕಾರಿದ್ದಾರೆ.

ಸುದಿಗಾರರೊಂದಿಗೆ ಮಾತನಾಡಿ, ಇದು ಕಾಂಗ್ರೆಸ್ ಸರಕಾರದ ಅವಿವೇಕದ ತೀರ್ಮಾನ. 1916ರಲ್ಲಿ ನಮ್ಮ ಮೈಸೂರು ಸಂಸ್ಥಾನದ ಕೃಷ್ಣರಾಜ ಒಡೆಯರ್ ಈ ಸಂಸ್ಥೆ ಕಟ್ಟಲು ಪ್ರಮುಖ ಪಾತ್ರ ವಹಿಸಿದ್ದರು. ಈ ಸಂಸ್ಥೆಯ ಸೋಪ್ ದಶಕಗಳಿಂದಲೂ ಎಲ್ಲರ ಮನೆಯಲ್ಲಿ ಸ್ಥಾನ ಪಡೆದಿತ್ತು.

ಈ ಸಂಸ್ಥೆಯ ಬಹುತೇಕ ವಸ್ತುಗಳನ್ನು ಬಳಸುತ್ತಿದ್ದವರೇ ಕನ್ನಡಿಗರು. ಇಂಥ ಸಂಸ್ಥೆಗೆ ಪರಭಾಷೆ ನಟಿಯನ್ನು ರಾಯಭಾರಿಯನ್ನಾಗಿ ಮಾಡಿದ್ದು ಹುಚ್ಚುತನ. ಅದು ಸಾಲದೆಂಬಂತೆ ಆರು ಕೋಟಿ ರೂಪಾಯಿಗೂ ಹೆಚ್ಚು ಸಂಭಾವನೆ ನೀಡಿ ರಾಯಭಾರಿ ಮಾಡಿರುವುದು ಅಕ್ಷಮ್ಯ ಎಂದು ಕಿಡಿಕಾರಿದ್ದಾರೆ.

ಈ ಸಂಸ್ಥೆಗೆ ರಾಯಭಾರಿಯನ್ನು ಮಾಡಲೇಬೇಕು ಎಂಬುದು ಸರ್ಕಾರದ ನಿರ್ಧಾರವಾಗಿದ್ದರೆ ಕನ್ನಡದ ಜನಪ್ರಿಯ ಹಾಗೂ ಪ್ರತಿಭಾವಂತ ನಟಿಯರನ್ನು ನೇಮಿಸಿಕೊಳ್ಳಬೇಕಾಗಿತ್ತು. ತಮನ್ನಾ ಅವರಿಗೆ ಮಣೆ ಹಾಕುವ ಮೂಲಕ ರಾಜ್ಯ ಸರಕಾರ ಕನ್ನಡಿಗರ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ಆರೋಪಿಸಿದ್ದಾರೆ.

ಗ್ಯಾಂಗ್ ರೇಪ್ ಆರೋಪಿಗಳು ಮತ್ತೆ ಅಂದರ್

ಹಾವೇರಿ: ಜಾಮೀನು ಸಿಕ್ಕ ಬಳಿಕ ಜೈಲಿನಿಂದ ಬಿಡುಗಡೆಯಾಗಿ ಕಾರುಗಳಲ್ಲಿ ರೋಡ್ ಶೋ ಮಾಡಿ ವಿಜಯೋತ್ಸವ ಮಾಡಿದ್ದ ಹಾನಗಲ್ ಗ್ಯಾಂಗ್ ರೇಪ್ ಪ್ರಕರಣದ ಏಳು ಆರೋಪಿಗಳನ್ನು ಪೊಲೀಸರು ಮತ್ತೆ ಜೈಲಿಗೆ ಅಟ್ಟಿದ್ದಾರೆ. ಹಾನಗಲ್ ಗ್ಯಾಂಗ್ ರೇಪ್ ಪ್ರಕರಣದ ಪ್ರಮುಖ ಏಳು ಆರೋಪಿಗಳಿಗೆ ಜಾಮೀನು ದೊರೆತ ಬೆನ್ನಿಗೆ, ಐದು ಕಾರುಗಳಲ್ಲಿ 20ಕ್ಕೂ ಹೆಚ್ಚು ಹಿಂಬಾಲಕರೊಂದಿಗೆ ವಿಜಯೋತ್ಸವ ರೀತಿಯಲ್ಲಿ ಮೆರವಣಿಗೆ ನಡೆಸಿದ್ದರು.

ಮೂರು ದಿನಗಳ ಹಿಂದೆ, ಹಾವೇರಿ ಸಬ್ ಜೈಲಿನಿಂದ ಜಾಮೀನಿನ ಮೇಲೆ ಬಿಡುಗಡೆಯಾದ ಸಾಮೂಹಿಕ ಅತ್ಯಾಚಾರ ಪ್ರಕರಣದ ಆರೋಪಿಗಳಾದ ಅಫ್ತಾದ್ಚಂದನ ಕಟ್ಟಿ, ಮದರ್ಸಾಬ್ ಮಂಡಕ್ಕಿ, ಸಮಿವುಲ್ಲ ಲಾಲನವರ್, ಮೊಹ್ಮದ್ ಸಾದಿಕ್ ಅಗಸಿನಿ, ಶೋಯಿಬ್ ಮುಲ್ಲ, ತೌಸಿಫ್ಚೋಟಿ ಮತ್ತು ರಿಯಾಜ್ ಸವಿಕೇರಿ ಇವರುಗಳು ಕಾರುಗಳಲ್ಲಿ, ಬೈಕ್‌ಗಳಲ್ಲಿ ಕುಳಿತು ವಿಜಯೋತ್ಸವದ ರೀತಿಯಲ್ಲಿ ಮೆರವಣಿಗೆ ನಡೆಸಿರುವ ವಿಡಿಯೊಗಳು ವೈರಲ್ ಆಗಿದ್ದವು. ಆರೋಪಿಗಳ ಈ ನಡೆಗೆ ತೀವ್ರ ಆಕ್ರೋಶ ವ್ಯಕ್ತವಾಗಿತ್ತು.

ವಿಜಯೋತ್ಸವ ಸಂಕಷ್ಟ

ಜಾಮೀನು ಸಿಕ್ಕ ಬೆನ್ನಲ್ಲೇ ಜೈಲಿನಿಂದ ಬಿಡುಗಡೆಯಾಗಿದ್ದ 7 ಆರೋಪಿಗಳು ರೋಡ್ ಶೋ ಮಾಡುವ ಮೂಲಕ ವಿಜಯೋತ್ಸವ ಆಚರಿಸಿದ್ದರು. ಅವರ ಕುಟುಂಬ ಸದಸ್ಯರು ಮತ್ತು ಸ್ನೇಹಿತರು ಸಬ್ ಜೈಲಿನಿಂದ ಸುಮಾರು 30 ಕಿ.ಮೀ ದೂರದಲ್ಲಿರುವ ಅವರ ಊರು ಅಕ್ಕಿಹಾಳೂರಿಗೆ ಮೆರವಣಿಗೆ ಏರ್ಪಡಿಸಿದ್ದರು. 10 ಕಾರುಗಳು, 30 ಬೈಕ್ ಗಳು, ಡಿಜೆ ಸಂಗೀತದೊಂದಿಗೆ ದಾರಿಯುದ್ದಕ್ಕೂ ವಿಕ್ಟರಿ ಚಿನ್ಹೆ ತೋರಿಸುತ್ತಾ ಆರೋಪಿಗಳು ರೋಡ್ ಶೋ ಮಾಡಿದ್ದರು. ಅವರ ವಿಜಯೋತ್ಸವದ ವಿಡಿಯೊವನ್ನು ಸಹ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರ ಮಾಡಲಾಗಿತ್ತು.

51,000 ಅತಿಥಿ ಶಿಕ್ಷಕರ ನೇಮಕಕ್ಕೆ ಆದೇಶ ಪ್ರಕಟ

ಬೆಂಗಳೂರು: ಶಿಕ್ಷಕರ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ 2025–26ನೇ ಶೈಕ್ಷಣಿಕ ಸಾಲಿನಲ್ಲಿ 51 ಸಾವಿರ ಅತಿಥಿ ಶಿಕ್ಷಕರನ್ನು ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ನೇಮಿಸಲು ಆದೇಶ ಹೊರಡಿಸಿದೆ.

ಮೇ 29ರಿಂದ ಶಾಲೆಗಳು ಪುನರಾರಂಭವಾಗಲಿರುವ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳು ನಿರಂತರವಾಗಿ ಹಾಗೂ ಸಮಯಕ್ಕೆ ಸರಿಯಾಗಿ ಆರಂಭವಾಗಲಿ ಎಂಬ ಉದ್ದೇಶ ಈ ತಾತ್ಕಾಲಿಕ ನೇಮಕಕ್ಕೆ ಅನುಮತಿ ನೀಡಲಾಗಿದೆ. 2025–26ನೇ ಶೈಕ್ಷಣಿಕ ಸಾಲಿಗೆ ಖಾಲಿಯಿರುವ ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶಿಕ್ಷಕರುಗಳ ಹುದ್ದೆಗಳಿಗೆದುರಾಗಿ ಶೈಕ್ಷಣಿಕ ಹಿತದೃಷ್ಟಿಯಿಂದ ಅತಿಥಿ ಶಿಕ್ಷಕರುಗಳನ್ನು ತಾತ್ಕಾಲಿಕವಾಗಿ ನೇರ ನೇಮಕ ಮೂಲಕ ಶಿಕ್ಷಕರನ್ನು ಭರ್ತಿ ಮಾಡುವವರೆಗೆ ಅಥವಾ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಎಂಬ ಷರತ್ತಿಗೊಳಪಟ್ಟು ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಸರಕಾರ ಅನುಮತಿ ನೀಡಿ ಆದೇಶ ಹೊರಡಿಸಿದೆ.

51,000 ಅತಿಥಿ ಶಿಕ್ಷಕರ ಪೈಕಿ 40,000ರನ್ನು ಸರಕಾರಿ ಪ್ರಾಥಮಿಕ ಶಾಲೆಗಳಿಗೆ ಹಾಗೂ ಉಳಿದ 11,000ರನ್ನು ಸರಕಾರಿ ಪ್ರೌಢ ಶಾಲೆಗಳಿಗೆ ನೇಮಿಸಿ ಆದೇಶಿಸಿದೆ. ವಿದ್ಯಾರ್ಥಿಗಳು ಶಿಕ್ಷಕರ ಕೊರತೆಯಿಂದ ಶಿಕ್ಷಣದಿಂದ ವಂಚಿತರಾಗಬಾರದು ಎಂಬುದು ನಮ್ಮ ಮುಖ್ಯ ಗುರಿ. ಈ ತ್ವರಿತ ನಿರ್ಧಾರ ಶೈಕ್ಷಣಿಕ ಕೊರತೆಯನ್ನು ಪೂರೈಸಲು ಅಗತ್ಯವಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ. ಹೊಸ ಶೈಕ್ಷಣಿಕ ವರ್ಷ ಆರಂಭದ ದಿನದಿಂದಲೇ ಗುಣಮಟ್ಟದ ಶಿಕ್ಷಣ ಎಲ್ಲರಿಗೂ ಲಭ್ಯವಾಗುವುದು ನಮ್ಮ ಆದ್ಯತೆ, ಎಂದೂ ಅವರು ತಿಳಿಸಿದರು. ಅತಿಥಿ ಶಿಕ್ಷಕರಿಗೆ ನೀಡಲಾಗುವ ಗೌರವಧನದ ಪಾವತಿಗಾಗಿ ಅವಶ್ಯವಿರುವ ಅನುದಾನದ ವಿವರ ಹಾಗೂ ಅಥಿತಿ ಶಿಕ್ಷಕರ ಜಿಲ್ಲಾ, ತಾಲೂಕುವಾರು ವಿವರಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದೆ.

ಲ್ಯಾಂಡ್ ಮಾಫಿಯಾ ಷಡ್ಯಂತ್ರ

ಮಂಗಳೂರು: ಬೆಂಗಳೂರು ಎನ್ನುವ ಪದದಲ್ಲೇ ಲ್ಯಾಂಡ್ ಮಾಫಿಯಾ ಇದೆ. ರಾಮನಗರದ ಹೆಸರು ಬದಲಿಗೆ ಬೆಂಗಳೂರು ಸೇರಿಸಿದ್ದೇ ಲ್ಯಾಂಡ್ ಮಾಫಿಯಾಕ್ಕಾಗಿ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕಿಡಿಕಾರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರು ಸುತ್ತ ಯಾರು ಲ್ಯಾಂಡ್ ಮಾಫಿಯಾ ಮಾಡುತ್ತಿದ್ದಾರೋ ಅವರಿಗೆ ರಾಮನಗರ ಹೆಸರು ಬೇಕಾಗಿಲ್ಲ. ಅವರಿಗೆ ಬೆಂಗಳೂರು ಹೆಸರು ಬೇಕು. ಯಾಕೆಂದರೆ ಅವರ ಜಮೀನಿಗೆ ವ್ಯಾಲ್ಯೂ ಬರಬೇಕು. ಈ ಕಾರಣಕ್ಕಾಗಿ ರಾಮನಗರ ಹೆಸರು ತೆಗೆದು ಲ್ಯಾಂಡ್ ಮಾಫಿಯಾ ಶಕ್ತಿಗಳು, ದೊಡ್ಡ ದೊಡ್ಡ ಕುಳಗಳು ಬೆಂಗಳೂರು ದಕ್ಷಿಣ ಎಂದು ಮಾಡಿದ್ದಾರೆ ಎಂದು ಆಕ್ರೋಶ ಹೊರಹಾಕಿದ್ದಾರೆ.

ರೈತರ ಜಮೀನು ಕಿತ್ಕೊಂಡು, ಬೇರೆಯವರಿಗೆ ಕೊಡುವ ದೊಡ್ಡ ಷಡ್ಯಂತ್ರ ಇದರ ಹಿಂದೆ ಅಡಗಿದೆ ರಾಮನಗರ ಜಿಲ್ಲೆಯ ಹೆಸರು ಉಳಿಸಲು ಅಲ್ಲಿನ ಜನರು ಆಗ್ರಹ ಮಾಡಬೇಕು ಎಂದಿದ್ದಾರೆ.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿರುತ್ತದೆ)
ಕಾರ್ಯಾಲಯ ಕಾರ್ಯಪಾಲಕ ಅಭಿಯಂತರರು
ಕೃಭಾಜನಿನಿ, ಐಬಿಸಿ ವಿಭಾಗ ಸಂ:1 ಕೆಂಭಾವಿ, ತಾ: ಸುರಪುರ, ಜಿ: ಯಾದಗಿರಿ
Phone: 08443–278674 E-Mail: ee_ibcdiv1kembhavi@yahoo.com

ಸಂಖ್ಯೆ:ಕೃಭಾಜನಿನಿ/ಐಬಿಸಿ/ವಿಭಾಗ –1/ಪಿಬಿ/2025–26/81 ದಿನಾಂಕ:–19–05–2025

ತಿದ್ದುಪಡಿ ಸಂ. – 1

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ವಿಷಯ: Head work ಕಾಮಗಾರಿಗಳ ಅಡಿಯಲ್ಲಿ ಅನುಮೋದನೆಗೊಂಡಿರುವ ಒಟ್ಟು 01 ಕಾಮಗಾರಿಗೆ ಮರು ಟೆಂಡರ್ ಪ್ರಕಟಣೆ ನೀಡುವ ಕುರಿತು.

ಉಲ್ಲೇಖ:– 1) ಈ ಕಚೇರಿ ಟೆಂಡರ್ ಪ್ರಕಟಣೆ ಪತ್ರ ಸಂ: 57 ದಿನಾಂಕ: 07.05.2025

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಪಟ್ಟಂತೆ ಈ ಮೂಲಕ ಮೇಲ್ಕಾಣಿಸಿದ ಟೆಂಡರಿನಲ್ಲಿ ಪ್ರಕಟಿಸಲಾದ ದಿನಾಂಕಗಳಲ್ಲಿ ಬದಲಾವಣೆ ಮಾಡಲಾಗಿದೆ. ಕಾಮಗಾರಿಯ ಟೆಂಡರ ಮೊತ್ತ:242.04 ಲಕ್ಷಗಳು

ಬದಲಾವಣೆ ಮಾಡಿದ ಕ್ಯಾಲೆಂಡರ ಇವೆಂಟ್ಸಗಳು:–

ಕ್ರಸಂ	ನೋಟಿಫಿಕೇಶನ ದಿನಾಂಕ:07.05.2025 ರಂತೆ	ಬದಲಾವಣೆ ಮಾಡಿದ ಕ್ಯಾಲೆಂಡರ ಇವೆಂಟ್ಸಗಳು
1	ಗುತ್ತಿಗೆದಾರರು ದಿನಾಂಕ: 13.05.2025 ರಿಂದ 21.05.2025 ರ ಸಾಯಂಕಾಲ 4.30 ಘಂಟೆಯ ವರೆಗೆ ಇ–ಟೆಂಡರ ಪುಸ್ತಕವನ್ನು Access ಮಾಡಬಹುದು.	ಗುತ್ತಿಗೆದಾರರು ದಿನಾಂಕ: 21.05.2025 ರಿಂದ 29.05.2025 ರ ಸಾಯಂಕಾಲ 4.30 ಘಂಟೆಯ ವರೆಗೆ ಇ–ಟೆಂಡರ ಪುಸ್ತಕವನ್ನು Access ಮಾಡಬಹುದು.
2	ಭರ್ತಿಗೊಳಿಸಿದ ಇ–ಟೆಂಡರ ಪುಸ್ತಕವನ್ನು ದಿನಾಂಕ: 13.05.2025 ರಿಂದ 21.05.2025 ರ ಸಾಯಂಕಾಲ 4.30 ಘಂಟೆಯವರೆಗೆ ಸಲ್ಲಿಸುವದು.	ಭರ್ತಿಗೊಳಿಸಿದ ಇ–ಟೆಂಡರ ಪುಸ್ತಕವನ್ನು ದಿನಾಂಕ: 21.05.2025 ರಿಂದ 29.05.2025 ರ ಸಾಯಂಕಾಲ 4.30 ಘಂಟೆಯವರೆಗೆ ಸಲ್ಲಿಸುವದು.
3	Pre-bid ಸಭೆಯನ್ನು ಮಾನ್ಯ ಮುಖ್ಯ ಇಂಜಿನೀಯರ್ ಕಾಲುವೆ ವಲಯ 2 ರಾಂಪುರ (ಪ.ಆ) ಇವರ ಕಛೇರಿಯುಲ್ಲಿ ದಿನಾಂಕ: 17.05.2025 ರಂದು ನಡೆಸಲಾಗುವುದು.	Pre-bid ಸಭೆಯನ್ನು ಮಾನ್ಯ ಮುಖ್ಯ ಇಂಜಿನೀಯರ್ ಕಾಲುವೆ ವಲಯ 2 ರಾಂಪುರ (ಪ.ಆ) ಇವರ ಕಛೇರಿಯುಲ್ಲಿ ದಿನಾಂಕ: 27.05.2025 ರಂದು ನಡೆಸಲಾಗುವುದು.
4	ಕವರ–I(technical bid) ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ. 1 ಕೆಂಭಾವಿ ತಾ: ಸುರಪುರ ಜಿಲ್ಲೆ:ಯಾದಗಿರಿ ಕಛೇರಿಯುಲ್ಲಿ ದಿನಾಂಕ: 23.05.2025 ರ ಬೆಳಿಗ್ಗೆ 11.00 ಘಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು	ಕವರ–I(technical bid) ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ. 1 ಕೆಂಭಾವಿ ತಾ: ಸುರಪುರ ಜಿಲ್ಲೆ:ಯಾದಗಿರಿ ಕಛೇರಿಯುಲ್ಲಿ ದಿನಾಂಕ: 31.05.2025 ರ ಬೆಳಿಗ್ಗೆ 11.00 ಘಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು.
5	ಕವರ–II(Financial bid) ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ. 1 ಕೆಂಭಾವಿ ತಾ: ಸುರಪುರ ಜಿಲ್ಲೆ:ಯಾದಗಿರಿ ಕಛೇರಿಯುಲ್ಲಿ ದಿನಾಂಕ: 27.05.2025 ರ ಬೆಳಿಗ್ಗೆ 11.00 ಘಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು.	ಕವರ–II(Financial bid) ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ಸಂ. 1 ಕೆಂಭಾವಿ ತಾ: ಸುರಪುರ ಜಿಲ್ಲೆ:ಯಾದಗಿರಿ ಕಛೇರಿಯುಲ್ಲಿ ದಿನಾಂಕ: 03.06.2025 ರ ಬೆಳಿಗ್ಗೆ 11.00 ಘಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು.

ಇನ್ನುಳಿದ ನಿಯಮ ಶರತ್ತುಗಳು ಉಲ್ಲೇಖದಲ್ಲಿರುವಂತೆ ಟೆಂಡರ ಪ್ರಕಟಣೆ ಸಂಖ್ಯೆ (1) ರಲ್ಲಿರುವಂತೆ ಯಥಾಸ್ಥಿತಿಯಲ್ಲಿ ಇರುತ್ತವೆ. ಯಾವುದೆ ಬದಲಾವಣೆ ಇರುವುದ್ದಿಲ್ಲ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಲಾದ ಆಧಿಕಾರಿಗಳ ಕಚೇರಿಯಲ್ಲಿ ಸಮಯದಲ್ಲಿ ಅಥವಾ http://kppp.karnataka.gov.in link ರಲ್ಲಿ .ಮಾಹಿತಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ. ಐಬಿಸಿ ವಿಭಾಗ ಸಂ. 1
ಕೆಂಭಾವಿ–585216

ವಾ.ಸಾ.ಸಂ.ಇ/ಯಾದಗಿರಿ/76/ಕೆ.ಎಸ್.ಎಂ.ಸಿ.ಎ/2025–26

ಕರ್ನಾಟಕ ಸರಕಾರ
(ಲೋಕೋಪಯೋಗಿ, ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆಃ ಕಲಬುರಗಿ.

ಸಂ:ಕಾನಿಇಂ/ಲೋಇ./ಸೇವಿ/ತಾಶಾ–2/2025–26/515 ದಿನಾಂಕ : 22–05–2025

–:: ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::–

1) ಕಾಮಗಾರಿಯ ವಿವರ : 1. ಚಿತ್ತಾಪೂರ ತಾಲೂಕಿನ 02 ರಸ್ತೆ ಕಾಮಗಾರಿ ಇಂಡೆಂಟ್ ಸಂ : **21948, 21947,** 2. ಸೇಡಂ ತಾಲೂಕಿನ 01 ಕಾಮಗಾರಿ ಇಂಡೆಂಟ್ ಸಂ: **21953,** 2) ಲೆಕ್ಕ ಶೀರ್ಷಿಕೆ: SDMF ಯೋಜನೆಯಡಿಯಲ್ಲಿನ ಕಾಮಗಾರಿ, 3) ಟೆಂಡರಿಗಿಟ್ಟ ಮೊತ್ತ: ಕನಿಷ್ಠ **ರೂ. 125.00 ಲಕ್ಷಗಳು,** ಗರಿಷ್ಠ **ರೂ. 211.00 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ: 4ನೇ ದರ್ಜೆ & ಮೇಲ್ಪಟ್ಟು, 5) ಟೆಂಡರ್ ಸ್ಪಷ್ಟೀಕರಣ ಪಡೆಯುವ ದಿನಾಂಕ: **31–05–2025 ಸಾಯಂಕಾಲ 17:30 ಗಂಟೆಯವರೆಗೆ,** 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 7) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : **02–06–2025 ರ ಸಾಯಂಕಾಲ 16:00 ಗಂಟೆಯವರೆಗೆ.** 8) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **03–06–2025 ರ ಸಾಯಂಕಾಲ 16:30 ಗಂಟೆಯವರೆಗೆ.** 9) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **04–06–2025 ರ ಸಾಯಂಕಾಲ 16:30 ಗಂಟೆಯವರೆಗೆ.** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನೀಯರ್ ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in, 12) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ : ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.kppp.karnataka.gov.in ಮಾಡಲಾಗುವುದು.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಪ್ರಕ್ರಿಯೆಯ ಮುಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ

ವಾ.ಸಾ.ಸಂ.ಇ/ಕಲಬುರಗಿ/140/ಕೆ.ಎಸ್.ಎಂ.ಸಿ.&ಎ/2025–26

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur
(ಸರ್ಕಾರದ ಸ್ವಾಯತ್ತ ಸಂಸ್ಥೆ) ಹೈದ್ರಾಬಾದ್ ರೋಡ್, ರಾಯಚೂರು –584102
Phone /Fax-08532-238488/89
Web.www.rims-raichur.gov.in Email info@rims-raichur.com

ಸಂ. ರಿಮ್ಸ್/ಸರಬರಾಜು/ಟೆಂಡರ್/2025–26 ದಿನಾಂಕ : 22.05.2025

ಟೆಂಡರ್ ಪ್ರಕಟಣೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗಗಳಿಗೆ ಅವಶ್ಯವಿರುವ ವಿವಿಧ ಉಪಕರಣಗಳನ್ನು ಪೂರೈಸಲು ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್ ವಿವರ	ಟೆಂಡರ್ ಸಂಖ್ಯೆ	ಅಂದಾಜು ವೆಚ್ಚ (ಲಕ್ಷಗಳಲ್ಲಿ)
1	ರಿಮ್ಸ್ ಬೋಧಕ ಆಸ್ಪತ್ರೆಯ ನೇತ್ರ ಚಿಕಿತ್ಸಾ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ಉಪಕರಣ/02/2025–26 DME/2025-26/IND1445.	70.00
2	ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸ್ತ್ರೀ ಮತ್ತು ಪ್ರಸೂತಿ ರೋಗ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ಉಪಕರಣ/03/2025–26 DME/2025-26/IND1446	18.00
3	ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮಕ್ಕಳ ಶಾಸ್ತ್ರ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ಉಪಕರಣ/04/2025–26 DME/2025-26/IND1448.	35.00
4	ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಿವಿ, ಮೂಗು ಮತ್ತು ಗಂಟಲು ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಪೂರೈಸುವ ಕುರಿತು.	ರಿಮ್ಸ್/ಸರಬರಾಜು/ಟೆಂಡರ್/ಉಪಕರಣ/18/2024–25/ಕಾಲ್–3 DME/2025-26/IND1449.	40.00

1) **ಟೆಂಡರ್‌ಗಳನ್ನು ದಿನಾಂಕ :** 23.05.2025 ರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದು. 2) **ಟೆಂಡರ್ ಫಾರ್ಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ :** 06.06.2025 ರ ಸಾಯಂಕಾಲ 5.30 ಗಂಟೆಯ ವರೆಗೆ 3) **ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 09.06.2025 ರ ಬೆಳಿಗ್ಗೆ 11.30 ಗಂಟೆಗೆ

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ರಾಯಚೂರು

DIP/RCR/133/KSMC&A/133/2025-26

ಸಮಾಚಾರ ಸಣ್ಣದಲ್ಲ

ಪಾಕ್‌ನಲ್ಲಿ ಉಗ್ರರ ಮುಕ್ತ ಸಂಚಾರ

ಆಮಸ್ಟರ್‌ಡಾಮ್: ಪಾಕಿಸ್ತಾನದಲ್ಲಿ ಸೈನ್ಯದ ಬೆಂಬಲ ಇರುವುದರಿಂದಲೇ ಉಗ್ರರು ದೇಶದ ಪ್ರಮುಖ ನಗರಗಳಲ್ಲಿ ಬಹಳ ಮುಕ್ತವಾಗಿ ಸುತ್ತಾಡಿಕೊಂಡಿದ್ದಾರೆ



ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಕಿಡಿಕಾರಿದ್ದಾರೆ. ಪಾಕ್ ಆಡಳಿತಕ್ಕೆ ದೇಶದೊಳಗಿರುವ ಭಯೋತ್ಪಾದಕರು ಮತ್ತು ಅವರ ಜಾಲದ ಬಗ್ಗೆ ತಿಳಿದೇ ಇಲ್ಲ ಎಂದು ಭಾವಿಸುವುದೇ ತಪ್ಪು ಎಂದು ಸದ್ಯ ನೆದರ್‌ಲೆಂಡ್ ಪ್ರವಾಸದಲ್ಲಿರುವ ಜೈಶಂಕರ್ ಡಚ್ ಪತ್ರಿಕಾ ಸಂದರ್ಶನದಲ್ಲಿ ಗುರುವಾರ ಹೇಳಿದ್ದಾರೆ. ಯುರೋಪಿಯನ್ ಒಕ್ಕೂಟ ಭಾರತದ 2ನೇ ಅತಿದೊಡ್ಡ ವ್ಯಾಪಾರ ಪಾಲುದಾರನಾಗಿರುವುದರಿಂದ ಯೂರೋಪ್ ಪ್ರವಾಸ ಹಮ್ಮಿಕೊಂಡಿರುವುದಾಗಿ ಹೇಳಿಕೊಂಡಿದ್ದಾರೆ. ಭಾರತ-ಡಚ್ ಸಂಬಂಧ ಮತ್ತಷ್ಟು ಬಲಪಡಿಸುವುದೇ ಅವರ ಭೇಟಿಯ ಉದ್ದೇಶವಾಗಿದೆ ಎಂದಿದ್ದಾರೆ. ಭಯೋತ್ಪಾದನೆ ಅಂತಾರಾಷ್ಟ್ರೀಯ ಅಪರಾಧ. ಅದನ್ನು ಯಾವುದೇ ರೀತಿ ಸಮರ್ಥಿಸಲು ಸಾಧ್ಯವಿಲ್ಲ. ಪಾಕಿಸ್ತಾನ ಅಕ್ರಮವಾಗಿ ಆಕ್ರಮಿಸಿಕೊಂಡಿರುವ ಜಮ್ಮು-ಕಾಶ್ಮೀರದ ಭೂಭಾಗವನ್ನು ಭಾರತಕ್ಕೆ ಹಿಂತಿರುಗಿಸಬೇಕು ಎಂದು ಆಗ್ರಹಿಸಿದರು.

ನೀರು ಬಿಡದಿದ್ದರೆ ಉಸಿರಿಗೆ ತಡೆ: ಪಾಕ್

ಇಸ್ಲಾಮಾಬಾದ್: ಆಪರೇಷನ್ ಸಿಂದೂರ ವೇಳೆ ನಡುಗಿ ಹೋಗಿದ್ದ ಪಾಕಿಸ್ತಾನ, ಕದನ ವಿರಾಮ ಘೋಷಣೆಯಾದ ಕೆಲ ದಿನಗಳ ಬಳಿಕ ಮತ್ತೆ ಕೀಟಲೆ

ಶುರು ಮಾಡಿದೆ. ಭಾರತವೇನಾದರೂ ಸಿಂಧೂ ನದಿಯ ನೀರನ್ನು ಪಾಕ್‌ಗೆ ಹರಿಸದೇ ಇದ್ದರೆ ಭಾರತದ ಕೊರಳಿಗೇ ಕೈ ಹಾಕಿ ಅದರ ಉಸಿರನ್ನೇ ನಿಲ್ಲಿಸುತ್ತೇವೆ ಎಂದು ಪಾಕ್ ಸೇನೆ ಬೆದರಿಕೆ ಹಾಕಿದೆ. ಸಿಂಧೂ ಜಲ ಒಪ್ಪಂದ ಭಾರತ ರದ್ದುಗೊಳಿಸಿದ್ದಕ್ಕೆ ಸಂಬಂಧಿಸಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಪಾಕ್ ಸೇನಾಪಡೆ ವಕ್ತಾರ ಲೆಫ್ಟಿನೆಂಟ್ ಜನರಲ್ ಅಹ್ಮದ್ ಷರೀಫ್ ಚೌಧರಿ, ಭಾರತ ವಿರುದ್ಧ ನಾಲಿಗೆ ಹರಿಬಿಟ್ಟಿದ್ದಾನೆ.

ಹಾರ್ವರ್ಡ್ ವಿವಿ ಮೇಲೆ ಟ್ರಂಪ್ ಪ್ರಹಾರ

ನ್ಯೂಯಾರ್ಕ್: ಹಾರ್ವರ್ಡ್ ವಿಶ್ವವಿದ್ಯಾಲಯ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ನಡುವಿನ ಜಟಾಪಟಿ ತೀವ್ರಗೊಂಡಿದ್ದು, ವಿವಿಗೆ ವಿದೇಶಿ ವಿದ್ಯಾರ್ಥಿಗಳ ಸೇರ್ಪಡೆಗೆ ಟ್ರಂಪ್ ಆಡಳಿತ

ತಡೆ ನೀಡಿದೆ. ವಿವಿ ವಿರುದ್ಧ ಸದ್ಯ ತನಿಖೆ ನಡೆಯುತ್ತಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ. ಸದ್ಯ ವಿವಿಯಲ್ಲಿ ವ್ಯಾಸಂಗ ಮಾಡುತ್ತಿರುವವರು ದೇಶದ ಬೇರೆ ಕಾಲೇಜುಗಳಿಗೆ ವರ್ಗಾವಣೆ ಆಗಬಹುದಾಗಿದೆ. ಇಲ್ಲ ವಾದಲ್ಲಿ ವಿದ್ಯಾರ್ಥಿ ವೀಸಾ ಕಳೆದುಕೊಳ್ಳಬೇಕಾಗುತ್ತದೆ ಎಂದು ಹೋಮ್‌ಲ್ಯಾಂಡ್ ಭದ್ರತಾ ಇಲಾಖೆ ಎಚ್ಚರಿಸಿದೆ. ಅಂತಾರಾಷ್ಟ್ರೀಯ ವಿದ್ಯಾರ್ಥಿ ವೀಸಾ ಹೊಂದಿದವರು ಕಾನೂನುಬಾಹಿರ ಮತ್ತು ಹಿಂಸಾತ್ಮಕ ಚಟುವಟಿಕೆ ನಡೆಸುತ್ತಿದ್ದು, ಆ ಬಗ್ಗೆ ಏ.30ರೊಳಗೆ ಮಾಹಿತಿ ನೀಡುವಂತೆ ಗೃಹ ಇಲಾಖೆ ವಿವಿಗೆ ಸೂಚಿಸಿತ್ತು. ಈಗ ಗಡುವು ಮೀರಿದರೂ ಮಾಹಿತಿ ಸಲ್ಲಿಸದ ಕಾರಣ ವಿದೇಶಿ ವಿದ್ಯಾರ್ಥಿ ಪ್ರವೇಶಕ್ಕೆ ವಿ.ವಿಗೆ ನೀಡಲಾಗಿದ್ದ ಅನುಮತಿಯನ್ನು ಹಿಂಪಡೆಯಲಾಗಿದೆ ಎಂದು ಇಲಾಖೆ ತಿಳಿಸಿದೆ. ಇದಕ್ಕೂ ಮುನ್ನ ಟ್ರಂಪ್ ಆಡಳಿತ ವಿಶ್ವವಿದ್ಯಾಲಯಕ್ಕೆ 27 ಲಕ್ಷ ಡಾಲರ್(23 ಕೋಟಿ ರು.) ಅನುದಾನವನ್ನೂ ರದ್ದು ಮಾಡಿತ್ತು.

25%ತೆರಿಗೆ: ಐಫೋನ್‌ಗೆ ಟ್ರಂಪ್ ಬೆದರಿಕೆ

ವಾಷಿಂಗ್ಟನ್: ಅಮೆರಿಕದಲ್ಲಿಯೇ ಐಫೋನ್‌ಗಳನ್ನು ತಯಾರಿಸಬೇಕು. ಇಲ್ಲವಾದರೆ ಬೇರೆ ದೇಶಗಳಲ್ಲಿ ತಯಾರಿಸಲಾದ 'ಆಪಲ್' ಕಂಪನಿಯ ಉತ್ಪನ್ನಗಳ

ಮೇಲೆ ಶೇ.25ರಷ್ಟು ಸುಂಕ ವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 'ತೆರಿಗೆ ಬೆದರಿಕೆ' ಹಾಕಿದ್ದಾರೆ. ಬೇರೆ ದೇಶಗಳಲ್ಲಿ ಜೋಡಿಸಿ ಅಮೆರಿಕದ ಮಾರುಕಟ್ಟೆಗೆ ತರುವ ಐಫೋನ್‌ಗಳ ಬೆಲೆಯಲ್ಲಿ ಭಾರೀ ಏರಿಕೆ ಆಗಬಹುದಾಗಿದೆ. ಇದರಿಂದ ಅಮೆರಿಕದ ಪ್ರಮುಖ ತಂತ್ರಜ್ಞಾನ ಕಂಪನಿ ಆಪಲ್‌ನ ಎಲ್ಲಾ ಉತ್ಪನ್ನಗಳ ಮಾರಾಟ ಮತ್ತು ಲಾಭ ಗಳಿಕೆ ಮೇಲೆ ಭಾರಿ ನಕಾರಾತ್ಮಕ ಪರಿಣಾಮ(ನಷ್ಟ) ಉಂಟು ಮಾಡಬಹುದು ಎಂದು ಟ್ರಂಪ್ ಎಚ್ಚರಿಕೆ ದಾಟಿಯಲ್ಲಿ ಹೇಳಿದ್ದಾರೆ.

{ ನರೇಂದ್ರ ಮೋದಿ } ಪ್ರಧಾನಿ

ಭಯೋತ್ಪಾದನೆಯಾಗಲೀ, ನಕ್ಸಲಿಸಂ ಆಗಿರಲಿ ಎರಡರ ಬಗೆಗೂ ನಮ್ಮದು ಶೂನ್ಯ ಸಹಿಷ್ಣುತೆಯಾಗಿದೆ. ಹಿಂಸೆ, ಉಗ್ರವಾದವನ್ನು ಸಹಿಸಲು ಸಾಧ್ಯವೇ ಇಲ್ಲ. ಈಶಾನ್ಯ ಭಾರತದ ರಾಜ್ಯಗಳ ಪೂರ್ಣ ಸಾಮರ್ಥ್ಯ ತೋರಿಸಲು ಶಾಂತಿ-ಭದ್ರತೆ ಅಗತ್ಯ. ಒಂದೊಮ್ಮೆ ಹಿಂಸೆಯಿಂದ ಬಳಲಿದ ಈಶಾನ್ಯ ಭಾರತ ಈಗ ಪರಿವರ್ತನೆ-ತ್ವರಿತ ಅಭಿವೃದ್ಧಿಯ ಹಾದಿಯಲ್ಲಿದೆ.



180 ಕೋಟಿ ರು. 'ಓಷನ್ ಗೋಯಿಂಗ್ ಟಗ್' ಒಪ್ಪಂದ ರದ್ದು | ಚೀನಾ ತಾಳಕ್ಕೆ ಯೂನುಸ್ ಮಧ್ಯಂತರ ಸರಕಾರದ ನರ್ತನ

ರಕ್ಷಣಾ ಒಪ್ಪಂದ ರದ್ದು: ಕೈಕೊಟ್ಟ ಬಾಂಗ್ಲಾ

ಢಾಕಾ: ಗಡಿಯಾಚೆಗಿನ ಭಯೋತ್ಪಾದನೆ ಮೂಲಕ ಭಾರತಕ್ಕೆ ತಲೆನೋವಾಗಿದ್ದ ಪಾಕಿಸ್ತಾನ, ಆಪರೇಷನ್ ಸಿಂದೂರ ಬಳಿಕ ಮೆತ್ತಗಾಗಿದೆ. ಇದರೊಂದಿಗೆ ಪಶ್ಚಿಮ ದಿಕ್ಕಿನಿಂದ ದೇಶಕ್ಕಿದ್ದ ಆತಂಕ ಸದ್ಯಕ್ಕೆ ನಿವಾರಣೆ ಆಗಿದೆ. ಆದರೆ, ಪೂರ್ವದಿಂದ ಹೊಸ ತಲೆನೋವು ಶುರುವಾಗಿದೆ. ವರ್ಷದ ಹಿಂದಿನವರೆಗೂ ಪರಮಾಪ್ತ ದೇಶವಾಗಿದ್ದ ಬಾಂಗ್ಲಾದೇಶ ಈಗ, ಭಾರತದ ಶತ್ರುಪಾಳಯ ಸೇರಿಕೊಂಡು ಹಿಂದೂಸ್ಥಾನಕ್ಕೆ ಶಿರೋಬಾಧೆ ತರಲಾರಂಭಿಸಿದೆ.

ಭಾರತದೊಂದಿಗೆ 10 ತಿಂಗಳ ಹಿಂದೆಯಷ್ಟೇ ಮಾಡಿಕೊಂಡಿದ್ದ 2.10 ಕೋಟಿ ಅಮೆರಿಕನ್ ಡಾಲರ್(ಭಾರತೀಯ ಕರೆನ್ಸಿಯಲ್ಲಿ 180 ಕೋಟಿ ರು.) ಮೊತ್ತದ ರಕ್ಷಣಾ ನೌಕೆ ನಿರ್ಮಾಣದ ಒಪ್ಪಂದವನ್ನು ಶುಕ್ರವಾರ ದಿಢೀರ್ ಎಂಬಂತೆ ರದ್ದುಗೊಳಿಸಿದೆ. ಆ ಮೂಲಕ ಬಾಂಗ್ಲಾದೇಶದಲ್ಲಿನ ಮಧ್ಯಂತರ ಸರಕಾರ ಕಮ್ಯುನಿಸ್ಟ್ ದೇಶ ಚೀನಾದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ.

ಕೋಲ್ಕತ್ತ ಮೂಲದ ಡಿಫೆನ್ಸ್ ಶಿಪ್‌ಯಾರ್ಡ್ (ರಕ್ಷಣಾ ಹಡಗುಕಟ್ಟೆ ನಿರ್ಮಾಣ) ಕಂಪನಿಯಾದ 'ಗಾರ್ಡನ್ ರೀಚ್ ಷಿಪ್‌ಬಿಲ್ಡಿಂಗ್ ಅಂಡ್ ಇಂಜಿನೀರ್ಸ್' (ಜಿಆರ್‌ಎಸ್‌ಇ) ಜತೆಗೆ ಮಾಡಿಕೊಳ್ಳಲಾಗಿದ್ದ 800 ಟನ್ ಸಾಮರ್ಥ್ಯದ ಅತ್ಯಾಧುನಿಕವಾದ 'ಓಷನ್ ಗೋಯಿಂಗ್ ಟಗ್'(ಹಡಗುಗಳನ್ನು ದಂಡೆಯಿಂದ ಆಳ ಸಮುದ್ರಕ್ಕೆ, ಆಳ ಸಮುದ್ರದಿಂದ ಕಡಲತಡಿಗೆ ಎಳೆದು ಬರಬಲ್ಲ ಸಾಮರ್ಥ್ಯದ ಪುಟ್ಟ ರಕ್ಷಣಾ ಕಾರ್ಯಾಚರಣೆ ನೌಕೆ) ನಿರ್ಮಾಣ ಸಂಬಂದ ಬಾಂಗ್ಲಾದೇಶದ ಸರಕಾರ 2024ರ ಜುಲೈನಲ್ಲಿ ಒಪ್ಪಂದ ಮಾಡಿಕೊಂಡಿತ್ತು.

61 ಮೀಟರ್‌ಗಳಷ್ಟು ಉದ್ದವಾದ, ಗಂಟೆಗೆ 13 ನಾಟಿಕಲ್ ಮೈಲು ವೇಗದಲ್ಲಿ ಸಂಚರಿಸಬಲ್ಲ ಸಾಮರ್ಥ್ಯದ ' ಓಷನ್ ಗೋಯಿಂಗ್ ಟಗ್' ನೌಕೆಯನ್ನು ಬಾಂಗ್ಲಾದೇಶದ ಬೇಡಿಕೆಗೆ ತಕ್ಕಂತೆ ವಿನ್ಯಾಸಗೊಳಿಸಿ, ನಿರ್ಮಿಸಿ, 24 ತಿಂಗಳಲ್ಲಿ ಹಸ್ತಾಂತರ ಮಾಡಬೇಕು ಎಂಬುದು ಒಪ್ಪಂದದ ಭಾಗವಾಗಿದೆ.

ವಾಸ್ತವವಾಗಿ ಭಾರತ-ಬಾಂಗ್ಲಾದೇಶದ ನಡುವೆ ರಕ್ಷಣಾ ಇಲಾಖೆಗೆ ಬೇಕಾದ ಸಲಕರಣೆಗಳನ್ನು ಖರೀದಿಸಲು 4268 ಕೋಟಿ ರು.ಗಳಷ್ಟು ದೊಡ್ಡ ಮೊತ್ತದ ಸಾಲ ಸೌಲಭ್ಯ ಒದಗಿಸುವ ಒಪ್ಪಂದವನ್ನು ಭಾರತ, ಬಾಂಗ್ಲಾದೇಶದೊಂದಿಗೆ 2023ರಲ್ಲಿ ಮಾಡಿಕೊಂಡಿದೆ. ಅದರ ಮೊದಲ ಭಾಗವೇ 180 ಕೋಟಿ ರು. ಮೊತ್ತದ 'ಓಷನ್ ಗೋಯಿಂಗ್ ಟಗ್' ನಿರ್ಮಿಸಿ ಕೊಡುವ ಕರಾರಾಗಿದೆ.

ಷೇಕ್ ಹಸೀನಾ ಸರಕಾರದ ಅವಧಿಯ ಒಪ್ಪಂದ

ಓಷನ್ ಗೋಯಿಂಗ್ ಟಗ್ ನಿರ್ಮಾಣದ ಈ ಒಪ್ಪಂದಕ್ಕೆ ಬಾಂಗ್ಲಾದೇಶದ ನೌಕಾಪಡೆಗೆ ರಕ್ಷಣಾ ಸಾಮಗ್ರಿಗಳನ್ನು ಖರೀದಿಸುವ ವಿಭಾಗದ ಮಹಾನಿರ್ದೇಶಕ ಮತ್ತು ಕೋಲ್ಕತ್ತದ ಕಂಪನಿ 'ಜಿಆರ್‌ಎಸ್‌ಇ' 2023ರ ಜುಲೈನಲ್ಲಿ ಒಪ್ಪಂದಕ್ಕೆ ಸಹಿ ಹಾಕಿದ್ದರು. ಅದಕ್ಕೂ ಮುನ್ನ ಬಾಂಗ್ಲಾದೇಶ ಚೀನಾದಿಂದ 'ಡೀಸೆಲ್-ಎಲೆಕ್ಟ್ರಿಕ್ ಸಬ್‌ಮರೀನ್' ಖರೀದಿಸಿತ್ತು. ಚೀನಾದಿಂದ ಬಾಂಗ್ಲಾ ರಕ್ಷಣಾ ಸಾಮಗ್ರಿಗಳನ್ನು ಖರೀದಿಸುವುದನ್ನು ತಪ್ಪಿಸುವ ಸಲುವಾಗಿಯೇ ಭಾರತ, ಹಿಂದಿನ ಬಾಂಗ್ಲಾ ಸರಕಾರದ ಜತೆಗೆ 50 ಕೋಟಿ ಡಾಲರ್(4268 ಕೋಟಿ ರು.) ಮೊತ್ತದ ರಕ್ಷಣಾ ಸಾಮಗ್ರಿಗಳ ಮಾರಾಟ ಒಪ್ಪಂದ ಮಾಡಿಕೊಂಡಿದೆ. ಅದರ ಒಂದು ಭಾಗವೇ ಈ ಜಿಆರ್‌ಎಸ್ ಜತೆಗಿನ 180 ಕೋಟಿ ರು. ಟಗ್ ಖರೀದಿ ಒಪ್ಪಂದವಾಗಿದೆ.

ಈಗ ಬಾಂಗ್ಲಾದೇಶ ಆ ಒಪ್ಪಂದವನ್ನೇ ರದ್ದುಗೊಳಿಸಿದೆ.

2024ರ ಆಗಸ್ಟ್‌ವರೆಗೂ ಭಾರತ-ಬಾಂಗ್ಲಾದೇಶ ನಡುವಿನ ಸಂಬಂಧ ಸರಿಯಾಗಿಯೇ ಇದ್ದಿತು. ಪ್ರಧಾನಿ ಷೇಕ್ ಹಸೀನಾ ಅವರನ್ನು ಜನಾಂದೋಲನ, ಬೆದರಿಕೆ ಮೂಲಕ ಪದಚ್ಯುತಗೊಳಿಸಿ ದೇಶದಿಂದ ಹೊರ ಹೋಗುವಂತೆ ಮಾಡಲಾಯಿತು. ಸಂದಿಗ್ಧ ಪರಿಸ್ಥಿತಿಯಲ್ಲಿ ಭಾರಕ್ಕೆ ಆಗಮಿಸಿದ ಷೇಕ್ ಹಸೀನಾ ಅವರಿಗೆ ರಾಜಕೀಯ ಆಶ್ರಯವನ್ನು ಭಾರತ ಒದಗಿಸಿದೆ. ಇದೇ ಕಾರಣವಾಗಿ ಸದ್ಯ ಬಾಂಗ್ಲಾದೇಶದಲ್ಲಿರುವ ಮಧ್ಯಂತರ ಸರಕಾರದ ಭಾರತದ ವಿರುದ್ಧ ವಿಷ ಕಾರಲಾರಂಭಿಸಿದೆ. ಅಲ್ಲದೇ, ಭಾರತದ ಮತ್ತೊಂದು ಶತ್ರುದೇಶ ಚೀನಾ ಜತೆಗೆ ಹಲವು ವಿಷಯಗಳಲ್ಲಿ ಕೈಜೋಡಿಸಿದೆ.

ಬಾಂಗ್ಲಾ: ಯೂನುಸ್ ರಾಜೀನಾಮೆ ಚಿಂತನೆ!

ಢಾಕಾ: ಮೊಹಮ್ಮದ್ ಯೂನುಸ್ ಮುಖ್ಯ ಸಲಹೆಗಾರರಾಗಿರುವ ಬಾಂಗ್ಲಾದೇಶದ ಮಧ್ಯಂತರ ಸರಕಾರ ಮತ್ತು ಸೇನಾ ಮುಖ್ಯಸ್ಥರ ನಡುವೆ ಸಂಘರ್ಷ ನಡೆಯುತ್ತಿದ್ದು, ಸರಕಾರದ ಮುಖ್ಯಸ್ಥರು ರಾಜೀನಾಮೆ ನೀಡುವ ಹಂತದವರೆಗೂ ವಿಸ್ತರಿಸಿದೆ. ಜತೆಗೆ ರಾಜಕೀಯ ಪಕ್ಷಗಳಲ್ಲಿ ಒಮ್ಮತ ಇಲ್ಲದಿರುವುದೂ ಯೂನುಸ್‌ರನ್ನು ಹತಾಶೆಗೆ ದೂಡಿದ್ದು, ರಾಜೀನಾಮೆಗೆ ಚಿಂತನೆ ನಡೆಸಿದ್ದಾರೆ ಎಂದು ವರದಿಯಾಗಿದೆ.

ಒಂದೆಡೆ ಸೇನೆಯ ಜತೆಗಿನ ಸಂಘರ್ಷ, ಮತ್ತೊಂದೆಡೆ ತಕ್ಷಣ ಚುನಾವಣೆ ನಡೆಸುವಂತೆ ರಾಜಕೀಯ ಪಕ್ಷಗಳ ಒತ್ತಡ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಮಧ್ಯಂತರ ಸರಕಾರದ ಆಡಳಿತಗಾರರು, ರಾಜಕೀಯ ಪಕ್ಷಗಳ ಮುಖಂಡರು ತಮ್ಮ ಪರವಾಗಿ ನಿಲ್ಲದೇ ಇದ್ದರೆ ತಾವು ರಾಜೀನಾಮೆ ನೀಡುವುದು ಅನಿವಾರ್ಯವಾಗಲಿದೆ ಎಂದು ಮೊಹಮ್ಮದ್ ಯೂನುಸ್ ಹೇಳಿದ್ದಾರೆಂದು ಅವರ ಆಪ್ತ ಮೂಲಗಳೇ ಮಾಧ್ಯಮಗಳಿಗೆ ತಿಳಿಸಿವೆ.

ರಾಜಕೀಯ ಪಕ್ಷಗಳಲ್ಲಿನ ಒಮ್ಮತದ ಕೊರತೆ, ಇನ್ನೊಂದೆಡೆ, ಮುಂದಿನ ಡಿಸೆಂಬರ್‌ಗೆ ಚುನಾವಣೆ ನಡೆಸಬೇಕೆಂದು ಸೇನಾ ಮುಖ್ಯಸ್ಥ ಜನರಲ್ ವಕಾರ್-ಉಜ್-ಜಮಾನ್ ಅವರಿಂದ ಒತ್ತಡ. ಈ ಕಾರಣದಿಂದಾಗಿಯೇ ಆಡಳಿತ ನಡೆಸುವುದು ಕಷ್ಟವಾಗುತ್ತಿದೆ ಎಂದು ಯೂನುಸ್ ಆಪ್ತರ ಬಳಿ ಹೇಳಿಕೊಂಡಿದ್ದಾರೆ ಎಂದು ಢಾಕಾ ಮಾಧ್ಯಮಗಳು ವರದಿ ಮಾಡಿವೆ.

ಯೂನುಸ್ ರಾಜೀನಾಮೆ ಚಿಂತನೆಯಲ್ಲಿದ್ದಾರೆಂದು ವಿದ್ಯಾರ್ಥಿ ಮುಖಂಡರ ನೇತೃತ್ವದ 'ನ್ಯಾಷನಲ್ ಸಿಟಿಜನ್ ಪಾರ್ಟಿ'(ಎನ್‌ಸಿಪಿ) ಸಂಚಾಲಕ ನಹಿದ್ ಇಸ್ಲಾಂ ತಿಳಿಸಿರುವುದಾಗಿ 'ಬಿಬಿಸಿ' ಬಾಂಗ್ಲಾ ವರದಿ ಮಾಡಿದೆ. ಯೂನುಸ್ ರಾಜೀನಾಮೆ ಸುದ್ದಿ ಹರಡುತ್ತಿರುವುದು ತಿಳಿದು ಅವರೊಡನೆಯೇ ಚರ್ಚಿಸಲೆಂದು ನಿವಾಸಕ್ಕೆ ತೆರಳಿದ್ದೆ. ಪರಿಸ್ಥಿತಿ ತೀರಾ ಹದಗೆಟ್ಟಿರುವುದರಿಂದ ರಾಜೀನಾಮೆ ಬಗ್ಗೆ ಯೋಚಿಸುತ್ತಿರುವುದಾಗಿ ಎಂದು ಯೂನುಸ್ ಹೇಳಿದರೆಂದು ನಹಿದ್ ಇಸ್ಲಾಂ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಯೂನುಸ್ ರಾಜೀನಾಮೆ ನೀಡುವುದಿಲ್ಲ: ತಯ್ಯಬ್

ಬಾಂಗ್ಲಾದೇಶದ ಸದ್ಯದ ಪರಿಸ್ಥಿತಿಯಲ್ಲಿ ಮೊಹಮ್ಮದ್ ಯೂನುಸ್ ಅವರು ಮುಖ್ಯ ಸಲಹೆಗಾರರಾಗಿ ಮುಂದುವರಿಯುವುದು ಅತ್ಯಗತ್ಯವಾಗಿದೆ. ಹಾಗಾಗಿ ಅವರು ರಾಜೀನಾಮೆ ನೀಡುವುದಿಲ್ಲ ಎಂದು ಬಾಂಗ್ಲಾದೇಶದ ಮಧ್ಯಂತರ ಸರಕಾರದ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ, ಯೂನುಸ್ ಅವರ ವಿಶೇಷ ಸಹಾಯಕ ಫಯಾಝ್ ಅಹಮದ್ ತಯ್ಯಬ್ ಶುಕ್ರವಾರ ಹೇಳಿದ್ದಾರೆ.

ಸ್ಥಿರ ಸರಕಾರ ರಚನೆಯಾಗಿ ಶಾಂತಿಯುತವಾಗಿ ಅಧಿಕಾರದ ಹಸ್ತಾಂತರ ಆಗುವವರೆಗೂ ಯೂನುಸ್ ಅವರು ಮಧ್ಯಂತರ ಸರಕಾರದ ನೇತೃತ್ವದಲ್ಲಿಯೇ ಮುಂದುವರಿಯುವುದು ಅತಿ ಅವಶ್ಯವಾಗಿದೆ ಎಂದು ತಯ್ಯಬ್ 'ಫೇಸ್‌ಬುಕ್' ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಮಹಾರಾಷ್ಟ್ರ ಗಡಚಿರೋಲಿ: ನಾಲ್ವರು ನಕ್ಸಲರ ಎನ್‌ಕೌಂಟರ್

ಛತ್ತೀಸ್‌ಗಢದಲ್ಲಿ ಬುಧವಾರ ನಡೆಸಲಾದ ನಕ್ಸಲ್ ದಮನ ಕಾರ್ಯಾಚರಣೆ ಬಳಿಕ ಸ್ಥಳದಲ್ಲಿ ವಶಪಡಿಸಿಕೊಳ್ಳಲಾದ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ನಾರಾಯಣಪುರದಲ್ಲಿ ಶುಕ್ರವಾರ ಪ್ರದರ್ಶನಕ್ಕಿಡಲಾಗಿತ್ತು.

ಮುಂಬೈ: ಛತ್ತೀಸ್‌ಗಢ, ಜಾರ್ಖಂಡ್, ಆಂಧ್ರಪ್ರದೇಶ ಬಳಿಕ ಮಹಾರಾಷ್ಟ್ರದಲ್ಲಿಯೂ ನಕ್ಸಲ್ ದಮನ ಕಾರ್ಯಾಚರಣೆ ಶುರುವಾಗಿದೆ. ಮಹಾರಾಷ್ಟ್ರ-ಛತ್ತೀಸ್‌ಗಢ ರಾಜ್ಯಗಳ ಗಡಿಯಂಚಿನ ಗಡ್ಚಿರೋಲಿ ಜಿಲ್ಲೆಯಲ್ಲಿ ನಾಲ್ವರು ನಕ್ಸಲರನ್ನು ಕೊಲ್ಲಲಾಗಿದೆ.

ರಾಜ್ಯ ಪೊಲೀಸರ ವಿಶೇಷ ಕಮಾಂಡೊ ಘಟಕ 'ಸಿ-60' ಮತ್ತು ಕೇಂದ್ರ ಮೀಸಲು ಪೊಲೀಸ್ ಪಡೆ(ಸಿಆರ್‌ಪಿಎಫ್) ಜಂಟಿ ಕಾರ್ಯಾಚರಣೆ ನಡೆಸಿ ನಾಲ್ವರು ನಕ್ಸಲರನ್ನು ಹೊಡೆದುರುಳಿಸಿವೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಶುಕ್ರವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಗಡ್ಚಿರೋಲಿ ಜಿಲ್ಲೆಯ ಕವಾಂಡೆ ಮತ್ತು ನೆಲಗುಂಡಾ ಪ್ರದೇಶದಲ್ಲಿ ಇಂದ್ರಾವತಿ ನದಿ ದಡದಲ್ಲಿ ಮಾವೋವಾದಿ ನಕ್ಸಲರು ಹೊಸದಾಗಿ 'ಫಾರ್ವರ್ಡ್ ಆಪರೇಟಿಂಗ್ ಬೇಸ್' ತೆರೆದಿದ್ದಾರೆ ಎಂಬ ಖಚಿತ ಮಾಹಿತಿ ಗುಪ್ತಚರ ಸಂಸ್ಥೆಯಿಂದ ಬಂದ ಬಳಿಕ ನಕ್ಸಲ್ ದಮನ ಕಾರ್ಯಾಚರಣೆಯ ಜಂಟಿ ಪಡೆಗಳು ಗುರುವಾರ ಸಂಜೆ ಸ್ಥಳಕ್ಕೆ ಧಾವಿಸಿದವು. ಧಾರಾಕಾರ ಮಳೆ ಸುರಿಯುತ್ತಿದ್ದರೂ ಅಂಜದೇ 2 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ನಕ್ಸಲರನ್ನು ಕೊಂದು ಹಾಕಿದವು ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.

ಭದ್ರತಾ ಪಡೆಗಳು ನಕ್ಸಲರ ಅಡಗುತಾಣವನ್ನು ಸುತ್ತುವರಿದಾಗ ನಕ್ಸಲರೇ ಮೊದಲಾಗಿ ಭದ್ರತಾ ಪಡೆಗಳತ್ತ ಗುಂಡು ಹಾರಿಸಿದರು. ಜೀವಂತ ಸೆರೆ ಹಿಡಿಯುವ ಉದ್ದೇಶದಲ್ಲಿದ್ದ ಜಂಟಿ ಭದ್ರತಾಪಡೆ ಅಧಿಕಾರಿಗಳು, ಅನಿವಾರ್ಯವಾಗಿ ಗುಂಡಿನ ಚಕಮಕಿ ನಡೆಸಬೇಕಾಯಿತು ಎಂದು ಅಧಿಕಾರಿ ವಿವರಿಸಿದ್ದಾರೆ.

ಶಸ್ತ್ರಾಸ್ತ್ರ ವಶ:

ನಕ್ಸಲರ ಅಡಗುತಾಣದಲ್ಲಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ವಶವಾಗಿವೆ. ಒಂದು ಎಸ್‌ಎಲ್‌ಆರ್ ಬಂದೂಕು, ಎರಡು ಪಾಯಿಂಟ್ .303 ಬಂದೂಕುಗಳು, ಒಂದು ಬಾರ್ಮರ್ ಗನ್, ಹಲವು ಸುತ್ತು ಗುಂಡುಗಳು, ವಾಕಿ ಟಾಕಿ, ನಕ್ಸಲ್ ಸಿದ್ಧಾಂತ ಪ್ರಚಾರದ ಕರಪತ್ರಗಳು, ನಕ್ಸಲ್ ಸಾಹಿತ್ಯ ಕೃತಿಗಳು ವಶವಾಗಿವೆ.

ನಕ್ಸಲ್ ಮುಕ್ತ ಭಾರತ: ಶಾ ಶಪಥ

2026ರ ವೇಳೆಗೆ ಭಾರತವನ್ನು ನಕ್ಸಲ್ ಮುಕ್ತ ದೇಶವಾಗಿಸಲು ಪಣ ತೊಟ್ಟಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಕಟ್ಟುನಿಟ್ಟಿನ ಆದೇಶದ ಮೇರೆಗೆ ಛತ್ತೀಸ್‌ಗಢ, ಜಾರ್ಖಂಡ್, ಆಂಧ್ರಪ್ರದೇಶ ಮತ್ತಿತರ ನಕ್ಸಲ್ ಪ್ರಭಾವದ ರಾಜ್ಯಗಳಲ್ಲಿ ಜಂಟಿ ಭದ್ರತಾ ಪಡೆಗಳು ಸರಣಿಯೋಪಾದಿ ಕಾರ್ಯಾಚರಣೆ ನಡೆಸಿ ನಕ್ಸಲರನ್ನು ಇಲ್ಲವಾಗಿಸುತ್ತಿವೆ. ಇನ್ನೊಂದೆಡೆ, ಹಲವು ನಕ್ಸಲರೂ ಮನಸ್ಸು ಬದಲಿಸಿ, ನಕ್ಸಲ್ ಸಿದ್ಧಾಂತ ಕೈಬಿಟ್ಟು ಮುಖ್ಯ ವಾಹಿನಿಗೆ ಬರಲು ಸಿದ್ಧರಾಗಿ ಪೊಲೀಸರಿಗೆ ಶರಣಾಗುತ್ತಿದ್ದಾರೆ. ತಲೆಗೆ 1.50 ಕೋಟಿ ರು. ಇನಾಮು ಹೊಂದಿದ್ದ ನಕ್ಸಲರ ಉನ್ನತ ಕಮಾಂಡರ್ ಬಸವರಾಜ್ ಸೇರಿದಂತೆ 30 ನಕ್ಸಲರನ್ನು ಮೇ 21ರಂದು ಛತ್ತೀಸ್‌ಗಢದಲ್ಲಿ ಹೊಡೆದುರುಳಿಸಲಾಗಿದೆ. ಜತೆಗೆ ಅಪಾರ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನೂ ವಶಪಡಿಸಿಕೊಳ್ಳಲಾಗಿದೆ. ಈಗ ಮಹಾರಾಷ್ಟ್ರದಲ್ಲಿ 4 ನಕ್ಸಲರ ಅಂತ್ಯವಾಗಿದೆ. ನಕ್ಸಲರ ದಮನ ಕಾರ್ಯಾಚರಣೆ ನಿರಂತರ ನಡೆಯುತ್ತಿದ್ದು, ನಕ್ಸಲ್ ಸಂತತಿ ಅಂತಿಮ ಚರಣದಲ್ಲಿದೆ.

ಬೆಳಗಾವಿ ಮೂಲದ ಸಂತ್ರಸ್ತೆ | ಸಾಂಗ್ಲಿಯಲ್ಲಿ ಲೈಂಗಿಕ ದೌರ್ಜನ್ಯ | ಮೂವರ ಸೆರೆ

ಸಹಪಾಠಿಗಳಿಂದಲೇ ವೈದ್ಯ ವಿದ್ಯಾರ್ಥಿನಿ ಅತ್ಯಾಚಾರ

ಸಾಂಗ್ಲಿ: ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯಲ್ಲಿ ವೈದ್ಯಕೀಯ ವಿದ್ಯಾರ್ಥಿನಿ ಸಹಪಾಠಿಗಳಿಂದಲೇ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗಿದ್ದಾಳೆ.

ಕರ್ನಾಟಕದ ಬೆಳಗಾವಿ ಮೂಲದ ವಿದ್ಯಾರ್ಥಿನಿ ಸಾಂಗ್ಲಿಯಲ್ಲಿನ ವೈದ್ಯಕೀಯ ಕಾಲೇಜಿನಲ್ಲಿ 3ನೇ ವರ್ಷದ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದು, ಆಕೆಯ ಮೇಲೆ ಇಬ್ಬರು ಸಹಪಾಠಿಗಳು, ಸ್ನೇಹಿತನೊಬ್ಬನ ಜತೆಗೂಡಿ ಅತ್ಯಾಚಾರ ನಡೆಸಿದ್ದಾರೆ.

ನಡೆದಿದ್ದೇನು: 22 ವರ್ಷದ ವೈದ್ಯಕೀಯ ವಿದ್ಯಾರ್ಥಿನಿ ಮೇ 18ರ ರಾತ್ರಿ 10 ಗಂಟೆಯಲ್ಲಿ ಚಿತ್ರಮಂದಿರದಲ್ಲಿ ಸಿನಿಮಾ ನೋಡಲು ಹೋಗಿದ್ದಾಗ ಸಹಪಾಠಿಗಳು ಆಕೆಯನ್ನು ತಮ್ಮ ನಿವಾಸಕ್ಕೆ ಕರೆದೊಯ್ದು, ಆಕೆಗೆ ಬಲವಂತವಾಗಿ ಮದ್ಯ ಕುಡಿಸಿ ಬಳಿಕ ಅತ್ಯಾಚಾರ ನಡೆಸಿದ್ದಾರೆ ಎಂದು ದೂರಲಾಗಿದೆ. ಮೂವರು ಆರೋಪಿಗಳೂ ಮದ್ಯದ ಅಮಲಿನಲ್ಲಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಬೆಳಗಾವಿ ವಿದ್ಯಾರ್ಥಿನಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಬಳಿಕ ಮೂವರು

ಆರೋಪಿಗಳು ಘಟನೆ ಬಗ್ಗೆ ಹೊರಗೆಲ್ಲಾದರೂ ಮಾತನಾಡಿದರೆ ಭೀಕರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಹಾಕಿದ್ದಾರೆ. ಈ ಬಗ್ಗೆ ಸಂತ್ರಸ್ತೆ ದೂರಿನಲ್ಲಿ ತಿಳಿಸಿದ್ದಾರೆ ಎಂದು ಅಧಿಕಾರಿ ವಿವರಿಸಿದ್ದಾರೆ.

ಬೆಳಗಾವಿಯಲ್ಲಿರುವ ಪೋಷಕರಿಗೆ ಸಂತ್ರಸ್ತ ಯುವತಿ ಕರೆ ಮಾಡಿ ಮಾಹಿತಿ ನೀಡಿದ್ದು, ಪೋಷಕರು ಸಾಂಗ್ಲಿಗೆ ಧಾವಿಸಿ ಬಂದ ಬಳಿಕ ವಿಶ್ರಾಂಬಾಗ್ ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಲಾಗಿದೆ. ಸಾಂಗ್ಲಿಯ ಈ ಘಟನೆ ಕೋಲ್ಕತ್ತದಲ್ಲಿನ ಆರ್‌ಜಿ ಕರ್ ವೈದ್ಯಕೀಯ ಕಾಲೇಜಿನ ಕಿರಿಯ ವೈದ್ಯೆ ಮೇಲೆ ನಡೆದ ಅತ್ಯಾಚಾರ ಘಟನೆಯನ್ನು ನೆನಪಿಸುತ್ತಿದೆ.

ಮೂವರು ಆರೋಪಿಗಳು ಪೊಲೀಸ್ ಕಸ್ಟಡಿಗೆ

ಸಾಮೂಹಿಕ ಅತ್ಯಾಚಾರ ಪ್ರಕರಣ ದಾಖಲಿಸಿಕೊಂಡಿರುವ ಸಾಂಗ್ಲಿ ಪೊಲೀಸರು, ಪುಣೆ, ಸೋಲಾಪುರ ಮತ್ತು ಸಾಂಗ್ಲಿ ಮೂಲದ, 20 ರಿಂದ 22 ವರ್ಷ ವಯೋಮಾನದ ಮೂವರು ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಬಳಿಕ ನ್ಯಾಯಾಧೀಶರು ಮೂವರನ್ನೂ ಮೇ 27ರವರೆಗೆ ಪೊಲೀಸ್ ಕಸ್ಟಡಿಗೆ ನೀಡಿದ್ದಾರೆ. ಆರೋಪಿಗಳ ವಿರುದ್ಧ ಸಾಮೂಹಿಕ ಅತ್ಯಾಚಾರ ಮತ್ತು ಜೀವಬೆದರಿಕೆ ಮತ್ತಿತರ ಆರೋಪ ಹೊರಿಸಿ ಭಾರತೀಯ ನ್ಯಾಯ ಸಂಹಿತಾ(ಬಿಎನ್‌ಎಸ್)ನ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗಿದೆ. ತನಿಖೆ ಮುಂದುವರಿದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಇಂಡಿಗೊ ವಿಮಾನಕ್ಕೆ ಜಾಗ ಕೊಡದ ಪಾಕ್!

ದೆಹಲಿ: ಭಾರತದೆಡೆಗಿನ ಪಾಕಿಸ್ತಾನದ ಕ್ರೌರ್ಯ ಮನೋಭಾವ ಮತ್ತೊಮ್ಮೆ ಅನುಭವಕ್ಕೆ ಬಂದಿದೆ.

ದೆಹಲಿಯಿಂದ ಶ್ರೀನಗರಕ್ಕೆ ತೆರಳುತ್ತಿದ್ದ ಇಂಡಿಗೊ ವಿಮಾನ ಹಾರಾಟದಲ್ಲಿದ್ದಾಗ ಆಲಿಕಲ್ಲು ಅಪ್ಪಳಿಸಿ ವಿಮಾನದ ಮೂತಿ ಛಿದ್ರವಾಗಿತ್ತು.

ಪರಿಣಾಮ ವಿಮಾನದೊಳಕ್ಕೆ ಗಾಳಿ ರಭಸವಾಗಿ ನುಗ್ಗಲಾರಂಭಿಸಿದ್ದರಿಂದ ವಿಮಾನದಲ್ಲಿ ಭಾರೀ ಕಂಪನ ಸೃಷ್ಟಿಯಾಗಿತ್ತು. ವಿಮಾನ ನಿಯಂತ್ರಣಕ್ಕೆ ಬಾರದಷ್ಟು ಜೋರಾಗಿ ಅಲುಗಾಡಲಾರಂಭಿಸಿತು. ನಿಮಿಷಕ್ಕೆ 8500 ಅಡಿಗಳಷ್ಟು ಲೆಕ್ಕದಲ್ಲಿ ಕುಸಿಯಲಾರಂಭಿಸಿತು. ಪರಿಣಾಮ, 7 ಸಿಬ್ಬಂದಿಗಳು ಮತ್ತು 220 ಪ್ರಯಾಣಿಕರ ಜೀವ ಅಪಾಯದಲ್ಲಿತ್ತು.

ಹೊರಗೆ ಹವಾಮಾನ ಪ್ರಕ್ಷುಬ್ಧತೆ ಹೆಚ್ಚುತ್ತಲೇ ಇತ್ತು. ಇಂಥ ಪರಿಸ್ಥಿತಿಯಲ್ಲಿ ಇಂಡಿಗೊ ವಿಮಾನ ಬಾಹ್ಯ ಗಾಳಿಯ ಒತ್ತಡ ತಪ್ಪಿಸಿಕೊಳ್ಳಲು ಪಾಕಿಸ್ತಾನದ ವಾಯುಸೀಮೆ ಪ್ರವೇಶಿಸಲು ಮುಂದಾದಾಗ ಪಾಕ್ ವಿಮಾನ ನಿಯಂತ್ರಣ ಕೇಂದ್ರ ಪ್ರವೇಶ ಅವಕಾಶ ನಿರಾಕರಿಸಿದೆ.

ಅಮೃತಸರದ ಬಳಿ ಹಾರಾಟದಲ್ಲಿದ್ದಾಗ ಪ್ರಕ್ಷುಬ್ಧ ಹವಾಮಾನ ಎದುರಾಗಿದ್ದರಿಂದ ಬಾಹ್ಯ ಒತ್ತಡದಿಂದ ಪಾರಾಗಲು ಸ್ವಲ್ಪ ಸಮಯದವರೆಗೆ ಪಾಕ್ ವಾಯುಸೀಮೆ ಬಳಸಿಕೊಳ್ಳಲು ಇಂಡಿಗೊ ವಿಮಾನದ ಪೈಲಟ್ ಅನುಮತಿ ಕೋರಿದರು. ಆದರೆ, ಲಾಹೋರ್‌ನ ವಾಯು ಸಂಚಾರ ನಿಯಂತ್ರಣ ಕೇಂದ್ರ, ಅನುಮತಿ ಕೊಡಲು ತಿರಸ್ಕರಿಸಿತು ಎಂದು ವರದಿಯಾಗಿದೆ.

ಆದರೆ, ಪೈಲಟ್ ಸಮಯಪ್ರಜ್ಞೆ ಮೆರೆದು ವಿಮಾನವನ್ನು ಕಷ್ಟಪಟ್ಟು ನಿಯಂತ್ರಿಸಿ ಪೂರ್ವ ನಿಗದಿತ ಮಾರ್ಗದಲ್ಲಿಯೇ ಶ್ರೀನಗರದೆಡೆಗೆ ಕೊಂಡೊಯ್ದು ಸುರಕ್ಷಿತವಾಗಿ ವಿಮಾನ ನಿಲ್ದಾಣದಲ್ಲಿ ಇಳಿಸುವಲ್ಲಿ ಯಶಸ್ವಿಯಾದರು. 220 ಪ್ರಯಾಣಿಕರು, ತಾವೂ ಸೇರಿದಂತೆ 7 ಸಿಬ್ಬಂದಿಗಳ ಜೀವ ಉಳಿಯಲು ಕಾರಣವಾದರು.

ವಿಮಾನದಲ್ಲಿ ಟಿಎಂಸಿ ಸಂಸದರು!

ಅಪಾಯದ ಪರಿಸ್ಥಿತಿಯಲ್ಲಿದ್ದ ಇಂಡಿಗೊ ವಿಮಾನದಲ್ಲಿ ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದ ಸಂಸದ ಡೆರೆಕ್ ಒಬ್ರಿಯಾನ್, ನಾಯಕರಾದ ನದೀಮುಲ್ ಹಖ್, ಸಾಗರಿಕಾ ಘೋಷ್, ಮನಸ್ ಭುನಿಯ, ಮಮತಾ ಠಾಕೂರ್ ಸಹ ಇದ್ದರು.

ಕೋವಿಡ್ ಕೇಸ್ ಹೆಚ್ಚಳ: ಆಂಧ್ರ ಮಾಸ್ಕ್ ಕಡ್ಡಾಯ

ದೆಹಲಿ: ಭಾರತದಲ್ಲಿ ಮತ್ತೆ ಕೋವಿಡ್-19 ಆತಂಕ ಸೃಷ್ಟಿಯಾಗಿದೆ. ದೇಶದ ಕೆಲವು ರಾಜ್ಯಗಳಲ್ಲಿ ಕರೋನಾ ಸೋಂಕಿತರ ಪ್ರಕರಣಗಳು ಮತ್ತೆ ಹೆಚ್ಚಲಾರಂಭಿಸಿವೆ. ಆಂಧ್ರಪ್ರದೇಶದಲ್ಲಿಯೂ ಕರೋನಾ ಪ್ರಕರಣಗಳಲ್ಲಿ ಹೆಚ್ಚಳವಾಗಿದೆ. ಪರಿಣಾಮ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ನೇತೃತ್ವದ ಸರಕಾರ ರಾಜ್ಯದಲ್ಲಿ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಿ ಶುಕ್ರವಾರ ಆದೇಶ ಹೊರಡಿಸಿದೆ. ಆಂಧ್ರ ಪ್ರದೇಶದಲ್ಲಿ ಗುರುವಾರ ಒಂದೇ ದಿನ ಹೊಸದಾಗಿ 19 ಪಾಸಿಟಿವ್ ಕೇಸ್ ದಾಖಲಾಗಿದೆ. ಜನರ ದೊಡ್ಡ ಗುಂಪು, ಸಭೆ-ಸಮಾರಂಭಗಳಲ್ಲಿ ಭಾಗವಹಿಸುವವರು ವೈದ್ಯರು ಶಿಫಾರಸು ಮಾಡಿರುವ ಮಾಸ್ಕ್‌ಗಳನ್ನು ಕಡ್ಡಾಯವಾಗಿ ಧರಿಸಬೇಕು ಎಂದು ರಾಜ್ಯದ ಆರೋಗ್ಯ ಸಚಿವಾಲಯ ಮಾರ್ಗಸೂಚಿ ಪ್ರಕಟಿಸಿದೆ.

9 ತಿಂಗಳ ಕೂಸಿಗೆ: ಕರ್ನಾಟಕದಲ್ಲಿಯೂ ಒಟ್ಟು 33 ಕೇಸ್ ದಾಖಲಾಗಿದ್ದು, ಇದರಲ್ಲಿ 16 ಸಕ್ರಿಯ ಪ್ರಕರಣಗಳಾಗಿವೆ. ಬೆಂಗಳೂರಲ್ಲಿ 9 ತಿಂಗಳ ಮಗುವಿಗೆ ಕೋವಿಡ್ ಸೋಂಕು ದೃಢಪಟ್ಟಿದೆ. ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆಗೆ ದಾಖಲಾದ 9 ತಿಂಗಳ ಶಿಶುವಿನಲ್ಲಿ ಕೋವಿಡ್-19 ಸೋಂಕು ಪತ್ತೆಯಾಗಿದೆ. ನೆರೆ ರಾಜ್ಯ ಕೇರಳ ಒಂದರಲ್ಲೇ 186 ಕರೋನಾ ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 95 ಸಕ್ರಿಯ ಪ್ರಕರಣಗಳು ಎಂದು ಗುರುತಿಸಲಾಗಿದೆ. ಗುಜರಾತ್ ರಾಜ್ಯದಲ್ಲಿ ಗುರುವಾರ ಹೊಸದಾಗಿ 15 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದ್ದು, ಪಾಸಿಟಿವ್ ವರದಿ ಬಂದಿದೆ.

ಚಿಪ್ಸ್ ಕದ್ದಿಲ್ಲ ಅಮ್ಮಾ: 12ರ ಪೋರ ಆತ್ಮಹತ್ಯೆ

ಕೋಲ್ಕತ್ತ: 'ನಾನು ಚಿಪ್ಸ್ ಪ್ಯಾಕೆಟ್ ಕದ್ದಿಲ್ಲ ಅಮ್ಮಾ'... ಎಂದು ಚೀಟಿ ಬರೆದಿಟ್ಟು ಪಶ್ಚಿಮ ಬಂಗಾಳದ 12 ವರ್ಷದ ಬಾಲಕ ಆತ್ಮಹತ್ಯೆ ಮಾಡಿಕೊಂಡಿರುವ ಹೃದಯ ವಿದ್ರಾವಕ ಘಟನೆ ವರದಿಯಾಗಿದೆ. ಪಶ್ಚಿಮ ಮೇದಿನಿಪುರ ಜಿಲ್ಲೆಯಲ್ಲಿ ಅಂಗಡಿಯೊಂದರ ಮಾಲೀಕ, ಚಿಪ್ಸ್ ಪ್ಯಾಕೆಟ್ ಕದ್ದ ಆರೋಪ ಹೊರಿಸಿ ಬಾಲಕನನ್ನು ಜನರೆದುರು ನಿಂದಿಸಿದ್ದರಿಂದ ಮನನೊಂದು ಬಾಲಕ ಗುರುವಾರ ಸಂಜೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ. ಅಂಗಡಿ ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ನಡೆದಿದ್ದೇನು: 7 ನೇ ತರಗತಿಯ ವಿದ್ಯಾರ್ಥಿ ಕೃಷ್ಣೇಂದು ದಾಸ್ ಚಿಪ್ಸ್ ಖರೀದಿಸಲು ಅಂಗಡಿಗೆ ಹೋಗಿದ್ದ. ಚಿಪ್ಸ್ ಪೊಟ್ಟಣ ಬೇಕೆಂದು ಕರೆದಾಗ ಅಂಗಡಿಯೊಳಗಿಂದ ಮಾಲೀಕ ಶುಭಂಕರ್ ದೀಕ್ಷಿತ್ ಉತ್ತರಿಸಿರಲಿಲ್ಲ, ಅಂಕಲ್ ನಾನು ಚಿಪ್ಸ್ ತೆಗೆದುಕೊಳ್ಳುತ್ತಿದ್ದೇನೆ ಎಂದರೂ ಮಾಲೀಕನ ಕಡೆಯಿಂದ ಪ್ರತಿಕ್ರಿಯೆ ಬಂದಿರಲಿಲ್ಲ. ಕೆಲ ಕ್ಷಣಗಳ ಬಳಿಕ ಒಳಗಿನಿಂದ ಬಂದ ದೀಕ್ಷಿತ್, ಕೃಷ್ಣೇಂದು ಚಿಪ್ಸ್ ಪೊಟ್ಟಣ ಕದ್ದಿದ್ದಾನೆ ಎಂದು ಕೆನ್ನೆಗೆ ಬಾರಿಸಿದ್ದಾನೆ. ಸಾಲದು ಎಂಬಂತೆ ಬಸ್ಕಿ ಹೊಡೆಸಿದ್ದಾನೆ. ಬಳಿಕ ಬಾಲಕನ ತಾಯಿಯನ್ನೂ ಕರೆಸಿ ಬೈದಿದ್ದಾನೆ. ಇದೆಲ್ಲದರಿಂದ ಮನನೊಂದ ಕೃಷ್ಣೇಂದು ಮನೆಗೆ ವಾಪಸಾದವನೇ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡು ಅಮ್ಮನಿಗೆ ಪತ್ರ ಬರೆದಿಟ್ಟು ಕೀಟನಾಶಕ ಸೇವಿಸಿದ್ದಾನೆ. ಕೂಡಲೇ ಕುಟುಂಬದವರು ಆಸ್ಪತ್ರೆಗೆ ಕರೆದೊಯ್ದರೂ ಪ್ರಯೋಜನವಾಗಿಲ್ಲ. ಜನರೆದುರು ಮಾನ ಹೋಗಿದ್ದಕ್ಕೆ ಪುಟ್ಟ ಬಾಲಕ ಪ್ರಾಣವನ್ನೇ ಬಿಟ್ಟಿದ್ದಾನೆ.

6250 ಮೀ. ಪರ್ವತ ಏರಿದ ದೃಷ್ಟಿವಂಚಿತೆ!

ಕಿನ್ನಾವುರ್: ಹಿಮಾಚಲ ಪ್ರದೇಶದ ಕಿನ್ನಾವುರ್ ಜಿಲ್ಲೆಯ ಕುಗ್ರಾಮವೊಂದರ ನಿವಾಸಿ, ಬುಡಕಟ್ಟು ಜನಾಂಗದ ದೃಷ್ಟಿ ವಂಚಿತ ಮಹಿಳೆ ಛೋಂಝಿನ್ ಆಂಗ್‌ಮೊ ಎಲ್ಲಾ ಬಗೆಯ ಸವಾಲುಗಳನ್ನೂ ಮೆಟ್ಟಿ



ನಿಂತು 6250 ಮೀಟರ್ ಎತ್ತರದ 'ಕಾಂಗ್ ಯಾತ್ಸಾಯಿ ಪರ್ವತ'ವನ್ನೇರಿ ಅಸಾಧಾರಣ ಸಾಧನೆ ಮಾಡಿದ್ದಾರೆ. ಆ ಮೂಲಕ ಬಾಲ್ಯ ಕಾಲದ ಗುರಿಯನ್ನು ಕಡೆಗೂ ಈಡೇರಿಸಿಕೊಂಡಿದ್ದಾರೆ. ಕಳೆದ ಸೋಮವಾರ ಈ ಮಹತ್ಸಾಧನೆ ಸಾಧ್ಯವಾಗಿದೆ. ಆ ಮೂಲಕ ಎವರೆಸ್ಟ್ ಪರ್ವತ ಶ್ರೇಣಿಯನ್ನೇರಿದ ಭಾರತದ ಮೊಟ್ಟ ಮೊದಲ ದೃಷ್ಟಿ ವಿಶೇಷಚೇತನ ವನಿತೆ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ. ವಿಶ್ವದ ದೃಷ್ಟಿ ವಂಚಿತ ಮಹಿಳೆಯರಲ್ಲಿ ಈ ಸಾಧನೆ ಮಾಡಿದ 5ನೇ ವ್ಯಕ್ತಿ ಎನಿಸಿಕೊಂಡಿದ್ದಾರೆ. 8 ವರ್ಷದ ಬಾಲಕಿಯಾಗಿದ್ದಾಗ ದೃಷ್ಟಿ ಕಳೆದುಕೊಂಡರೂ ಆಂಗ್‌ಮೊ, ವ್ಯಾಸಂಗವನ್ನು ಮುಂದುವರಿಸಿದರು. ದೆಹಲಿ ವಿಶ್ವವಿದ್ಯಾಲಯದ ಮಿರಾಂಡಾ ಹೌಸ್ ನೆರವು ಪಡೆದು ಪದವಿ, ಸ್ನಾತಕೋತ್ತರ ಪದವಿಯನ್ನೂ ಪೂರ್ಣಗೊಳಿಸಿದರು. ಸದ್ಯ ಆಂಗ್‌ಮೊ ದೆಹಲಿಯಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯದಲ್ಲಿ ಗ್ರಾಹಕ ಸೇವಾ ವಿಭಾಗದಲ್ಲಿ ಅಸೋಸಿಯೇಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. 'ನನ್ನ ಮಗಳ ಸಾಧನೆಯಿಂದ ನಮಗೆಲ್ಲಾ ಬಹಳ ಸಂತೋಷವಾಗಿದೆ' ಎಂದು ತಂದೆ ಅಮರ್ ಚಂದ್ ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

43 ವರ್ಷದ ಶಿಕ್ಷೆ ಬಳಿಕ 104ರ ವೃದ್ಧ ಬಿಡುಗಡೆ

ಕೌಶಂಬಿ: ಉತ್ತರ ಪ್ರದೇಶದ ಕೌಶಂಬಿಯ ಜಿಲ್ಲಾ ಕಾರಾಗೃಹದಲ್ಲಿ 43 ವರ್ಷಗಳಿಂದ ಶಿಕ್ಷೆ ಅನುಭವಿಸುತ್ತಿದ್ದ 104 ವರ್ಷದ ವೃದ್ಧನಿಗೆ ಅಲಹಾಬಾದ್ ಹೈಕೋರ್ಟ್‌ನ ಆದೇಶದಿಂದಾಗಿ ಶುಕ್ರವಾರ 'ಬಿಡುಗಡೆ ಭಾಗ್ಯ' ದೊರೆತಿದೆ. ಕೌಶಂಬಿ ಜಿಲ್ಲೆಯ ಗೌರಾಯೆ



ಗ್ರಾಮದಲ್ಲಿ 1921ರ ಜ.4ರಂದು ಜನಿಸಿದ ಲಖನ್, 1977ರಲ್ಲಿ ಪ್ರಭು ಸರೋಜ್ ಕೊಲೆ ಮತ್ತು ಮತ್ತೊಬ್ಬ ವ್ಯಕ್ತಿಯ ಕೊಲೆಗೆ ಯತ್ನ (2) ಪ್ರಕರಣಗಳಲ್ಲಿ ಬಂಧನಕ್ಕೊಳಗಾದ. ಜಿಲ್ಲಾ ನ್ಯಾಯಾಲಯ 1982ರಲ್ಲಿ ಲಖನ್‌ಗೆ ಆಜೀವ ಕಾರಾಗೃಹ ಶಿಕ್ಷೆ ವಿಧಿಸಿತು. 43 ವರ್ಷ ಸೆರೆಮನೆಯಲ್ಲೇ ಇದ್ದ ಲಖನ್ ಇದೇ ಮೇ 2ರಂದು ಹೈಕೋರ್ಟ್ ಆಜೀವ ಸೆರೆವಾಸ ಶಿಕ್ಷೆ ಕಡಿತ ಮಾಡಿ ಬಿಡುಗಡೆಗೆ ಆದೇಶಿಸಿತು. ಬಿಡುಗಡೆಗೊಂಡ ಲಖನ್‌ನನ್ನು ಕೌಶಂಬಿ ಜಿಲ್ಲೆಯ ಶಾರಿರಾ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮದಲ್ಲಿನ ಪುತ್ರಿಯ ಮನೆಗೆ ಕರೆದೊಯ್ದು ಮುಟ್ಟಿಸಲಾಗಿದೆ. 1982ರಲ್ಲಿ ಲಖನ್ ಜತೆಗೆ ತರೆ ಮೂವರಿಗೂ ಆಜೀವ ಸೆರೆವಾಸದ ಶಿಕ್ಷೆಯಾಗಿತ್ತು. ಆದರೆ, ಆ ಮೂವರೂ ಬಂಧನದಲ್ಲಿದ್ದಾಗಲೇ ಪ್ರಾಣ ಬಿಟ್ಟರು. ಲಖನ್ ಒಬ್ಬನೇ ಜೀವಂತವಾಗಿ ಜೈಲಿನಿಂದ ಹೊರಬರುವ ಅದೃಷ್ಟ ಹೊಂದಿದ್ದವನು ಎಂಬ ಮಾತುಗಳು ಸೆರೆಮನೆಯ ಅಂಗಳದಲ್ಲಿ, ಜೈಲಿನ ಸಿಬ್ಬಂದಿಗಳ ವಲಯದಲ್ಲಿ ಕೇಳಿಬಂದಿವೆ.

ಸಮಾಚಾರ ಸಣ್ಣದಲ್ಲ

ಅಣ್ಣನ ನೆನಪು ಸಾಕ್ಷ್ಯ ನಾಟಕ ಪ್ರದರ್ಶನ ಇಂದು

ಮಂಡ್ಯ: ನೆಲದನಿ ಬಳಗದ ವತಿಯಿಂದ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ 'ಅಣ್ಣನ ನೆನಪು' ಸಾಕ್ಷ್ಯ ನಾಟಕ ಪ್ರದರ್ಶನವನ್ನು ಮೇ 24ರ ಸಂಜೆ 6 ಗಂಟೆಗೆ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಬಳಗದ ಅಧ್ಯಕ್ಷ ಎಂ.ಸಿ.ಲಂಕೇಶ್ ಮಂಗಲ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಜೆ 7ಕ್ಕೆ ನಾಟಕ ಪ್ರದರ್ಶನ ಆರಂಭವಾಗಿ 1 ಗಂಟೆ 50 ನಿಮಿಷಗಳ ಕಾಲ ನಡೆಯಲಿದೆ.ವಿಶ್ವ ಒಕ್ಕಲಿಗ ಮಠದ ಪೀಠಾಧ್ಯಕ್ಷ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಸಾನ್ನಿಧ್ಯವಹಿಸಲಿದ್ದು, ನೆಲದನಿ ಬಳಗದ ಪೋಷಕರಾದ ರುಕ್ಮಿಣಿ ಎಸ್.ಸಿ. ಶಂಕರೇಗೌಡ ಅಧ್ಯಕ್ಷತೆ ವಹಿಸುವರು. ರೈತ ನಾಯಕಿ ಸುನಂದ ಜಯರಾಮ್ ಉದ್ಘಾಟಿಸುವರು ಎಂದು ಹೇಳಿದರು. ಗೋಷ್ಠಿಯಲ್ಲಿ ಬಳಗದ ನವೀನ್ ಕುಮಾರಿ, ಕುಮಾರ್‌ಗೌಡ, ಶಿವಮಲ್ಲು, ನಾಗೇಶ್, ಮಹದೇವಸ್ವಾಮಿ ಇದ್ದರು.

ಕಾರ್ಯಕರ್ತರ ಹುದ್ದೆಗೆ ಆಹ್ವಾನ

ಮಂಡ್ಯ: ತಾಲೂಕಿನ ಶಿವಪುರ ಮತ್ತು ದುದ್ದ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಹುದ್ದೆ ಖಾಲಿಯಿದ್ದು ಹುದ್ದೆಗಳಿಗೆ ಮಾಸಿಕ ಗೌರವಧನ ಪಾವತಿ ಆಧಾರದ ಮೇಲೆ ಸ್ಥಳೀಯ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಅರ್ಹ ವಿಕಲಚೇತನರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಎಸ್ಸೆಸ್ಸೆಲ್ಸಿ ಪಾಸು/ಫೇಲಾದ ವಿಕಲಚೇತನರು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಹುದ್ದೆಗೆ ಜೂನ್ 5 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿಗಾಗಿ ಮೊ : 9480075940 ಸಂಪರ್ಕಿಸಬಹುದು.

ಬೆಳ್ಳೂರು ಕ್ರಾಸ್‌ಬಳಿ ಅಪಘಾತ: ಸಾವು

ನಾಗಮಂಗಲ: ತಾಲೂಕಿನ ತೊಳಲಿ ಗ್ರಾಮದ ಕೆರೆಯ ಬಳಿ ಹೆದ್ದಾರಿಯಲ್ಲಿ ಗುರುವಾರ ರಾತ್ರಿ, ಬೆಳ್ಳೂರು ಕ್ರಾಸ್ ಕಡೆಯಿಂದ ನಾಗಮಂಗಲ ಪಟ್ಟಣದ ಕಡೆಗೆ ಸ್ಟಾರ್ ಸಿಟಿ ಬೈಕ್ ನಲ್ಲಿ ಬರುತ್ತಿದ್ದಾಗ ನಡೆದ ಅಪಘಾತದಲ್ಲಿ ಯುವಕನೊಬ್ಬ ಮೃತಪಟ್ಟಿದ್ದಾನೆ. ಮುಳಕಟ್ಟೆ ಗ್ರಾಮದ ಎಂ.ಡಿ.ಶಿವಣ್ಣ ಎಂಬುವರ ಪುತ್ರ ಶಶಿಕಾಂತ್ (ಮಹೇಶ್) (37) ಮೃತಪಟ್ಟ ಯುವಕ. ಪಟ್ಟಣದ ಕಡೆಗೆ ಬರುತ್ತಿದ್ದ ಟ್ರಾಕ್ಟರ್‌ನ ರಿಫ್ಲೆಕ್ಟರ್ ಕಾಣಿಸದೇ ಹಿಂಬದಿಯಿಂದ ಬೈಕ್ ನಲ್ಲಿ ಡಿಕ್ಕಿ ಹೊಡೆದು ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಿಸುವ ಮೊದಲೇ ಸಾವನ್ನಪ್ಪಿದ್ದಾರೆ. ಬೈಕ್ ಹಿಂಬದಿ ಕುಳಿತಿದ್ದ ಮುಳಕಟ್ಟೆ ಗ್ರಾಮದ ಅರುಣ್ ಕುಮಾರ್ (37)ಗೂ ಗಾಯಗಳಾಗಿದ್ದು, ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.ಸ್ಥಳಕ್ಕೆ ನಾಗಮಂಗಲ ಪಟ್ಟಣ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಜಿಲ್ಲಾ ಮಟ್ಟದ ಈಜು ಸ್ಪರ್ಧೆ

ಹುಣಸೂರು: ಸ್ನೇಹಜೀವಿ ಸ್ಪೋರ್ಟ್ಸ್ ಅಕಾಡೆಮಿ ಹಾಗೂ ಮೈಸೂರು ಜಿಲ್ಲಾ ಈಜು ಸಂಸ್ಥೆ ಸಹಯೋಗದಲ್ಲಿ ಮೇ 25 ರಂದು ಸ್ನೇಹಜೀವಿ ಅಕ್ವಾಟಿಕ್ ಸೆಂಟರ್ ಒಂದನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ಜಿಲ್ಲಾ ಮಟ್ಟದ ನಾನ್ ಮೆಡಲಿಸ್ಟ್ ಈಜು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಸ್ನೇಹಜೀವಿ ಅಕ್ವಾಟಿಕ್ ಸೆಂಟರ್ ವ್ಯವಸ್ಥಾಪಕ ಗಣೇಶ್ ತಿಳಿಸಿದರು. ಖ್ಯಾತ ಈಜುಪಟು ಎಸ್.ಪಿ.ಲಿಖಿತ್ ಬೆಳಗ್ಗೆ 8.30ಕ್ಕೆ ಉದ್ಘಾಟಿಸಲಿದ್ದು, ಉದ್ಯಮಿ ಅಮರ್ ನಾಥ್, ಮೈಸೂರಿನ ದೈಹಿಕ ಶಿಕ್ಷಣ ವಿಭಾಗದ ವಿಶ್ರಾಂತ ನಿರ್ದೇಶಕ ಡಾ.ಸಿ.ಕೃಷ್ಣ,ಈಜು ತರಬೇತುದಾರ ಎಂ.ಪಿ.ನಾಭಿರಾಜ್ ಭಾಗವಹಿಸಿಲಿದ್ದಾರೆ ಎಂದರು. ವೈಯಕ್ತಿಕ ತಲಾ 2000ರು., ಸಮಗ್ರ ಚಾಂಪಿಯನ್ ಶಿಪ್ ತಂಡಕ್ಕೆ 6000 ರು. ರಿಲೇ ತಂಡಗಳಿಗೆ 1000 ರು.ನಗದು ನೀಡಿ ಪ್ರೋತ್ಸಾಹಿಸಲಾಗುವುದು.ಹೆಚ್ಚಿನ ಮಾಹಿತಿಗಾಗಿ ಮೊ.98458 09169 ಸಂಪರ್ಕಿಸಲು ಕೋರಿದೆ.

ಅಗಲಿದ ಜೀವ

ದಿನೇಶ್

ಹುಣಸೂರು : ಮಾದಳ್ಳಿ ಕೊಪ್ಪಲು ಗ್ರಾಮದ ದಿನೇಶ್ (ಹುಲಿ) (40) ಇತ್ತೀಚೆಗೆ ಬನ್ನಿಕುಪ್ಪೆ ಬಳಿ ರಸ್ತೆ ಅಪಘಾತಕ್ಕೀಡಾಗಿ ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ಸಂಜೆ ಮೃತರಾಗಿದ್ದಾರೆ. ಮೃತರಿಗೆ ಪತ್ನಿ, ಇಬ್ಬರು ಮಕ್ಕಳಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

{ ಯದುವೀರ್ ಒಡೆಯರ್ } ಸಂಸದರು

ಕನ್ನಡತನದ ಗಂಧ ಗಾಳಿ ಗೊತ್ತಿಲ್ಲದ ಪರಭಾಷಾ ನಟಿ ತಮನ್ನಾ ಅವರನ್ನು ನಮ್ಮ ಮೈಸೂರು ಗಂಧದ ಸೋಪಿನ ಸಂಸ್ಥೆಗೆ ರಾಯಭಾರಿ ಮಾಡುವ ಅಗತ್ಯವೇನಿತ್ತು ? ಸರಕಾರ ಕೂಡಲೇ ಈ ನೇಮಕ ರದ್ದುಗೊಳಿಸಬೇಕು. ಕನ್ನಡಿಗರ 6.20 ಕೋಟಿ ರು. ಸಂಭಾವನೆ ಹಣ ಉಳಿಸಲಿ. ಗ್ಯಾರಂಟಿ ಯೋಜನೆಗಳನ್ನು ಘೋಷಿಸಿ ಜನರಿಗೆ ನೀಡದೇ ಮಾತು ತಪ್ಪಿರುವ ಸರಕಾರ, ಈಗ ಪರಭಾಷೆ ನಟಿಗೆ ಮಣೆ ಹಾಕಿರುವುದು ಸರಿಯಲ್ಲ.

ಕೆ.ಆರ್.ನಗರದಲ್ಲಿ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ | ಮುಖ್ಯಮಂತ್ರಿ ಸವಾಲು

ವಿಪಕ್ಷಗಳು ಅಭಿವೃದ್ಧಿ ಚಾಲನೆ ನೋಡಲಿ

ಕೆ. ಆರ್. ನಗರ: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನೀವು ಆಯ್ಕೆ ಮಾಡಿದ ಜನಪ್ರತಿನಿಧಿ ನಿಮ್ಮ ಪರವಾಗಿ ಕೆಲಸ ಮಾಡಿದರೆ ಅವನೇ ಒಳ್ಳೆಯ ಶಾಸಕನಾಗುತ್ತಾನೆ ಎಂದು ಶಾಸಕ ಡಿ ರವಿಶಂಕರ್ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮೆಚ್ಚುಗೆಯ ಮಾತುಗಳನ್ನಾಡಿದರು.

ಅವರು ಕೆ ಆರ್ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ/ಚಾಲನೆ ಕಾರ್ಯಕ್ರಮದಲ್ಲಿ ಉದ್ಘಾಟನೆ ಮಾಡಿ ಮಾತನಾಡಿದರು.

ಜೆಡಿಎಸ್ ಬಿಜೆಪಿ ಗ್ಯಾರಂಟಿಯ ಯೋಜನೆಗಳಿಗೆ ಹಣ ಬಳಕೆ ಮಾಡಿಕೊಂಡಿದ್ದು ಅಭಿವೃದ್ಧಿ ಕುಂಠಿತವಾಗಿದೆ ಎಂದು ಟೀಕೆ ಮಾಡುವವರು. ಈ ಕಾರ್ಯಕ್ರಮ ಬಂದು ನೋಡಲಿ. ಕೆ ಆರ್ ನಗರ ವಿಧಾನಸಭಾ ಕ್ಷೇತ್ರದಲ್ಲಿ 513ಕೋಟಿಗಳ ಕಾಮಗಾರಿಗೆ ಚಾಲನೆ ಮಾಡುತಿದ್ದೇವೆ ಎಂದು ಬಿಜೆಪಿ ಜೆಡಿಎಸ್ ಪಕ್ಷಗಳಿಗೆ ಪರೋಕ್ಷವಾಗಿ ಎಚ್ಚರಿಕೆಯ ಮಾತುಗಳನ್ನಾಡಿದರು.

ಮತ್ತೆ ಅಧಿಕಾರಕ್ಕೆ : ಬಿಜೆಪಿ ಪಕ್ಷ ಯಾವಾಗಲೂ ಜನರಿಂದ ಆಯ್ಕೆಯಾಗಿ ಅಧಿಕಾರಕ್ಕೆ ಬಂದಿಲ್ಲ. ಹಿಂಬಾಗಿಲಿನಿಂದ ಶಾಸಕರ ಖರೀದಿ ಮಾಡಿ ಅಧಿಕಾರಕ್ಕೆ ಬಂದಿದೆ. ಈಗ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು ಒಂದಾಗಿ ಮುಂದೆ ಆಧಿಕಾರಕ್ಕೆ ಬರುವ ಕನಸು ಕಾಣುತ್ತಿದ್ದಾರೆ. ಆದರೆ ಮುಂದಿನ ಬಾರಿಯೂ ಸಹ ಕಾಂಗ್ರೆಸ್ ಬಹುಮತದೊಂದಿಗೆ ಅಧಿಕಾರ ಹಿಡಿಯಲಿದೆ ಎಂದು ಭವಿಷ್ಯ ನುಡಿದರು.

ಚುನಾವಣೆ ಸಮಯದಲ್ಲಿ ನಾವು ಹಾಕಿಕೊಂಡ 593 ಕಾರ್ಯಕ್ರಮಗಳಲ್ಲಿ ಎರಡು ವರ್ಷದ ಅವಧಿಯಲ್ಲಿ 242 ಭರವಸೆಗಳನ್ನು ಈಡೇರಿಸಿ ದ್ದೇವೆ. ಉಳಿದ ಮೂರು ವರ್ಷದಲ್ಲಿ ಇನ್ನುಳಿದ ಭರವಸೆಗಳನ್ನು ಈಡೇರಿಸುತ್ತೇವೆ. ನಮ್ಮದು ನುಡಿದಂತೆ ನಡೆಯುವ, ಕೊಟ್ಟ ಭರವಸೆಗಳನ್ನು ಈಡೇರಿಸುವ ಸರಕಾರ. ಬಿಜೆಪಿ ಜೆಡಿಎಸ್ ಅವರಂತೆ ಸುಳ್ಳು ಹೇಳಿಕೊಂಡು ತಿರುಗುವುದು ನಮ್ಮ ಜಾಯಮಾನ ಅಲ್ಲ ಎಂದು ತಿಳಿಸಿದರು.

ವಿಪಕ್ಷಗಳಿಗೆ ಹೊಟ್ಟೆಕಿಚ್ಚು: ನಮ್ಮ ಅಭಿವೃದ್ಧಿಯನ್ನು ಸಹಿಸದೆ ಕಾಂಗ್ರೆಸ್ ಸರಕಾರ ದಿವಾಳಿಯಾಗಿದೆ. ಪಾಪರ್ ಆಗಿದೆ ಎಂದು ಟೀಕೆ ಮಾಡುತ್ತಾ ಸುಳ್ಳು ಹೇಳುತ್ತಾ ಈಗ ಜನಾಕ್ರೋಶ ಎಂಬ ಹೆಸರಿನಲ್ಲಿ ಹೊಟ್ಟೆಕಿಚ್ಚಿನಿಂದ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಇದು ಜನಕ್ರೋಶವಲ್ಲ ಹೊಟ್ಟೆ ಉರಿ ಕ್ರೋಶ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಜೆಪಿ ಸರ್ಕಾರ ನಾಲ್ಕು ವರ್ಷದ ಅವಧಿಯಲ್ಲಿ ಎರಡು ಲಕ್ಷದ ಎಪ್ಪತ್ತು ಸಾವಿರ ಕೋಟಿ ರೂಗಳ ಹಣವನ್ನು ಕಾರ್ಯಕ್ರಮಕ್ಕೆ ಘೋಷಣೆಯನ್ನು ಮಾಡಿ ಆ ಕಾರ್ಯಕ್ರಮಗಳಿಗೆ ಹಣ ನೀಡದೆ ಹಣ ಲೂಟಿ ಮಾಡಿದ ಬಿಜೆಪಿಗರು ಆ ಕಾರ್ಯಕ್ರಮಗಳಿಗೆ ನೀಡಿದ ಹಣದ ಹೊರೆಯನ್ನು ನಾವೇ ಹೊತ್ತು ಕೊಂಡಿದ್ದೆವು ಎಂದು ತಿಳಿಸಿದರು.

ಜಿಎಸ್‌ಟಿ ತೆರಿಗೆ ಸಾಧನೆ: ತೆರಿಗೆ ವಸೂಲಾತಿಯಲ್ಲಿ ದೇಶದಲ್ಲಿಯೇ ಕರ್ನಾಟಕ ಎರಡನೇ ಸ್ಥಾನದಲ್ಲಿದ್ದು ಮಹಾರಾಷ್ಟ್ರ ಮೊದಲನೇ ಸ್ಥಾನದಲ್ಲಿದೆ. ಆದರೆ ಮುಂದಿನ ವರ್ಷದಲ್ಲಿ ತೆರಿಗೆ ಸಂಗ್ರಹದಲ್ಲಿ ಮೊದಲನೆ ಸ್ಥಾನದಲ್ಲಿ ಬರಲಿದೆ ಅದನ್ನೇಕೆ ಬಿಜೆಪಿಯವರು ಹೇಳುತ್ತಿಲ್ಲ. ಕೆ ಆರ್ ನಗರ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ಮತ್ತೆ ಅನುದಾನವನ್ನು ನೀಡುವ ಭರವಸೆ ನೀಡಿದರು.

ಶಾಸಕ ಡಿ.ರವಿಶಂಕರ್ ಮಾತನಾಡಿ, ನನ್ನನ್ನು ನಂಬಿ ನಮ್ಮ ಕುಟುಂಬಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೂರು ಬಾರಿ ಕಾಂಗ್ರೆಸ್ ಪಕ್ಷದ ಟಿಕೆಟ್ ನೀಡಿ ಶಾಸಕನಾಗಲು ಅವಕಾಶ ನೀಡಿದ್ದಾರೆ. ಜೊತೆಗೆ ಈ ಕ್ಷೇತ್ರಕ್ಕೆ ಅತಿ ಹೆಚ್ಚು ಅನುದಾನವನ್ನು ನೀಡಿರುವ ಮುಖ್ಯಮಂತ್ರಿಗಳಿಗೆ ಈ ಕ್ಷೇತ್ರದ ಜನತೆಯ ಪರವಾಗಿ ಅಭಿನಂದಿಸುತ್ತೇನೆ ಎಂದು ತಿಳಿಸಿದರು. ನನ್ನ ಎರಡು ವರ್ಷದ ಅವಧಿಯಲ್ಲಿ ಎಂಟು ನೂರು ಕೋಟಿಗೂ ಹೆಚ್ಚು ಅನುದಾನವನ್ನು ತಂದಿದ್ದೇನೆ. ಇಂದು 400 ಕೋಟಿಗೂ ಹೆಚ್ಚು ವೆಚ್ಚದ ಕಾಮಗಾರಿಗಳ ಶಂಕುಸ್ಥಾಪನೆ ಆಗಿದೆ. 100 ಕೋಟಿ ಮೊತ್ತದ ಕಾಮಗಾರಿ ಮುಖ್ಯಮಂತ್ರಿಯಿಂದ ಉದ್ಘಾಟನೆ ಮಾಡಿಸಲಾಗಿದೆ ಎಂದು ತಿಳಿಸಿದರು.

ಕಳೆದ 15 ವರ್ಷಗಳಿಂದ ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕರಿಲ್ಲದೆ ಕಾಂಗ್ರೆಸಿಗೆ ಹೆಚ್ಚು ಮತ ನೀಡಿದ ಕಾರಣದಿಂದ ಹಿಂದಿನ ಶಾಸಕರು ಕಡೆಗಣಿಸಿದ ಗ್ರಾಮಕ್ಕೆ ಅಭಿವೃದ್ಧಿಗಾಗಿ ಹೆಚ್ಚು ಅನುದಾನವನ್ನು ನೀಡುವಂತೆ ಸಿಎಂಗೆ ಶಾಸಕರು ಮನವಿ ಮಾಡಿದರು.

ಕೃಷಿ ಸಚಿವ ಚೆಲುವರಾಯಸ್ವಾಮಿ, ನಗರ ಅಭಿವೃದ್ಧಿ ಸಚಿವ ಭೈರತಿ ಬಸವರಾಜ್ ಮಾತನಾಡಿದರು. ವೇದಿಕೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್ ಸಿ ಮಹದೇವಪ್ಪ. ರೇಷ್ಮೆ ಸಚಿವ ಕೆ ವೆಂಕಟೇಶ್. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್. ಸಣ್ಣ ನೀರಾವರಿ ಸಚಿವ ಬೋಸರಾಜ್. ಶಾಸಕರುಗಳಾದ ಅನಿಲ್ ಚಿಕ್ಕಮಾದು. ಕೆ ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಡಾ. ಯತೀಂದ್ರ ಸಿದ್ದರಾಮಯ್ಯ, ಡಾ ಡಿ ತಿಮ್ಮಯ್ಯ. ಪುರಸಭಾ ಅಧ್ಯಕ್ಷ ಶಿವು ನಾಯಕ್. ಉಪಾಧ್ಯಕ್ಷ ವಸಂತಮ್ಮ. ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್. ಕೆಪಿಸಿಸಿ ಸದಸ್ಯರಾದ ದೊಡ್ಡ ಸ್ವಾಮಿಗೌಡ, ಜಿಲ್ಲಾಧ್ಯಕ್ಷ ಡಾ. ವಿಜಯಕುಮಾರ್, ಜಿಲ್ಲಾಧಿಕಾರಿ ಜಿ ಲಕ್ಷ್ಮಿಕಾಂತ್ ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್ ಇದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಸ್ತುವಾರಿ ಸಚಿವ ಡಾ. ಹೆಚ್ ಸಿ ಮಹದೇವಪ್ಪ, ಶಾಸಕ ಡಿ ರವಿಶಂಕರ್, ಸಚಿವರು ಶಾಸಕರು ಕಾರ್ಯಕ್ರಮ ಉದ್ಘಾಟಿಸುತ್ತಿರುವುದು.

ಐನೂರು ಕೋಟಿ ಮಹಿಳೆಯರು ಉಚಿತ ಪಯಣ

ಕರ್ನಾಟಕದಲ್ಲಿ ಐದು ಗ್ಯಾರಂಟಿಗಳನ್ನು ಜಾರಿಗೆ ತಂದು ರಾಜ್ಯದ ಐದು ಕೋಟಿ ಜನರಲ್ಲಿ ಮೂರುವರೆ ಕೋಟಿ ಮಹಿಳೆಯರು ಉಚಿತವಾಗಿ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಕಳೆದ ಎರಡು ವರ್ಷದಲ್ಲಿ ಐನೂರು ಕೋಟಿ ಜನ ಉಚಿತವಾಗಿ ಪ್ರಯಾಣ ಮಾಡಿದ್ದು ಪ್ರತಿದಿನ ಅರವತ್ತು ಲಕ್ಷ ಮಹಿಳೆಯರು ಇದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ ಎಂದು ಸಿಎಂ ತಿಳಿಸಿದರು.

ಅಂತರಿಕ್ಷ ವೈದ್ಯಕೀಯ ಸೈನ್ಸ್ ಜೆಎಸ್‌ಎಸ್ ಸಾಧನೆ

ಮೈಸೂರು: ಅಂತರಿಕ್ಷ ವೈದ್ಯಕೀಯ ಸಂಶೋಧನೆಯಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಸಂಸ್ಥೆ ಮಹತ್ವದ ಹೆಜ್ಜೆ ಇರಿಸಿದೆ.

ಅಂತರಿಕ್ಷ ವೈದ್ಯಕೀಯ ಸಂಶೋಧನೆಯತ್ತ ಮಹತ್ವದ ಹೆಜ್ಜೆಯನ್ನಿಟ್ಟಿರುವ ಜೆಎಸ್‌ಎಸ್ ಉನ್ನತ ಶಿಕ್ಷಣ ಸಂಶೋಧನಾ ಅಕಾಡೆಮಿ, ಮತ್ತು ಅದರ ಅಂಗಸಂಸ್ಥೆಯಾದ ಊಟಿಯಲ್ಲಿರುವ ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯದ ಫಾರ್ಮಸ್ಯೂಟಿಕ್ಸ್ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥರಾದ ಡಾ ಕೆ ಗೌತಮರಾಜನ್ ರಷ್ಯಾದ ಮಾಸ್ಕೋದಲ್ಲಿ ಈ ಕುರಿತು ಯಶಸ್ವಿ ತರಬೇತಿ ನಡೆಸಿದ್ದಾರೆ.

ಡಾ ಗೌತಮ ರಾಜನ್ ಅವರು ಅಂತರಿಕ್ಷ ಶರೀರ ವಿಜ್ಞಾನದ ಪ್ರಮುಖ ಅಂಶಗಳಲ್ಲಿ ತಾಂತ್ರಿಕ ತರಬೇತಿ ಪಡೆದಿದ್ದಾರೆ. ಅಲ್ಲದೆ, ಶೈಕ್ಷಣಿಕ ಉಪನ್ಯಾಸಗಳನ್ನು ನೀಡಿ ಭವಿಷ್ಯದ ಸಹಯೋಗಕ್ಕಾಗಿ ಅಲ್ಲಿನ ಸಂಸ್ಥೆಗಳೊಂದಿಗೆ ಒಪ್ಪಂದ ಕುರಿತು ಚರ್ಚೆ ನಡೆಸಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಜೆಎಸ್‌ಎಸ್ ಎಹೆಚ್‌ಇಆರ್ ಕುಲಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಜಿ, ''ನಿಜವಾದ ಶಿಕ್ಷಣ ಮತ್ತು ಸಂಶೋಧನೆಯು ಸಾಂಪ್ರದಾಯಿಕ ಚೌಕಟ್ಟನ್ನು ಮೀರಿ, ಮಾನವೀಯತೆಗೆ ಉಪಕಾರಿಯಾಗುವ ಹೊಸ ಕ್ಷೇತ್ರಗಳಲ್ಲಿ ಬೆಳೆಯುವ ಅವಶ್ಯಕತೆ ಇದೆ. ಬಾಹ್ಯಾಕಾಶ ಔಷಧವು ನಮ್ಮ ಪ್ರಾಚೀನ ಜ್ಞಾನ ಮತ್ತು ಆಧುನಿಕ ವಿಜ್ಞಾನವು ಮೇಳೈಸುವ ಒಂದು ಕ್ಷೇತ್ರವಾಗಿದ್ದು, ಜೆಎಸ್ ಎಸ್ ಪರಿವರ್ತನ ವಿಜ್ಞಾನವನ್ನು ಮುಂಚೂಣಿಯಲ್ಲಿರಿಸುವ ಈ ಪ್ರಯತ್ನವನ್ನು ಬೆಂಬಲಿಸಲು ನನಗೆ ಸಂತೋಷವಾಗುತ್ತದೆ ಎಂದಿದ್ದಾರೆ.

ಕುಲಪತಿ ಡಾ ಬಸವನಗೌಡಪ್ಪ ಅವರು ಪ್ರತಿಕ್ರಿಯಿಸಿ, ''ಅಂತರಿಕ್ಷ ಹಾಗೂ ವೈದ್ಯಕೀಯ ಸಂಶೋಧನೆಯ ಕ್ಷೇತ್ರಗಳಲ್ಲಿಯೂ ಭಾರತೀಯ ಸಂಸ್ಥೆಗಳು ಬೆಳೆಯಬೇಕಾದ ಸಮಯ ಬಂದಿದ್ದು, ಈ ಬೆಳವಣಿಗೆಯೊಂದಿಗೆ ಜೆಎಸ್‌ಎಸ್ ಎಹೆಚ್‌ಇಆರ್ ಹೊಸ ಭಾಷ್ಯವನ್ನು ಬರೆಯುತ್ತಿರುವುದು ಸಂತಸದ ಸಂಗತಿ ಎಂದು ಅಭಿಪ್ರಾಯಪಟ್ಟಿದ್ದಾರೆ.



ಡಾ ಕೆ ಗೌತಮರಾಜನ್ ತರಬೇತಿ ನೀಡುತ್ತಿರುವುದು.

ದಲಿತ ಯುವಕನ ಹತ್ಯೆ: ಪ್ರತಿಭಟನೆ

ಕೆ.ಆರ್.ಪೇಟೆ: ತಾಲೂಕಿನ ಕತ್ತರಘಟ್ಟ ಗ್ರಾಮದಲ್ಲಿ ಸವರ್ಣೀಯ ವ್ಯಕ್ತಿಯೊಬ್ಬ ಜಮೀನು ಕಬಳಿಸಲು ದೌರ್ಜನ್ಯ ನಡೆಸಿ ಬೆಂಕಿಯಲ್ಲಿ ಬೇಯುತ್ತಿದ್ದ ಹುಲ್ಲಿನ ಮೆದೆಗೆ ತಳ್ಳಿ ದಲಿತ ಯುವಕನನ್ನು ಜೀವಂತ ದಹನ ಮಾಡಿರುವ ಪ್ರಕರಣವನ್ನು ಎಸ್.ಐ.ಟಿ ತನಿಖೆ ಆಗಬೇಕು.

ಆರೋಪಿ ಬಂಧಿಸಬೇಕು. ಪೊಲೀಸ್ ಅಧಿಕಾರಿಗಳ ಅಮಾನತು ಮಾಡಬೇಕು ಎಂದು ಆಗ್ರಹಿಸಿ ಇದೇ ಮೇ.27ರಂದು ಕೆ.ಆರ್.ಪೇಟೆ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿರುವುದಾಗಿ ದಸಂಸ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರೆಗೋಡು ತಿಳಿಸಿದರು. ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

ದಲಿತ ಯುವಕ ಜಯಕುಮಾರ್ ಕತ್ತರಘಟ್ಟ ಜಮಾಬಂದಿಗೆ ಸೇರಿದ 3ಎಕರೆ ಜಮೀನನ್ನು ಹತ್ತಾರು ವರ್ಷಗಳಿಂದ ಬೇಸಾಯ ಮಾಡಿಕೊಂಡು ಬರುತ್ತಿದ್ದರು. ಸದರಿ ಜಮೀನನ್ನು ಕಬಳಿಸುವ ಹುನ್ನಾರದಿಂದ ಆರೋಪಿ ಅನಿಲ್‌ಕುಮಾರ್ ಆಗಾಗ್ಗೆ ಜಗಳ ಮಾಡುತ್ತಿದ್ದನು. ಇದೇ ರೀತಿ ಮೇ 15ರಂದು ದಲಿತ ಯುವಕ ಜಯಕುಮಾರ್ ಮೇಲೆ ಹಲ್ಲೆ ನಡೆಸಿ,ಕೊಲೆ ಬೆದರಿಕೆ ಹಾಕಿದ್ದನು. ಆಗ ಜಯಕುಮಾರ್ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆದರೆ ಪೊಲೀಸರು ಆರೋಪಿ ವಿರುದ್ಧ ಜಾತಿನಿಂದನೆ ಕೇಸು ದಾಖಲಿಸದೇ ಇರುವ ಕಾರಣ ಆರೋಪಿ ಮರುದಿನ ಹುಲ್ಲಿನ ಮೆದೆಗೆ ಬೆಂಕಿ ಹಾಕಿ ಜಯಕುಮಾರನಿಗೆ ಪೆಟ್ರೋಲ್ ಎರಚಿ ಬೆಂಕಿಗೆ ನೂಕಿ ಹತ್ಯೆ ಮಾಡಿರುತ್ತಾನೆ.

ಒಂದು ವೇಳೆ ಪೊಲೀಸರು ಗುರುವಾರವೇ ಪ್ರಕರಣ ದಾಖಲಿಸಿದ್ದರೆ ಈ ಘಟನೆಯೇ ನಡೆಯುತ್ತಿರಲಿಲ್ಲ. ಕೂಡಲೇ ಸೂಕ್ತ ತನಿಖೆ ನಡೆಸಿ ನ್ಯಾಯ ಕೊಡಿಸಬೇಕು ಎಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಚಾಲಕರಾದ ಅಂಕಪ್ಪ,ಮದ್ದೂರು ಶಿವು,ಲಕ್ಷ್ಮೀಪುರ ರಂಗಸ್ವಾಮಿ, ಬಂಡಿಹೊಳೆ ರಮೇಶ್, ಬಸ್ತಿ ರಂಗಪ್ಪ, ತಾ.ಒಕ್ಕೂಟದ ಅಧ್ಯಕ್ಷ ರಾಜಯ್ಯ, ಪುರಸಭಾ ಸದಸ್ಯ ಡಿ.ಪ್ರೇಮಕುಮಾರ್, ಛಲವಾದಿ ಮಹಾಸಭಾ ಗೌರವಾಧ್ಯಕ್ಷ ಸೋಮಸುಂದರ್, ಛಲವಾದಿ ಮಹಾಸಭಾ ಜಿಲ್ಲಾಧ್ಯಕ್ಷ ಮಾಂಬಳ್ಳಿ ಜಯರಾಮ್ ಇದ್ದರು.

ಹವಾಮಾನ ಬದಲಾವಣೆ ಕುರಿತ ಕಾರ್ಯಾಗಾರ

ಚಾಮರಾಜನಗರ: ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಕುರಿತು ಕ್ರಿಯಾಯೋಜನೆ ತರಬೇತಿ ಹಾಗೂ ಹವಾಮಾನ ಬದಲಾವಣೆಯಲ್ಲಿ ವಿವಿಧ ಇಲಾಖೆಗಳು ವಹಿಸಬೇಕಾದ ಪಾತ್ರ ಕುರಿತು ಅಧಿಕಾರಿಗಳಿಗೆ ಕಾರ್ಯಾಗಾರ ನಗರದ ಜಿಪಂ ಸಭಾಂಗಣದಲ್ಲಿ ನಡೆಯಿತು.

ಜಿಪಂ ಸಿಇಒ ಮೋನಾ ರೋತ್ ಮಾತನಾಡಿ, ಎಲ್ಲಾ ಇಲಾಖೆಯ ಅಧಿಕಾರಿ, ಸಿಬ್ಬಂದಿ ತರಬೇತಿಯ ಸದುಪಯೋಗ ಪಡಿಸಿಕೊಂಡು ತಮ್ಮ ಇಲಾಖಾ ಹಂತದಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸಿ ಅನುಷ್ಠಾನಗೊಳಿಸುವಂತೆ ಸಲಹೆ ನೀಡಿದರು.

ಜಿಪಂ ಉಪಕಾರ್ಯದರ್ಶಿ ಶ್ರುತಿ ಡಿ.ಸಿ ಅವರು ಮಾತನಾಡಿ, ಹವಾಮಾನ ಬದಲಾವಣೆಯ ಕುರಿತು ತರಬೇತಿಯ ಅವಶ್ಯಕತೆ ಇದೆ. ವಿಶ್ವ ಪರಿಸರ ದಿನಾಚರಣೆಗೆ ಜಿಲ್ಲೆಯ ಎಲ್ಲಾ ಗ್ರಾಮಪಂಚಾಯಿತಿಗಳಲ್ಲಿ ಜೂನ್ 5 ರವರೆಗೆ ಪರಿಸರ ಮತ್ತು ಸ್ವಚ್ಛತಾ ಸಂಬಂಧಿತ ಜಾಗೃತಿ ಮತ್ತು ಅರಿವು ಹಮ್ಮಿಕೊಳ್ಳಲಾಗಿದ್ದು, ಆ ಮೂಲಕ ಪರಿಸರ ಸಂರಕ್ಷಣೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ ಎಂದು ತಿಳಿಸಿದರು. ತರಬೇತಿ ಮುಖ್ಯಸ್ಥರಾದ ಎಂ.ಎಚ್. ಲತಾ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಹವಾಮಾನ ಬದಲಾವಣೆಯ ಮುಖ್ಯ ಅಂಶಗಳನ್ನು ತಿಳಿಸಿ ಹವಾಮಾನ ಬದಲಾವಣೆ, ಕರ್ನಾಟಕ ರಾಜ್ಯ ಯೋಜನೆ ಕುರಿತು ಸುದೀರ್ಘ ವಿವರಣೆ ನೀಡಿದರು.

ಜೆಎಸ್‌ಎಸ್ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ ಡಾ. ಶಿವರಾಜ್ ಮಾತನಾಡಿದರು. ಮುಖ್ಯ ಯೋಜನಾ ಅಧಿಕಾರಿ ದೀಪಾ, ಸಂಪನ್ಮೂಲ ವ್ಯಕ್ತಿಗಳಾದ ಡಾ. ಸರಿತಾ ಬೋಯ, ಎನ್. ಆರ್.ಡಿ.ಎಂ.ಎಸ್ ಪ್ರೋಜೆಕ್ಟ್ ಅಸೋಸಿಯೇಟ್ ಸಿ. ಕಾರ್ತಿಕ್ ಉಪಸ್ಥಿತರಿದ್ದರು.

ನಗರದ ಜಿಪಂ ಸಭಾಂಗಣದಲ್ಲಿ ಕಾರ್ಯಾಗಾರ ನಡೆಯಿತು.

ಬಾಲ್ಯವಿವಾಹ ತಡೆಗೆ ಸಂಕಲ್ಪ

ಚಾಮರಾಜನಗರ: ಸಾಮಾಜಿಕ ಪಿಡುಗು ಆಗಿ ಪರಿಣಮಿಸಿರುವ ಬಾಲ್ಯವಿವಾಹವನ್ನು ಸಂಪೂರ್ಣವಾಗಿ ತೊಡೆದು ಹಾಕಿ ಜಿಲ್ಲೆಯನ್ನು ಬಾಲ್ಯವಿವಾಹ ಮುಕ್ತವನ್ನಾಗಿಸುವ ಸಂಕಲ್ಪ ಮಾಡೋಣ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಹೇಳಿದರು.

ನಗರದ ಚಾಮರಾಜೇಶ್ವರ ದೇವಾಲಯ ಮುಂಭಾಗದಲ್ಲಿ ಜಿಲ್ಲಾಡಳಿತ, ಜಿ.ಪಂ, ಪೊಲೀಸ್ ಇಲಾಖೆ ಹಾಗೂ ಮಕ್ಕಳ ರಕ್ಷಣಾ ಆಯೋಗದ ಆಶ್ರಯದಲ್ಲಿ ನಡೆದ ಬೃಹತ್ ವಾಕಥಾನ್‌ಗೆ ಚಾಲನೆ ನೀಡಿ ಮಾತನಾಡಿದರು. ನವೆಂಬರ್ 14 ರವೇಳೆಗೆ ಚಾಮರಾಜನಗರ ಜಿಲ್ಲೆ ಬಾಲ್ಯವಿವಾಹ ಮುಕ್ತವಾಗಬೇಕೆಂಬ ಸಂಕಲ್ಪ ಮಾಡಿ ಈಗಾಗಲೇ ನಿರಂತರ ಜಾಗೃತಿ ಕಾರ್ಯಕ್ರಮಗಳಿಗೆ ರೂಪು ರೇಷೆ ತಯಾರಿಸಿ ಅನುಷ್ಠಾನ ಮಾಡುತ್ತಿದೆ. ಎಂದರು. ಖೋ ಖೋ ಕ್ರೀಡಾಪಟು ಚೈತ್ರ, ಪೋಷಕ ನಟ ಗಣೇಶ್ ರಾವ್, ಆಯೋಗದ ಸದಸ್ಯರಾದ ವೆಂಕಟೇಶ್, ಎಸ್ಪಿ ಡಾ.ಬಿ.ಟಿ.ಕವಿತಾ ಪಾಲ್ಗೊಂಡು ಮತನಾಡಿದರು. ಜಿಪಂ ಸಿಇಒ ಮೋನಾರೋತ್ ಪ್ರತಿಜ್ಞಾವಿಧಿ ಬೋಧಿಸಿದರು. ಜಿಲ್ಲಾನೌಕರರ ಸಂಘದ ಅಧ್ಯಕ್ಷೆ ಡಾ.ರೇಣುಕಾದೇವಿ, ಅಧಿಕಾರಿಗಳು, ವಿದ್ಯಾರ್ಥಿಗಳು, ಹಿರಿಯ ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿದ್ದರು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಬೃಹತ್ ವಾಕಥಾನ್‌ಗೆ ಚಾಲನೆ ನೀಡಿ ದರು.

ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣ ಕಲಿಕೆ ಮುಖ್ಯ

ತಿ.ನರಸೀಪುರ: ಪ್ರಸ್ತುತ ದಿನಗಳಲ್ಲಿ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಿಸಲು ವಿದ್ಯಾರ್ಥಿಗಳಿಗೆ ತಾಂತ್ರಿಕ ಕಲಿಕೆ ಬಹಳ ಮುಖ್ಯ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ವರುಣಾ ಕ್ಷೇತ್ರದ ಮುತ್ತತ್ತಿ ಗ್ರಾಮದಲ್ಲಿ ಪಿಡಬ್ಲ್ಯೂಡಿ ಇಲಾಖೆಯಡಿ ಶಾಲಾ ಕೊಠಡಿಗೆ 27.50 ಲಕ್ಷ ರೂ, ಯಡದೊರೆಯ ಸಿದ್ದಪ್ಪಾಜಿ ದೇಗುಲ ನಿರ್ಮಾಣಕ್ಕೆ 20 ಲಕ್ಷ ರೂ., ಕುರಿಸಿದ್ದನಹುಂಡಿದಲ್ಲಿ ದೇವಾಲಯಕ್ಕೆ 22 ಲಕ್ಷ ರೂ ಮತ್ತು ಕೆಲವು ಕಡೆ ಸಿ.ಸಿ.ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆಯನ್ನು ನೆರವೇರಿಸಿ ಮಾತನಾಡಿದರು.

ವಿದ್ಯಾರ್ಥಿಗಳಿಗೆ ಭೌದ್ಧಿಕ ಕ್ಷಮತೆ ಹೆಚ್ಚಿಸಲು ಪ್ರಸ್ತುತ ದಿನಗಳಲ್ಲಿ ತಾಂತ್ರಿಕ ಕೌಶಲವನ್ನು ಹೆಚ್ಚಿಸಲಾಗುತ್ತಿದೆ. ವಿದ್ಯಾರ್ಥಿಗಳು ಈ ಯೋಜನೆಯನ್ನು ಬಳಸಿಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು. ಕಾರ್ಯಕ್ರಮಗಳಲ್ಲಿ ನನಗೆ ಹಾರ-ತುರಾಯಿ ಹಾಕುವುದರ ಬದಲು ಬಡ ವಿದ್ಯಾರ್ಥಿಗಳಿಗೆ ಪುಸ್ತಕ ಹಾಗೂ ಪರಿಕರ ನೀಡಿ. ನನಗೆ ಸನ್ಮಾನ ಮಾಡಿದಷ್ಟೇ ಸಂತೋಷವಾಗುತ್ತದೆ. ಇದರಿಂದ ಭವಿಷ್ಯದಲ್ಲಿ ಮಕ್ಕಳಿಗೂ ಒಳ್ಳೆಯದಾಗುತ್ತದೆ ಎಂದರು. ತುಂಬಲ ಗ್ರಾಪಂ ಅಧ್ಯಕ್ಷ ರಾಮನಂಜ ಯ್ಯ,ಕಿರಗಸೂರು ಗ್ರಾಪಂ ಅಧ್ಯಕ್ಷ ನಿಂಗರಾಜು, ಮಾಜಿ ಜಿಪಂ ಸದಸ್ಯ ಕೆ. ಮಹದೇವು,ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ಮಾಜಿ ತಾ ಪಂ ಅಧ್ಯಕ್ಷ ಅಂದಾನಿ,ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷ ರಮೇಶ್, ಐಟಿಸಿ ಕಂಪನಿಯ ಯತೀಶ್ ಕುಮಾರ್, ಗ್ರಾಪಂ ಸದಸ್ಯರಾದ ಕಂಬಯ್ಯ, ಸರಸ್ವತಿ, ಶೇಖರ್, ಸತೀಶ್, ಡೇರಿ ಅಧ್ಯಕ್ಷ ಮರಯ್ಯ, ಚಂದ್ರಶೇಖರ್,ಮಾಜಿ ಎಪಿಎಂಸಿ ಅಧ್ಯಕ್ಷ ಅನಿಲ್ ಕುಮಾರ್, ವರುಣಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ ಇದ್ದರು.

ಸಿಂದೂರ: ತಿರಂಗಾ ಯಾತ್ರೆ

ಪಿರಿಯಾಪಟ್ಟಣ: ಆಪರೇಷನ್ ಸಿಂದೂರ ಇನ್ನೂ ಮುಗಿದಿಲ್ಲ, ಮತ್ತೊಮ್ಮೆ ಬಾಲ ಬಿಚ್ಚಿದರೆ ಪಾಕಿಸ್ತಾನ ನಿರ್ನಾಮವಾಗಲಿದೆ ಎಂದು ತಾಲೂಕು ಬಿಜೆಪಿ ಘಟಕದ ಅಧ್ಯಕ್ಷ ವಿ.ರಾಜೇಂದ್ರ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪದೇಪದೇ ಕಾಲು ಕೆರೆದು ಜಗಳಕ್ಕೆ ಬರುವ ಪಾಕಿಸ್ತಾನಕ್ಕೆ ಬುದ್ಧಿ ಕಲಿಸಬೇಕೆಂಬುದು ದೇಶದ ನಿಲುವಾಗಿತ್ತು. ಇದಕ್ಕೆ ಪ್ರದಾನಿ ಮೋದಿಯವರು ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಿದರು. ಜನರು ಬಯಸಿದ್ದನ್ನು ನಮ್ಮ ಸೈನಿಕರು ಮಾಡಿ ತೋರಿಸಿದ್ದಾರೆ, ಸೈನಿಕರ ಹಿಂದೆ ಇಡೀ ರಾಷ್ಟ್ರ ನಿಂತಿತ್ತು. ಹಾಗಾಗಿ ಭಾರತಾಂಬೆಯ ರಕ್ಷಣೆಗಾಗಿ ಹೋರಾಡಿದ ನಾಡಿನ ಹೆಮ್ಮೆಯ ಸೈನಿಕರಿಗೆ ಮಾನಸಿಕ ಸ್ಥೈರ್ಯ ತುಂಬುವ ಸಲುವಾಗಿ ಮಠಾಧೀಶರ ನೇತೃತ್ವದಲ್ಲಿ ಮೇ 24ರ ಬೆಳಿಗ್ಗೆ 9 ಗಂಟೆಗೆ ತಿರಂಗಾ ಯಾತ್ರೆ ಹಮ್ಮಿಕೊಳ್ಳಲಾಗಿದೆ. ಪಟ್ಟಣದ ಬಸವೇಶ್ವರ ವೃತ್ತದಿಂದ ಎಪಿಎಂಸಿ ಕಚೇರಿಯ ವರೆಗೆ ನಡೆಯಲಿದೆ ಎಂದರು.

ಮಾಜಿ ಶಾಸಕ ಎಚ್.ಸಿ.ಬಸವರಾಜ್ ಹಾಗೂ ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ ಮಾತನಾಡಿ, ನಮ್ಮ ಯುವಕರು ದೇಶಾಭಿಮಾನ ಬೆಳಸಿಕೊಳ್ಳುವ ಅಗತ್ಯವಿದೆ. ದೇಶದ ಸುರಕ್ಷತೆಗೆ ನಮ್ಮ ಇಡೀ ಸೈನಿಕರು ತಮ್ಮ ಕುಟುಂಬ ತೊರೆದು ಗಡಿಯಲ್ಲಿ ಶತ್ರುಗಳೊಂದಿಗೆ ನಿರಂತರ ಹೋರಾಡುತ್ತಾರೆ. ಭಾರತೀಯ ವೀರ ಯೋಧರಿಗೆ ಧೈರ್ಯ ತುಂಬ ಸಲುವಾಗಿ ತಿರಂಗ ಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ತಾಲ್ಲೂಕು ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್. ರವಿ, ಮಾಜಿ ಅಧ್ಯಕ್ಷರಾದ ಎಂ.ಎಂ.ರಾಜೇಗೌಡ, ಆರ್. ಟಿ.ಸತೀಶ್, ಪದಾಧಿಕಾರಿಗಳಾದ ಟೈಲರ್ ರಾಘವೇಂದ್ರ, ಲೋಕ ಪಾಲಯ್ಯ, ವಿಶ್ವನಾಥ್, ಚನ್ನಬಸವರಾಜ್, ಮದನ ಗೋಪಾಲ್ ರಾಜೇ ಅರಸ್, ನಳಿನಿ, ರಮೇಶ್ ಉಪಸ್ಥಿತರಿದ್ದರು.

ಸಂಶೋಧನಾರ್ಥಿಗಳ ಧರಣಿ 4ನೇ ದಿನಕ್ಕೆ

ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಮಾರ್ಗದರ್ಶಕರ ಕೊರತೆ ಹೇರಳವಾಗಿದ್ದು ಹೊಸದಾಗಿ ಪಿಎಚ್.ಡಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ತೊಡಕಾಗಿದೆ ಎಂದು ಆರೋಪಿಸಿ ಮೈಸೂರು ವಿವಿ ಸಂಶೋಧನಾ ವಿದ್ಯಾರ್ಥಿಗಳ ಸಂಘಟನೆ ವತಿಯಿಂದ ನಡೆಸುತ್ತಿರುವ ಅಹೋರಾತ್ರಿ ಧರಣಿ ನಾಲ್ಕನೇ ದಿನವೂ ಮುಂದುವರಿದಿದೆ. ಕ್ರಾಫರ್ಡ್ ಭವನದ ಆವರಣದಲ್ಲಿ ಸಂಶೋಧನಾ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದಾರೆ. ಪ್ರಾಧ್ಯಾಪಕರ ಕೊರತೆ ಪಿಎಚ್.ಡಿ, ಕೆ-ಸೆಟ್, ನೀಟ್, ಜೆಆರ್‌ಎ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ವಿಶ್ವವಿದ್ಯಾನಿಲಯದಲ್ಲಿ ಪಿಎಚ್.ಡಿ ಮಾಡಲು ಅವಕಾಶ ಇಲ್ಲದಂತಾಗಿದೆ. ಆದ್ದರಿಂದ ಈಗಿರುವ ಖಾಯಂ ಪ್ರಾಧ್ಯಾಪಕರ ಬಳಿಯೇ ಮಾರ್ಗದರ್ಶನ ಪಡೆಯಲು ಅವಕಾಶ ಕೊಡಬೇಕು. ಪಿಎಚ್.ಡಿ ಅಭ್ಯರ್ಥಿಗಳ ಹಿತದೃಷ್ಟಿಯಿಂದ ಹೆಚ್ಚುವರಿ ಸೀಟುಗಳನ್ನು ನೀಡಿ ಸಂಶೋಧನೆ ಮಾಡಲು ಅವಕಾಶ ನೀಡಬೇಕು ಎಂದು ಆಗ್ರಹಿಸಿದರು. ಪಿಎಚ್.ಡಿ ಮಾರ್ಗದರ್ಶನಕ್ಕೆ ಹೆಚ್ಚುವರಿ ದಾಖಲಾತಿ ಕೊಡಬೇಕು. ವಿಶ್ವವಿದ್ಯಾನಿಲಯದಲ್ಲಿ ಸಾಮಾಜಿಕ ವಿಜ್ಞಾನದಲ್ಲಿ ಪಿಎಚ್.ಡಿ ಮಾರ್ಗದರ್ಶಕರ ಕೊರತೆ ಇದ್ದು, ಕೇಂದ್ರದ ಯುಜಿಸಿ ಮಾರ್ಗಸೂಚಿ ಪ್ರಕಾರ ಇತರೆ ವಿವಿಗಳ ಸಾಮಾಜಿಕ ಅಧ್ಯಯನ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರುಗಳಿಗೆ ನೀಡಿರುವಂತೆ ಇಲ್ಲಿಯೂ ನೀಡಬೇಕು. ಶಿವಶಂಕರ್, ವಿಶ್ವಪ್ರಸಾದ್, ಮರಳಿ ಮಹೇಶ್ ಇದ್ದರು.

ಶ್ರೀ ಅವಧೂತ ದತ್ತ ಪೀಠ
ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ
ದತ್ತನಗರ, ಮೈಸೂರು, ದೂರವಾಣಿ–2486486

ಪರಮಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ
83ನೇ ಜನ್ಮದಿನೋತ್ಸವ
ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 26ನೇ ಬ್ರಹ್ಮೋತ್ಸವ
ನಾದಮಂಟಪದ 27ನೇ ವಾರ್ಷಿಕೋತ್ಸವ
ಕಾರ್ಯಕ್ರಮಗಳು – ದಿನಾಂಕ 25.5.2025 ರಿಂದ 1.6.2025

ಪ್ರತಿದಿನ ಬೆಳಗ್ಗೆ 8.00 ಶ್ರೀಚಕ್ರ ಪೂಜೆ, ಮಹಾಗಣಪತಿ ಹೋಮ, ಇತ್ಯಾದಿ

25.05.2025, ಭಾನುವಾರ -
ಬೆಳಗ್ಗೆ 8.00 – ಗಣಪತಿ ಹೋಮ
ಸಂಜೆ 6.00 – ಪರಮಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 83ನೇ ಜನ್ಮದಿನೋತ್ಸವ ಮತ್ತು ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 26ನೇ ಬ್ರಹ್ಮತ್ಸವ ಉದ್ಘಾಟನೆ
ಸಾನಿಧ್ಯ : ಪೂಜ್ಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ

26.5.2025, ಸೋಮವಾರ ಪರಮ ಪೂಜ್ಯ ಶ್ರೀ ಸ್ವಾಮೀಜಿಯವರ 83ನೇ ಜನ್ಮದಿನೋತ್ಸವ
ಬೆಳಗ್ಗೆ 9.00 – ಪರಮ ಪೂಜ್ಯ ಶ್ರೀ ಸ್ವಾಮೀಜಿಯವರಿಗೆ ಪ್ರತ್ಯಕ್ಷ ಪಾದಪೂಜೆ
10.00 – ಚೈತನ್ಯಾರ್ಚನೆ ದತ್ತ ಪೀಠ ಪ್ರಶಸ್ತಿ ಪ್ರದಾನ :
ವೇದ ನಿಧಿ– ಶ್ರೀ ವಿಷ್ಣು ಭಟ್ಟ ಲಕ್ಷ್ಮೀನಾರಾಯಣ ಘನಪಾಠಿ.
ಶಾಸ್ತ್ರ ನಿಧಿ– ಡಾ|| ಜಿ.ಎಸ್.ವಿ. ದತ್ತಾತ್ರೇಯ ಮೂರ್ತಿ
ನಾದ ನಿಧಿ ಪಂ|| ವಿನಾಯಕ್ ತೊರ್ವಿ
ನಾದ ನಿಧಿ – ವಿ|| ಶಶಾಂಕ್ ಸುಬ್ರಮಣ್ಯಮ್
ನಾಟ್ಯ ನಿಧಿ – ವಿ|| ಟಿ.ಎಸ್. ಶ್ರೀಲಕ್ಷ್ಮಿ
ಆಸ್ಥಾನ ಶಿಲ್ಪಿ – ಶ್ರೀ ಕೃಷ್ಣಮೂರ್ತಿ
ಜಯಲಕ್ಷ್ಮಿ ಪುರಸ್ಕಾರ – ಶ್ರೀಮತಿ ಗಂಗಾವರಮ್ ವೇದಾವತಿ
ಜಯಲಕ್ಷ್ಮಿ ಪುರಸ್ಕಾರ – ಶ್ರೀಮತಿ ಗೀತಾ ಪಂಜಲ
ದತ್ತ ಪೀಠ ಬಂಧು – ಶ್ರೀ ಕಮಲ್ ಕರ್ಪೂರ
ದತ್ತ ಪೀಠ ಬಂಧು – ಶ್ರೀ ಕಂಟೇಟಿ ಶ್ರೀನಿವಾಸ್
ದತ್ತ ಪೀಠ ಬಂಧು ಶ್ರೀ ಎಸ್. ನಾಗರಾಜ
ಸಸ್ಯ ಬಂಧು – ಶ್ರೀಮತಿ ಸುಚಿತ ರೆಡ್ಡಿ
ಸಂಜೆ 3.00– ಕರ್ನಾಟಕ ಸಂಗೀತ – ವಿ|| ಗೋಪಿಕ ಪೂರ್ಣಿಮ ಮತ್ತು ವಿ|| ಮಲ್ಲಿಕಾರ್ಜುನ್
6.00 ನಾದಮಂಟಪದ 27ನೇ ವಾರ್ಷಿಕೋತ್ಸವ ಕಾರ್ಯಕ್ರಮಗಳ ಉದ್ಘಾಟನೆ
ಪರಮ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಸುತ್ತೂರು ಮಠ, ಸುತ್ತೂರು.
ದಿವ್ಯ ಸಾನಿಧ್ಯ : ಪರಮ ಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಪೂಜ್ಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ
7.00 ಕರ್ನಾಟಕ ಸಂಗೀತ ದ್ವಂದ್ವ ಗಾಯನ – ದತ್ತ ಪೀಠ ಆಸ್ಥಾನ ವಿದುಷಿಗಳಿಂದ ಸರ್ವಪಲ್ಲಿ ಸಹೋದರಿಯರು – ಡಾ|| ಶ್ರೇಯ ಮತ್ತು ಡಾ|| ರಾಜಲಕ್ಷ್ಮಿ

27.5.2025, ಮಂಗಳವಾರ-
ಸಂಜೆ 3.00 ಹಿಂದುಸ್ತಾನಿ ಸಂಗೀತ ವಿ|| ಕಲ್ಪನ ಸುಮಂತ್ ರಾಘವೇಂದ್ರ
7.00 ಕರ್ನಾಟಕ ಸಂಗೀತ ಗಾಯನ ವಿ|| ಕುನ್ನ ಕುಡಿ ಬಾಲಮುರಳಿ ಕೃಷ್ಣ

28.05.2025, ಬುಧವಾರ
ಸಂಜೆ 3.00 ಜುಗಲ್ಬಂದಿ ಸಂಗೀತ –ವಿ ಹೆರಿ ತ್ಯಾಗರಾಜು–ಪಿಟೀಲು ಮತ್ತು ವಿ|| ಪ್ರಮೋದ್ ಉಮಾಪತಿ–ಕೊಳಲು
7.00 ಕರ್ನಾಟಕ ಸಂಗೀತ ಗಾಯನ ವಿ|| ಶ್ರೀರಾಮ್ ಚೊನ್ನಲಗಡ್ಡ

29.5.2025, ಗುರುವಾರ
ಸಂಜೆ 3.00 ಕರ್ನಾಟಕ ಸಂಗೀತ ವಿ ವಿಕಾಸ್ ಮೈತ್ರೇಯ
7.00 ರಾಮಕಥಾ ವಿಷಯಾಧಾರಿತ ಏಕಪಾತ್ರ ಭರತನಾಟ್ಯ ವಿ|| ಶ್ರೀ ಸತ್ಯನಾರಾಯಣ ರಾಜು

30.5.2025, ಶುಕ್ರವಾರ
ಸಂಜೆ 3.00 ಕರ್ನಾಟಕ ಸಂಗೀತ ವಿ|| ರಾಮಪ್ರಭ ಯೆರ್ರಮಿಲ್ಲಿ
ಸಂಜೆ 7.00 ಸಪ್ತರ್ಷಿ ಸರೋವರದಲ್ಲಿ ಶ್ರೀ ದತ್ತ ವೆಂಕಟೇಶ್ವರ ಸ್ವಾಮಿ ತೆಪ್ಪೋತ್ಸವ

31.5.2025, ಶನಿವಾರ
ಬೆಳಗ್ಗೆ 10.00 ಅಂಗವಿಕಲರಿಗೆ ಸಹಾಯವಸ್ತುಗಳ ವಿತರಣೆ.
ಮೈಸೂರು ಪಿಂಜರಪೋಲ್ ಸೊಸೈಟಿಯವರಿಗೆ ರೂಮ್ ಕಟ್ಟಲು ಸಹಾಯ.
ಸಂಜೆ 7.00 ವಿ ರವೀಂದ್ರ ಗುರುರಾಜ್ ಕಟ್ಟೋಟಿ–ಹಾರ್ಮೋನಿಯಂ, ಇವರ ನೇತೃತ್ವದಲ್ಲಿ ವಿಶೇಷ ವಾದ್ಯ ಸಂಗೀತ ಗೋಷ್ಠಿ.

1.6.2025, ಭಾನುವಾರ
ಬೆಳಗ್ಗೆ 7.00 ದತ್ತಾತ್ರೇಯ, ಮೃತ್ಯುಂಜಯ ಮತ್ತು ಆಯುಷ್ಯ ಹೋಮ
9.00 ಔದುಂಬರ ಸಿಂಹಾಸನ ಅಧಿರೋಹಣ ಮತ್ತು ಭಕ್ತರಿಂದ ಸಮರ್ಪಣೆ.
6.00 ಆಶ್ರಮದ ಭಜನೆ ಮಂಡಲಿಯಿಂದ ಸ್ವಾಮೀಜಿಯ ಭಜನೆಗಳು.

ಪ್ರತಿ ದಿನ ಬೆಳಗ್ಗೆ 8.00 ಶ್ರೀ ಚಕ್ರ ಪೂಜೆ, ಸಂಜೆ 3.00 ಮತ್ತು 7.00 ರಿಂದ ಸಂಗೀತ ಕಾರ್ಯಕ್ರಮಗಳು ಸ್ಥಳ: ನಾದ ಮಂಟಪ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಮೈಸೂರು 570 025

ಎಲ್ಲರಿಗೂ ಸುಸ್ವಾಗತ

ದಿನಾಂಕ 26.5.2025 ರಿಂದ 31.5.2025 ರವರೆಗೆ, ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದಲ್ಲಿ 26ನೇ ಬ್ರಹ್ಮೋತ್ಸವ ಕಾರ್ಯಕ್ರಮಗಳು ನಡೆಯಲಿವೆ.
ಪ್ರತಿ ದಿನ: ಬೆಳಗ್ಗೆ 9.00-ಹೋಮ, ಪೂಜೆ, ಇತ್ಯಾದಿ ಮತ್ತು ಸಂಜೆ 5.00-ಶ್ರೀ ದತ್ತ ವೆಂಕಟೇಶ್ವರಸ್ವಾಮಿಗೆ ವಾಹನೋತ್ಸವ
(ದೇವಸ್ಥಾನ ಕಾರ್ಯಾಲಯ ದೂರವಾಣಿ:2483200)

ಇಂದಿನ ಪಂದ್ಯ

7.30 PM

ಡೆಲ್ಲಿ ಕ್ಯಾಪಿಟಲ್ಸ್ VS ಪಂಜಾಬ್ ಕಿಂಗ್ಸ್

ಸವಾಯಿ ಮಾನ್‌ಸಿಂಗ್ ಸ್ಟೇಡಿಯಂ, ಜೈಪುರ

ವಿಶ್ವ ದಾಖಲೆ ಬರೆದ ಒಲ್ಲಿ ಪೋಪ್!

ಇಲ್ಲಿನ ಟ್ರೆಂಟ್ ಬ್ರಿಡ್ಜ್ ಕ್ರೀಡಾಂಗಣದಲ್ಲಿ ಜಿಂಬಾಬ್ವೆ ವಿರುದ್ಧ ನಡೆಯುತ್ತಿರುವ ಏಕೈಕ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡದ ಬ್ಯಾಟ್ಸ್‌ಮನ್ ಒಲ್ಲಿ ಪೋಪ್ ಶತಕ ಸಿಡಿಸಿ ತಮ್ಮ ಟೆಸ್ಟ್ ಕ್ರಿಕೆಟ್ ವೃತ್ತಿ ಜೀವನದಲ್ಲಿ ವಿಶೇಷ ದಾಖಲೆ ಬರೆದಿದ್ದಾರೆ. ಅವರು ವಿಶ್ವದ ವಿಭಿನ್ನ ಎಂಟು ರಾಷ್ಟ್ರಗಳ ಎದುರು ಆರಂಭಿಕ ಶತಕವನ್ನು ಸಿಡಿಸಿದ ವಿಶ್ವದ ಮೊದಲ ಬ್ಯಾಟ್ಸ್‌ಮನ್ ಎಂಬ ವಿಶ್ವ ದಾಖಲೆಯನ್ನು ಬರೆದಿದ್ದಾರೆ. ಪಂದ್ಯದ ಮೊದಲ ದಿನ ಅಜೇಯ 169 ರನ್‌ಗಳನ್ನು ಸಿಡಿಸಿದ್ದ ಪೋಪ್ ಈ ಮೊತ್ತಕ್ಕೆ ಕೇವಲ ಎರಡು ರನ್ ಗಳಿಸಿ ಔಟಾದರು. 27ರ ಪ್ರಾಯದ ಬ್ಯಾಟ್ಸ್‌ಮನ್ ತಮ್ಮ ಆರಂಭಿಕ ಎಂಟು ಶತಕಗಳನ್ನು ವಿಭಿನ್ನ ಎದುರಾಳಿ ತಂಡಗಳ ವಿರುದ್ಧ ಬಾರಿಸಿದ ಮೊದಲ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ.

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಗುಜರಾತ್ (Q)	13	09	04	18
ಪಂಜಾಬ್ (Q)	12	08	03	17
ಬೆಂಗಳೂರು (Q)	13	08	04	17
ಮುಂಬೈ (Q)	13	08	05	16
ಡೆಲ್ಲಿ	13	06	06	13
ಲಖನೌ	13	06	07	12
ಕೋಲ್ಕತ್ತಾ	13	05	06	12
ಹೈದರಾಬಾದ್	13	05	07	11
ರಾಜಸ್ಥಾನ್	14	04	10	08
ಚೆನ್ನೈ	13	03	10	06

ಸ್ಕೋರ್ ಬೋರ್ಡ್

231/6 (20 ಓವರ್)

ಸನ್‌ರೈಸರ್ಸ್ ಹೈದರಾಬಾದ್		ರನ್	ಎಸೆತ
ಅಭಿಷೇಕ್ ಶರ್ಮಾ	ಸಿ ಫಿಲಿಪ್ ಸಾಲ್ಟ್ ಬಿ ಎನ್‌ಗಿಡಿ	34	17
ಟ್ರಾವಿಸ್ ಹೆಡ್	ಸಿ ರೊಮಾರಿಯೋ ಶೆಫರ್ಡ್ ಬಿ ಭುವನೇಶ್ವರ್ ಕುಮಾರ್	17	10
ಇಶಾನ್ ಕಿಶನ್	ನಾಟ್ ಔಟ್	94	48
ಹೆನ್ರಿಚ್ ಕ್ಲಾಸೆನ್	ಸಿ ರೊಮಾರಿಯೋ ಶೆಫರ್ಡ್ ಬಿ ಸುಯೇಶ್ ಶರ್ಮಾ	24	13
ಅನಿಕೇತ್ ವರ್ಮಾ	ಸಿ ಭುವನೇಶ್ವರ್ ಕುಮಾರ್ ಬಿ ಕೃನಾಲ್ ಪಾಂಡ್ಯ	26	9
ನಿತೀಶ್ ರೆಡ್ಡಿ	ಸಿ ಕೃನಾಲ್ ಪಾಂಡ್ಯ ಬಿ ರೊಮಾರಿಯೋ ಶೆಫರ್ಡ್	4	7
ಅಭಿನವ್ ಮನೋಹರ್	ಸಿ ಫಿಲಿಪ್ ಸಾಲ್ಟ್ ಬಿ ರೊಮಾರಿಯೋ ಶೆಫರ್ಡ್	12	11
ಪ್ಯಾಟ್ ಕಮಿನ್ಸ್	ನಾಟ್ ಔಟ್	13	6

ಆರ್‌ಸಿಬಿ	ಓವರ್	ರನ್	ವಿಕೆಟ್
ಯಶ್ ದಯಾಳ್	3	36	0
ಭುವನೇಶ್ವರ್	4	43	1
ಲುಂಗಿ ಎನ್ಗಿಡಿ	4	51	1
ಸುಯಶ್ ಶರ್ಮಾ	3	45	1
ಕೃನಾಲ್ ಪಾಂಡ್ಯ	4	38	1
ರೊಮಾರಿಯೋ	2	14	2

ಸನ್‌ರೈಸರ್ಸ್ ಹೈದರಾಬಾದ್	ಓವರ್	ರನ್	ವಿಕೆಟ್
ಪ್ಯಾಟ್ ಕಮ್ಮಿನ್ಸ್	4	28	3
ಉನದ್ಕತ್	4	4	1
ಹರ್ಷಲ್ ಪಟೇಲ್	4.5	58	2
ಇಶಾನ್ ಮಾಲಿಂಗ	4	37	2
ನಿತೀಶ್ ರೆಡ್ಡಿ	2	13	1

189/10 (19.5 ಓವರ್)

ರಾಯಲ್ ಚಾಲೆಂಜರ್ಸ್ ಬೆಂಗಳೂರು		ರನ್	ಎಸೆತ
ಫಿಲಿಪ್ ಸಾಲ್ಟ್	ಸಿ ಹರ್ಷಲ್ ಪಟೇಲ್ ಬಿ ಪ್ಯಾಟ್ ಕಮ್ಮಿನ್ಸ್	62	32
ವಿರಾಟ್ ಕೊಹ್ಲಿ	ಸಿ ಅಭಿಷೇಕ್ ಶರ್ಮಾ ಬಿ ಹರ್ಷಲ್ ಪಟೇಲ್	43	25
ಮಯಾಂಕ್	ಸಿ ಇಶಾನ್ ಕಿಶನ್ ಬಿ ನಿತೀಶ್‌ಕುಮಾರ್ ರೆಡ್ಡಿ	11	10
ರಜತ್	ರನ್ ಔಟ್ ಇಶಾನ್ ಮಾಲಿಂಗ	18	16
ಜಿತೇಶ್	ಸಿ ಅಭಿನವ್ ಬಿ ಉನದ್ಕತ್	25	15
ಶೆಫರ್ಡ್	ಸಿ ಮತ್ತು ಬಿ ಇಶಾನ್ ಮಾಲಿಂಗ	1	1
ಕೃನಾಲ್	ಹಿಟ್ ವಿಕೆಟ್ ಬಿ ಪ್ಯಾಟ್ ಕಮ್ಮಿನ್ಸ್	8	6
ಟಿಮ್ ಡೇವಿಡ್	ಸಿ ಹೆನ್ರಿಚ್ ಕ್ಲಾಸೆನ್ ಬಿ ಇಶಾನ್ ಮಾಲಿಂಗ	1	5
ಭುವನೇಶ್ವರ್	ಬಿ ಬೋಲ್ಡ್ ಪ್ಯಾಟ್ ಕಮ್ಮಿನ್ಸ್	3	2
ಯಶ್ ದಯಾಳ್	ಔಟಾಗದೆ ಸಿ ಅನಿಕೇತ್ ವರ್ಮಾ ಬಿ ಹರ್ಷಲ್ ಪಟೇಲ್	3	6
ಲುಂಗಿ ಎನ್‌ಗಿಡಿ	ಔಟಾಗದೆ	0	2

ಇಶಾನ್ ಅಬ್ಬರದಾಟ, ಮೂರನೇ ಸ್ಥಾನಕ್ಕೆ ಕುಸಿದ ಬೆಂಗಳೂರು

ಲಖನೌದಲ್ಲಿ ಆರ್‌ಸಿಬಿಗೆ ಸನ್‌ಸ್ಟ್ರೋಕ್

ಲಖನೌ: ಐಪಿಎಲ್ ಟೂರ್ನಿಯ ಅಗ್ರಸ್ಥಾನದತ್ತ ಕಣ್ಣು ನೆಟ್ಟಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಇಲ್ಲಿನ ಏಕನಾ ಕ್ರೀಡಾಂಗಣದಲ್ಲಿ ನಡೆದ ನಿರ್ಣಾಯಕ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎದುರು 42 ರನ್ ಅಂತರದಲ್ಲಿ ಸೋತು ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಕುಸಿದಿದೆ.

ಇಶಾನ್ ಕಿಶನ್ (94★)ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಎಸ್‌ಆರ್‌ಎಚ್, 2025ರ ಐಪಿಎಲ್ ಟೂರ್ನಿಯ 65ನೇ ಪಂದ್ಯದಲ್ಲಿ 231 ರನ್‌ಗಳನ್ನು ಪೇರಿಸಿತು. ಬಳಿಕ ಶಿಸ್ತುಬದ್ಧ ಬೌಲಿಂಗ್ ದಾಳಿಯ ಸಹಾಯದಿಂದ ಆರ್‌ಸಿಬಿಯನ್ನು ಕೇವಲ 189 ರನ್‌ಗಳಿಗೆ ಆಲೌಟ್ ಮಾಡುವ ಮೂಲಕ ಭರ್ಜರಿ ಗೆಲುವು ಸಾಧಿಸಿತು. ಸ್ಫೋಟಕ ಬ್ಯಾಟ್ ಮಾಡಿ ಎಸ್‌ಆರ್‌ಎಚ್ ಗೆಲುವಿಗೆ ನೆರವು ನೀಡಿದ್ದ ಇಶಾನ್ ಕಿಶನ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಪ್ಯಾಟ್ ಕಮಿನ್ಸ್ ನಾಯಕತ್ವದ ಎಸ್‌ಆರ್‌ಎಚ್‌ಗೆ ಐದನೇ ಗೆಲುವು ಇದಾಗಿದೆ. ಪ್ಲೇಆಫ್ಸ್‌ಗೆ ಅರ್ಹತೆ ಪಡೆದಿರುವ ಆರ್‌ಸಿಬಿ ತಂಡ ಈ ಸೋಲಿನಿಂದ ಅಗ್ರಸ್ಥಾನಕ್ಕೇರಲು ಮುಂದಿನ ಪಂದ್ಯ ಗೆಲ್ಲುವ ಜತೆಗೆ ಉಳಿದ ಫಲಿತಾಂಶವನ್ನು ಕಾದು ನೋಡಬೇಕಾಗಿದೆ.

ಹೈದರಾಬಾದ್ ನೀಡಿದ್ದ 232 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಆರ್‌ಸಿಬಿ , ಫಿಲ್ ಸಾಲ್ಟ್ ಹಾಗೂ ವಿರಾಟ್ ಕೊಹ್ಲಿಯವರ ಸ್ಫೋಟಕ ಬ್ಯಾಟಿಂಗ್ ಹೊರತಾಗಿಯೂ ಇನ್ನುಳಿದ ಬ್ಯಾಟ್ಸ್‌ಮನ್‌ಗಳ ವೈಫಲ್ಯದಿಂದ ಸೋಲು ಅನುಭವಿಸಿತು. ಪ್ಯಾಟ್ ಕಮಿನ್ಸ್ ಹಾಗೂ ಇಶಾನ್ ಮಾಲಿಂಗ್ ಪರಿಣಾಮಕಾರಿ ಬೌಲಿಂಗ್‌ಗೆ ನಲುಗಿದ ಆರ್‌ಸಿಬಿ 19.5 ಓವರ್‌ಗಳಿಗೆ 189 ರನ್‌ಗಳಿಗೆ ಆಲ್‌ಔಟ್ ಆಯಿತು.

ಫಿಲ್ ಸಾಲ್ಟ್ ಅರ್ಧಶತಕ ವ್ಯರ್ಥ

ಆರ್‌ಸಿಬಿ ಪರ ಇನಿಂಗ್ಸ್ ಆರಂಭಿಸಿದ ವಿರಾಟ್ ಕೊಹ್ಲಿ ಹಾಗೂ ಫಿಲ್ ಸಾಲ್ಟ್ ಮೊದಲನೇ ವಿಕೆಟ್‌ಗೆ 80 ರನ್ ಜೊತೆಯಾಟವಾಡಿ ಭರ್ಜರಿ ಆರಂಭವನ್ನು ತಂದುಕೊಟ್ಟರು. ವಿರಾಟ್ ಕೊಹ್ಲಿ 24 ಎಸೆತಗಳಲ್ಲಿ 43 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮಯಾಂಕ್ ಅಗರ್ವಾಲ್ ನಿರಾಶೆ ಮೂಡಿಸಿದರು. ಒಂದು ತುದಿಯಲ್ಲಿ ಗಟ್ಟಿಯಾಗಿ ನಿಂತು ಬ್ಯಾಟ್ ಮಾಡಿದ್ದ ಫಿಲ್ ಸಾಲ್ಟ್, 32 ಎಸೆತಗಳಲ್ಲಿ 62 ರನ್ ಗಳಿಸಿ ಆರ್‌ಸಿಬಿಗೆ ಭದ್ರ ಅಡಿಪಾಯ ಹಾಕಿ ವಿಕೆಟ್ ಒಪ್ಪಿಸಿದರು. ರಜತ್ ಪಾಟಿದಾರ್ (18) ಹಾಗೂ ಜಿತೇಶ್ ಶರ್ಮಾ (24) ಅವರ ಅಲ್ಪ ಜೊತೆಯಾಟದ ಮೂಲಕ ತಂಡವನ್ನು ಗೆಲ್ಲಿಸುವ ಹಾದಿಯಲ್ಲಿದ್ದರು. ಆದರೆ, ರಜತ್ ಪಾಟಿದಾರ್ ರನೌಟ್ ಗೆಲುವಿನ ಹಳಿ ತಪ್ಪುವಂತೆ ಮಾಡಿತು.

231 ರನ್ ಕಲೆ ಹಾಕಿದ್ದ ಹೈದರಾಬಾದ್

ಇದಕ್ಕೂ ಮುನ್ನ ಟಾಸ್ ಗೆದ್ದು ಎದುರಾಳಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಮೊದಲ ಬ್ಯಾಟಿಂಗ್ ಆಹ್ವಾನ ನೀಡಿದ್ದ ಆರ್‌ಸಿಬಿ ತಂಡದ ಹಂಗಾಮಿ ನಾಯಕ ಜಿತೇಶ್ ಶರ್ಮಾ ಅವರ ಯೋಜನೆ ಸಂಪೂರ್ಣ ಉಲ್ಟಾ ಆಯಿತು. ಎಸ್‌ಆರ್‌ಎಚ್ ಪರ ಇನಿಂಗ್ಸ್ ಆರಂಭಿಸಿದ್ದ ಟಿಮ್ ಡೇವಿಡ್ ಹಾಗೂ ಅಭಿಷೇಕ್ ಶರ್ಮಾ ಜೋಡಿ ಭರ್ಜರಿ ಬ್ಯಾಟಿಂಗ್ ಪ್ರದರ್ಶನ ತೋರಿತು. ಅಭಿಷೇಕ್ ಶರ್ಮಾ ಕೇವಲ 17 ಎಸೆತಗಳಲ್ಲಿ 34 ರನ್ ಗಳಿಸಿ ಲುಂಗಿ ಎನ್‌ಗಿಡಿಗೆ ವಿಕೆಟ್ ಒಪ್ಪಿಸಿದರು. ಇದರ ಬೆನ್ನಲ್ಲೆ 10 ಎಸೆತಗಳಲ್ಲಿ 17 ರನ್ ಗಳಿಸಿದ್ದ ಟಿಮ್ ಡೇವಿಡ್ ಕೂಡ ಔಟ್ ಆದರು. ಆ ಮೂಲಕ ಎಸ್‌ಆರ್‌ಎಚ್ 4.2 ಎಸೆತಗಳಲ್ಲಿ 54 ರನ್ ಗಳಿಸಿತು.

ಇಶಾನ್ ಕಿಶನ್ ಅಬ್ಬರದ ಬ್ಯಾಟಿಂಗ್

ಪವರ್‌ಪ್ಲೇನಲ್ಲಿ ಓಪನರ್ಸ್ ಅನ್ನು ಔಟ್ ಮಾಡಿದ ಬಳಿಕ ಆರ್‌ಸಿಬಿ ಬೌಲರ್‌ಗಳು, ಹೆನ್ರಿಚ್ ಕ್ಲಾಸೆನ್ (24), ಅನಿಕೇತ್ ವರ್ಮಾ (26) ಹಾಗೂ ನಿತೀಶ್ ರೆಡ್ಡಿ (4) ಅವರನ್ನು ಬೇಗ ಔಟ್ ಮಾಡಿದರು . ಆದರೆ, ಒಂದು ತುದಿಯಲ್ಲಿ ಗಟ್ಟಿಯಾಗಿ ನಿಂತು ಬ್ಯಾಟ್ ಮಾಡಿದ್ದ ಇಶಾನ್ ಕಿಶನ್ ಅವರನ್ನು ಔಟ್ ಮಾಡುವಲ್ಲಿ ಆರ್‌ಸಿಬಿ ಬೌಲರ್‌ಗಳು ವಿಫಲರಾದರು. ಕೊನೆಯವರೆಗೂ ಸ್ಫೋಟಕ ಬ್ಯಾಟ್ ಮಾಡಿದ ಇಶಾನ್ ಕಿಶನ್, 48 ಎಸೆತಗಳಲ್ಲಿ 5 ಸಿಕ್ಸರ್ ಹಾಗೂ 7 ಬೌಂಡರಿಗಳ ಮೂಲಕ ಅಜೇಯ 94 ರನ್‌ಗಳನ್ನು ಸಿಡಿಸಿದರು.

ಜಿತೇಶ್ ಶರ್ಮಾಗೆ ಚುಕ್ಕಾಣಿ

ಗಾಯಾಳು ನಾಯಕ ರಜತ್ ಪಾಟೀದಾರ್ ಅವರ ಬದಲಿಗೆ ತಂಡದ ವಿಕೆಟ್ ಕೀಪರ್ ಬ್ಯಾಟರ್ ಜಿತೇಶ್ ಶರ್ಮಾ ಅವರು ತಂಡವನ್ನು ಮುನ್ನಡೆಸಿದರು. ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿದ ಬಳಿಕ ಮಾತನಾಡಿದ ಅವರು ಬೆರಳಿನ ಗಾಯದಿಂದಾಗಿ ರಜತ್ ಪಾಟೀದಾರ್ ಅವರು ಸಂಪೂರ್ಣವಾಗಿ ಚೇತರಿಸಿಕೊಳ್ಳದ ಕಾರಣ ಫೀಲ್ಡಿಂಗ್ ಮಾಡುತ್ತಿಲ್ಲ. ಹೀಗಾಗಿ ತಾವು ತಂಡವನ್ನು ಮುನ್ನಡೆಸುತ್ತಿರುವುದಾಗಿ ತಿಳಿಸಿದರು. ಇದೇ ವೇಳೆ ಕರ್ನಾಟಕದ ದೇವದತ್ ಪಡಿಕ್ಕಲ್ ಬದಲಿಗೆ ಸಹ ಆಟಗಾರ ಮಾಯಾಂಕ್ ಅಗರ್ವಾಲ್ ಆಡುವ ಅವಕಾಶ ಪಡೆದಿದ್ದಾರೆ.

ಕೊನೆಯ ಪಂದ್ಯ ಗೆದ್ದು ನಿರ್ಗಮಿಸಲು ಡೆಲ್ಲಿ ಸಂಕಲ್ಪ

ಅಗ್ರಸ್ಥಾನದತ್ತ ಪಂಜಾಬ್ ಕಣ್ಣು



ಜೈಪುರ: ಆರಂಭಿಕ 4 ಪಂದ್ಯಗಳಲ್ಲಿ ಗೆಲುವು ಸಾಧಿಸಿ, ಆ ಬಳಿಕ ಸತತ ಸೋಲಿನ ಸುಳಿಗೆ ಸಿಲುಕಿದ ಡೆಲ್ಲಿ ಕ್ಯಾಪಿಟಲ್ಸ್ ಪ್ಲೇಆಫ್‌ನಿಂದ ಹೊರಬಿದ್ದಿದೆ. ಇದೀಗ ತನ್ನ ಪಾಲಿನ ಕೊನೆಯ ಪಂದ್ಯವನ್ನಾಡಲು ಸಜ್ಜಾಗಿದೆ. ಮೇ 24ರಂದು ನಡೆಯುವ ಪಂದ್ಯದಲ್ಲಿ ಬಲಿಷ್ಠ ಪಂಜಾಬ್ ಕಿಂಗ್ಸ್ ವಿರುದ್ಧ ಡೆಲ್ಲಿ ತಂಡ ಸೆಣಸಲಿದೆ. ಡೆಲ್ಲಿಗೆ ಇದು ಔಪಚಾರಿಕ ಪಂದ್ಯವಾದರೂ ಪಂಜಾಬ್‌ಗೆ ಅಗ್ರ ಎರಡು ಸ್ಥಾನಕ್ಕೇರಲು ಗೆಲುವು ಅತ್ಯಗತ್ಯ.

ಇತ್ತಂಡಗಳ ಈ ಪಂದ್ಯ ಮೇ 8 ರಂದು ಹಿಮಾಚಲ ಪ್ರದೇಶದ ಧರ್ಮಶಾಲಾ ಕ್ರೀಡಾಂಗಣದಲ್ಲಿ ನಡೆಯಬೇಕಿತ್ತು. ಆದರೆ ಭಾರತ ಹಾಗೂ ಪಾಕಿಸ್ತಾನ ನಡುವೆ ವಾಯು ದಾಳಿ ಭೀತಿ ಹಿನ್ನೆಲೆಯಲ್ಲಿ ಪಂದ್ಯವನ್ನು ಸ್ಥಗಿತಗೊಳಿಸಲಾಗಿತ್ತು. ಮೊದಲು ಬ್ಯಾಟ್ ಮಾಡಿದ್ದ ಪಂಜಾಬ್ ತಂಡ 10.1 ಓವರ್‌ಗಳಲ್ಲಿ 1 ವಿಕೆಟ್‌ಗೆ 122 ರನ್ ಗಳಿಸಿ ಉತ್ತಮ ಆರಂಭ ಪಡೆದಿತ್ತು.

ಡೆಲ್ಲಿ ತಂಡಕ್ಕೆ ಕಳೆದ ಬಾರಿ ಮುಂಬೈ ಇಂಡಿಯನ್ಸ್ ವಿರುದ್ಧ ಗೆಲುವು ಸಾಧಿಸುತ್ತಿದ್ದರೆ ಪ್ಲೇ ಆಫ್ ಪ್ರವೇಶಿಸುವ ಅವಕಾಶವಿತ್ತು. ಆದರೆ ತಂಡ ಸೋತು ಈ ಅವಕಾಶದಿಂದ ವಂಚಿತವಾಯಿತು. ಟೂರ್ನಿ ಮುಕ್ತಾಯದ ಹಂತಕ್ಕೆ ಬಂದರೂ ಡೆಲ್ಲಿ ತಂಡ ಸೂಕ್ತ ಆರಂಭಿಕ ಜೋಡಿ ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿಲ್ಲ. ಇದು ತಂಡಕ್ಕೆ ಹಿನ್ನಡೆಯಾಯಿತು. ಡೆಲ್ಲಿ ಪರ ಕನ್ನಡಿಗ ರಾಹುಲ್ (504 ರನ್) ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ನಿರೀಕ್ಷಿತ ಪ್ರದರ್ಶನ ತೋರುವಲ್ಲಿ ವಿಫಲರಾಗಿದ್ದಾರೆ. ಟ್ರಿಸ್ಟಾನ್ ಸ್ಟಬ್ಸ್, ಅಶುತೋಷ್ ಶರ್ಮ, ಅಭಿಷೇಕ್ ಪೋರೆಲ್ ಇವರ ಬ್ಯಾಟಿಂಗ್ ಅಬ್ಬರ ಒಂದೆರಡು ಪಂದ್ಯಕ್ಕಷ್ಟೇ ಸೀಮಿತವಾಯಿತು.

ಡೆಲ್ಲಿ ತಂಡದ ಬೌಲಿಂಗ್ ಕೂಡ ಅತ್ಯಂತ ಕಳಪೆ ಮಟ್ಟದಿಂದ ಕೂಡಿದೆ. ಮುಖೇಶ್ ಕುಮಾರ್, ಟಿ. ನಟರಾಜನ್, ಚಮೀರ ಪ್ರತಿ ಪಂದ್ಯದಲ್ಲೂ ದುಬಾರಿಯಾಗುತ್ತಿದ್ದಾರೆ. ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಪ್ರಗತಿ ಸಾಧಿಸದೇ ಹೋದಲ್ಲಿ ಪಂಜಾಬ್ ವಿರುದ್ಧವೂ ಸೋಲಿನ ಸರಣಿ ಮುಂದುವರಿಯುವ ನಿರೀಕ್ಷೆ ಇದೆ.

ಪಂಜಾಬ್ ತಂಡ ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಸಮರ್ಥವಾಗಿದೆ. ಪ್ರಿಯಾಂಶ್ ಆರ್ಯ ಮತ್ತು ಪ್ರಭ್‌ಶಿಮ್ರಾನ್ ಸಿಂಗ್ ಜೋಡಿ ಪ್ರತಿ ಪಂದ್ಯದಲ್ಲಿಯೂ ಉತ್ತಮ ಆರಂಭ ಒದಗಿಸುವ ಮೂಲಕ ತಂಡಕ್ಕೆ ನೆರವಾಗುತ್ತಿದ್ದಾರೆ. ನಾಯಕ ಶ್ರೇಯಸ್ ಅಯ್ಯರ್, ನೆಹಾಲ್ ವದೇರಾ ಮತ್ತು ಶಶಾಂಕ್ ಸಿಂಗ್ ಮಧ್ಯಮ ಕ್ರಮಾಂಕದಲ್ಲಿ ಬಿರುಸಿನ ಬ್ಯಾಟಿಂಗ್ ಬ್ಯಾಟಿಂಗ್‌ಗೆ ಹೆಸರುವಾಸಿಯಾಗಿದ್ದಾರೆ. ಬೌಲಿಂಗ್‌ನಲ್ಲಿ ಯಜುವೇಂದ್ರ ಚಹಲ್, ಅರ್ಶ್‌ದೀಪ್ ಸಿಂಗ್ ಎದುರಾಳಿಗಳನ್ನು ಕಟ್ಟು ಹಾಕುವಲ್ಲಿ ಸಮರ್ಥರಿದ್ದಾರೆ.

ವಿಟಾಕೀಸ್

ಸೀಸ್ ಕಡ್ಡಿಯ ಟ್ರೇಲರ್

ರತನ್ ಗಂಗಾಧರ್ ನಿರ್ದೇಶನದಲ್ಲಿ ಮೂಡಿಬಂದಿರುವ ಸೀಸ್ ಕಡ್ಡಿ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ಬೀರ್ ಬಲ್ ಖ್ಯಾತಿಯ ಶ್ರೀನಿ, ಮಹಿರಾ ಖ್ಯಾತಿಯ ನಿರ್ದೇಶಕ ಮಹೇಶ್ ಗೌಡ, ಡೊಳ್ಳು ಖ್ಯಾತಿಯ ನಿರ್ದೇಶಕ ಸಾಗರ್ ಪುರಾಣಿಕ್, ಆಯುಷ್ ಮಲ್ಲಿ, ಚೆಲುವರಾಜ್ ಮುಂತಾದವರು ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಬಾಲ್ಯದ ದಿನಗಳನ್ನು ನೆನಪಿಸುವ ಸ್ಫೂರ್ತಿದಾಯಕ ಕಥೆ ಸಿನಿಮಾದಲ್ಲಿದೆ ಎಂಬುದು ಟ್ರೇಲರ್‌ನಲ್ಲಿ ಸ್ಪಷ್ಟವಾಗುತ್ತದೆ. ಐದು ಕಥೆ, ಐದು ಕನ್ನಡದ ಉಪಭಾಷೆ ಮತ್ತು ಐದು ಪ್ರದೇಶಗಳ ಸಮಾಗಮದೊಂದಿಗೆ ಇಲ್ಲಿನ ಕಥೆ ಗರಿಬಿಚ್ಚಿಕೊಂಡಿದೆ.

ಸಿತಿನ್ ಅಪ್ಪಯ್ಯ, ಬಿ ಎಸ್ ರಾಮಮೂರ್ತಿ, ಮಾನ್ವಿ ಬಳಗಾರ್, ನೊಣವಿನಕೆರೆ ರಾಮಕೃಷ್ಣಯ್ಯ, ಪ್ರಥಮ್ ರಾಜೇ ಅರಸ್, ಸಂತೋಷ್ ಕರ್ಕಿ, ಅನುಷ್ಕಾ ಟಕ್ಕಲಕಿ, ಸಂಜಯ್ ಗೌಡ, ಶ್ರೇಷ್ಠ ಜಪ್ತಿಮಠ್, ಮಹೇಂದ್ರ ಗೌಡ, ದೀಪಿಕಾ ಅಡ್ತಲೆ, ರಾಘವೇಂದ್ರ ಭಟ್, ನಾಗರಾಜ್ ರಾವ್, ರೇಖಾ ಕೂಡ್ಲಿಗಿ, ಉದಾತ್, ಜಯಂತ್ ವೆಂಕಟ್, ಅಮೋಘವರ್ಷ, ಅನೂಪ್ ಬಿ ಆರ್, ಶರ್ಮಿಳಾ ಕಾರ್ತಿಕ್, ಅಭಿಲಾಶ್ ಗೌಡ, ಗಂಗಾಧರ್, ಅಭಿಷೇಕ್, ಅಕುಲ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಬೆಂಗಳೂರು ಕನ್ನಡ, ಹವ್ಯಕ ಕನ್ನಡ, ತುಮಕೂರು ಭಾಗದ ಹಳ್ಳಿಗಾಡಿನ ಶೈಲಿಯ ಕನ್ನಡ ಹಾಗೂ ಮೈಸೂರು ಸೀಮೆಯ ಕನ್ನಡದ ಸಂಭಾಷಣೆ ಚಿತ್ರದಲ್ಲಿದೆ. ಗ್ರಹಣ ಎಲ್.ಎಲ್.ಪಿ ಬ್ಯಾನರಿನಲ್ಲಿ ಸಿನಿಮಾ ನಿರ್ಮಾಣವಾಗಿದ್ದು, ರತನ್ ಗಂಗಾಧರ್, ಸಂಪತ್ ಶಿವಶಂಕರ್, ಕೃತಿ ನಾಣಯ್ಯ ಬಂಡವಾಳ ಹೂಡಿದ್ದಾರೆ. ಸುನಿಲ್ ನರಸಿಂಹಮೂರ್ತಿ ಛಾಯಾಗ್ರಹಣ, ಕೆ.ಸಿ ಬಾಲಸಾರಂಗನ್ ಸಂಗೀತ ನಿರ್ದೇಶನ, ಅನಿರುದ್ಧ್ ಹರ್ಷವರ್ಧನ್ ಸಂಕಲನ ಈ ಚಿತ್ರಕ್ಕಿದೆ.

ಇದೊಂದು ಸ್ಫೂರ್ತಿದಾಯಕ ಕಥೆಯನ್ನು ಒಳಗೊಂಡಿದೆ. ಪುಸ್ತಕವೊಂದನ್ನು ಓದಿದಾಗ ಅದರಲ್ಲಿ ಪೆನ್ಸಿಲ್‌ನ ನಾನಾ ಸೂಕ್ಷ್ಮಗಳ ವಿವರವಿತ್ತು. ಅದನ್ನು ಐದು ಪಾತ್ರಗಳನ್ನಾಗಿಸಿ, ಅದಕ್ಕೆ ಹೊಂದಿಕೊಂಡಂತೆ ಐದು ಕಥೆಗಳನ್ನು ಸೃಷ್ಟಿಸಿ, ಆ ಕಥೆಗಳೆಲ್ಲ ಒಂದು ಬಿಂದುವಿನಲ್ಲಿ ಸಂಧಿಸುವ ಅಚ್ಚರಿಯ ಸಾರವೇ ಸೀಸ್ ಕಡ್ಡಿ. ಈ ಚಿತ್ರದಲ್ಲಿ ಬೇರೆ ಬೇರೆ ಬಗೆಯ ಕನ್ನಡ ಭಾಷಾ ಶೈಲಿಯೂ ಮಿಳಿತವಾಗಿದೆ.

-ರತನ್ ಗಂಗಾಧರ್ ನಿರ್ದೇಶಕ

ಶಿವನ ಸ್ತುತಿಸಿ ಮನಗೆದ್ದ ಶಿವಣ್ಣ

ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಹಾಗೂ ಉಪೇಂದ್ರ, 45 ಚಿತ್ರದಲ್ಲಿ ಮತ್ತೆ ಒಟ್ಟಿಗೆ ನಟಿಸಿದ್ದಾರೆ. ಹಾಗಾಗಿಯೇ 45 ಸಿನಿಮಾ ಆರಂಭದಿಂದಲೂ ಕುತೂಹಲ ಮೂಡಿಸಿದೆ. 45 ಶೀರ್ಷಿಕೆಯೇ ವಿಶೇಷವಾಗಿದೆ ಅಂತೆಯೇ ಸಿನಿಮಾದ ಬಗ್ಗೆಯೂ ಕ್ಯೂರಿಯಾಸಿಟಿ ಮೂಡಿಸಿದೆ. ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಚೊಚ್ಚಲ ನಿರ್ದೇಶನದ ಈ ಚಿತ್ರದ ಶೂಟಿಂಗ್ ಮುಗಿಸಿದ್ದು ತೆರೆಗೆ ಬರಲು ಸಿದ್ಧವಾಗಿದೆ. ಈ ಹಿಂದೆ ಸಿನಿಮಾದ ಟೀಸರ್ ಬಿಡುಗಡೆ ಆಗಿತ್ತು. ಈಗ ಚಿತ್ರದ ಪವರ್ ಫುಲ್ ಸಾಂಗ್ ರಿಲೀಸ್ ಆಗಿದೆ. ಆನಂದ ಪೀಠಾಧೀಶ್ವರ ಗಿರಿ.ಜಿ.ಮಹಾರಾಜ್ ಶಿವನ ಹಾಡನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಶಿವಂ ಶಿವಂ ಸನಾತನಂ.. ಎಂಬ ಹಾಡು ಇದಾಗಿದ್ದು, ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯದ ಈ ಹಾಡಿಗೆ ವಿಜಯ್ ಪ್ರಕಾಶ್ ದನಿಯಾಗಿದ್ದಾರೆ. ಅರ್ಜುನ್ ಜನ್ಯ ಸಂಗೀತದಲ್ಲಿ ಈ ಹಾಡು ಮಧುರವಾಗಿ ಮೂಡಿಬಂದಿದೆ.

ಶಿವನ ಕುರಿತಾದ ಈ ಹಾಡು ನನ್ನ ಮನಸ್ಸಿಗೆ ಬಹಳ ಹತ್ತಿರವಾಗಿದೆ. ಈ ಹಾಡು ಇಡೀ ದೇಶದೆಲ್ಲೆಡೆ ಸದ್ದು ಮಾಡಲಿದೆ. ನಾಗೇಂದ್ರ ಪ್ರಸಾದ್ ಅವರ ಸಾಹಿತ್ಯ, ವಿಜಯ್ ಪ್ರಕಾಶ್ ಅವರ ಗಾಯನ ಮಧುರವಾಗಿದೆ. ಅರ್ಜುನ್ ಜನ್ಯ ಅದ್ಭುತವಾದ ಸಿನಿಮಾ ನಿರ್ದೇಶಿಸಿದ್ದಾರೆ ಎಂದು ನಿರ್ಮಾಪಕ ರಮೇಶ್ ರೆಡ್ಡಿ ಸಂತಸದಿಂದ ನುಡಿದರು.

ಈ ಚಿತ್ರದ ಮೂಲಕ ನಾನು ನಿರ್ದೇಶಕನಾಗಿ ಗುರುತಿಸಿಕೊಳ್ಳುತ್ತಿದ್ದೇನೆ. ನಾನು ನಿರ್ದೇಶನ ಮಾಡಲು ಶಿವರಾಜ್ ಕುಮಾರ್ ಅವರೇ ಪ್ರೇರಣೆ. ಉಪೇಂದ್ರ ಅವರ ಸಹಕಾರದಿಂದ ಸಾಕಷ್ಟು ವಿಚಾರಗಳನ್ನು ಕಲಿತಿದ್ದೇನೆ. ಸದ್ಯದಲ್ಲೇ ನಮ್ಮ ಚಿತ್ರತಂಡದಿಂದ ಅಭಿಮಾನಿಗಳಿಗೆ ಮತ್ತೊಂದು ಸರ್ಪ್ರೈಸ್ ಕೂಡ ಇದೆ.

-ಅರ್ಜುನ್ ಜನ್ಯ ನಿರ್ದೇಶಕ

45 ಚಿತ್ರ ಅದ್ಭುತವಾಗಿ ಮೂಡಿಬಂದಿದೆ. ಅರ್ಜುನ್ ಜನ್ಯ ಒಳ್ಳೆಯ ಸಂಗೀತ ನಿರ್ದೇಶಕ, ಅಂತೆಯೇ ಎಲ್ಲರೂ ಮೆಚ್ಚುವಂತೆ ಸಿನಿಮಾ ನಿರ್ದೇಶನ ಮಾಡಿದ್ದಾರೆ. ಈಗ ಬಿಡುಗಡೆಯಾಗಿರುವ ಶಿವನ ಹಾಡಂತೂ ಬಹಳ ಸೊಗಸಾಗಿದೆ. ಕಳೆದ ವರ್ಷ ನಾನು ಈ ಚಿತ್ರದ ಡಬ್ಬಿಂಗ್ ಮುಗಿಸಿದ್ದೆ. ಈಗ ತಮಿಳಿನಲ್ಲಿ ಡಬ್ ಮಾಡುತ್ತಿದ್ದೇನೆ. ಎಲ್ಲಾ ಭಾಷೆಗಳಲ್ಲೂ ಡಬ್ ಮಾಡಬೇಕು ಎಂಬ ಆಸೆಯಿದೆ.

- ಶಿವರಾಜ್ ಕುಮಾರ್

ನೀತಿ ಹೇಳಿದ ಖುಷಿ

ದಿಯಾ ಚಿತ್ರದ ಮೂಲಕ ಪ್ರಸಿದ್ಧಿ ಪಡೆದ ಖುಷಿ ರವಿ ಅಯ್ಯನ ಮನೆ ವೆಬ್ ಸೀರೀಸ್‌ನಲ್ಲಿ ನಟಿಸಿ, ಅದ್ಭುತ ಅಭಿನಯದ ಮೂಲಕ ಪ್ರೇಕ್ಷಕರ ಮನಗೆದ್ದಿದ್ದಾರೆ. ಈ ನಡುವೆಯೇ ಖುಷಿ ತಮ್ಮ ಅಭಿಮಾನಿಗಳಿಗೆ ಮತ್ತೊಂದು ಸರ್‌ಪ್ರೈಸ್ ನೀಡಿದ್ದಾರೆ. ಅದು ಖುಷಿ ಅಭಿನಯದ ಮತ್ತೊಂದು ಚಿತ್ರ ತೆರೆಗೆ ಸಿದ್ಧವಾಗಿದೆ ಎಂಬುದು. ಹೌದು, ಖುಷಿ ನಟಿಸಿರುವ ನೀತಿ ಚಿತ್ರ ತೆರೆಗೆ ಬರಲು ಸಜ್ಜಾಗಿದೆ. ಹಲವು ನಿರ್ದೇಶಕರ ಬಳಿ ಸಹಾಯಕರಾಗಿ ಕಾರ್ಯನಿರ್ವಹಿಸಿರುವ ರಾಜಗೋಪಾಲ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಗೌತಮ್ ಮಣಿವಣ್ಣನ್ ಕಟ್ ಪ್ರೊಡಕ್ಷನ್ಸ್‌ನಲ್ಲಿ ಚಿತ್ರ ನಿರ್ಮಾಣ ಮಾಡಿದ್ದಾರೆ.

ಇದೊಂದು ಸಸ್ಪೆನ್ಸ್, ಥ್ರಿಲ್ಲರ್ ಸ್ಟೋರಿಯ ಸಿನಿಮಾವಾಗಿದ್ದು, ಎಮೋಷನ್ಸ್ ಕೂಡ ಕಥೆಯಲ್ಲಿ ಬೆರೆತಿದೆ. ಅಲ್ಲದೆ ಆರಂಭದಿಂದಲೂ ಕುತೂಹಲ ಮೂಡಿಸುತ್ತಾ ಸಾಗುತ್ತದೆ. ಒಂದು ಬಂಗಲೆಯಲ್ಲಿ ನಡೆಯುವ ಕಥೆಯಾಗಿದ್ದು, ಅದು ಕೆಲವೇ ಪಾತ್ರಗಳ ಸುತ್ತ ಸಾಗುವುದೇ ಸಿನಿಮಾದ ಮತ್ತೊಂದು ವಿಶೇಷ. ಒಬ್ಬೊಂಟಿ ಮಹಿಳೆಯ ತೊಳಲಾಟ, ಅಪರಿಚಿತ ವ್ಯಕ್ತಿಯ ಆಗಮನ. ಇವೆಲ್ಲವು ಕ್ಯೂರಿಯಾಸಿಟಿ ಮೂಡಿಸುತ್ತಾ ಸಾಗುತ್ತದೆ.

ಸಂಪತ್ ಮೈತ್ರಿಯಾ, ಪ್ರವೀಣ್ ಅಥರ್ವ ಕೂಡ ಸಿನಿಮಾದ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ರೂಸಿಕ್ ಸಂಗೀತ ಸಂಯೋಜಿಸಿದ್ದು, ಹಂಗೇರಿಯಲ್ಲಿ ಫಿಲ್ ಹಾರ್ಮೋನಿಕ್ ಆರ್ಕೆಸ್ಟ್ರಾದಲ್ಲಿ ಹಿನ್ನೆಲೆ ದನಿಯ ಕೆಲಸ ನಡೆದಿರುವುದು ಚಿತ್ರದ ಮತ್ತೊಂದು ವಿಶೇಷವಾಗಿದೆ. ಪ್ರದೀಪ್ ಪದ್ಮಕುಮಾರ್ ಛಾಯಾಗ್ರಹಣ, ಆರ್.ರಾಜ್‌ಕುಮಾರ್ ಸಂಕಲನ ಈ ಚಿತ್ರಕ್ಕಿದೆ. ಸೆನ್ಸಾರ್‌ನಿಂದ ಪ್ರಶಂಸೆ ಪಡೆದುಕೊಂಡಿರುವ, ನೀತಿ ಚಿತ್ರವು ಸದ್ಯದಲ್ಲೇ ಬಿಡುಗಡೆಯಾಗಲಿದೆ.



ಕಾಂತಾರ ಚಾಪ್ಟರ್ 1 ಅಕ್ಟೋಬರ್‌ನಲ್ಲಿ ತೆರೆಗೆ

ಕಾಂತಾರ ಚಿತ್ರ ಅದ್ಭುತ ಯಶಸ್ಸು ಗಳಿಸಿತ್ತು. ದೇಶ ವಿದೇಶದಲ್ಲಿಯೂ ಭರ್ಜರಿ ಗಳಿಕೆ ಕಂಡಿತು. ಈ ಯಶಸ್ಸಿ ಖುಷಿಯಲ್ಲಿಯೇ ಕಾಂತಾರ ಚಾಪ್ಟರ್ 1 ಸೆಟ್ಟೇರಿತು. ಚಿತ್ರದ ಚಿತ್ರೀಕರಣ ಕೂಡ ಭರದಿಂದ ಸಾಗಿತು. ಕಾಂತಾರ ಚಾಪ್ಟರ್ 1 ಪೌರಾಣಿಕ ಕಥೆಯ ಜತೆಗೆ ಕದಂಬರ ಕಾಲದ ಐತಿಹಾಸಿಕ ಕಥೆಯನ್ನೂ ಒಳಗೊಂಡಿದೆ. ಅದು ಈಗಾಗಲೇ ಬಿಡುಗಡೆಯಾಗಿರುವ ಪೋಸ್ಟರ್‌ನಲ್ಲಿ ಸ್ಪಷ್ಟವಾಗಿದೆ. ಕುಂದಾಪುರದಲ್ಲಿ ಅದ್ದೂರಿ ಸೆಟ್ ನಿರ್ಮಿಸಿ ಚಿತ್ರೀಕರಣ ನಡೆಸಲಾಗುತ್ತಿದೆ. ಈ ನಡುವೆ ಚಿತ್ರತಂಡಕ್ಕೆ ವಿಘ್ನಗಳ ಮೇಲೆ ವಿಘ್ನ ಎದುರಾಗಿತ್ತು. ಹಿಂದೆ ಸಹ ಕಲಾವಿದರು ಶೂಟಿಂಗ್ ಮುಗಿಸಿ ತೆರಳುತ್ತಿದ್ದಾಗ, ಬಸ್ ಅವಘಡ ಸಂಭವಿಸಿ ಹಲವರಿಗೆ ಗಂಭೀರ ಗಾಯಗಳಾಗಿದ್ದವು.

ಆ ಬಳಿಕ ಅರಣ್ಯ ಪ್ರದೇಶದಲ್ಲಿ ಕಾನೂನು ಉಲ್ಲಂಘಿಸಿ ಶೂಟಿಂಗ್ ನಡೆಸಲಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಅದಾದ ಬಳಿಕ ತಾಂತ್ರಿಕ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೇರಳ ಮೂಲದ ವ್ಯಕ್ತಿ ಅಸುನೀಗಿದ್ದರು, ಇದೆಲ್ಲ ಸಮಸ್ಯೆಗಳನ್ನು ನಿವಾರಿಸಿ ಶೂಟಿಂಗ್ ನಡೆಸುತ್ತಿದ್ದಾಗಲೇ ಕಾಮಿಡಿ ಕಿಲಾಡಿ ಖ್ಯಾತಿಯ ರಾಕೇಶ್ ಪೂಜಾರಿ ಸಾವನ್ನಪ್ಪಿದರು. ರಾಕೇಶ್, ಕಾಂತಾರ ಚಾಪ್ಟರ್ 1 ಚಿತ್ರದ ಶೂಟಿಂಗ್ ಮುಗಿಸಿ ಬಂದ ಬಳಿದ ಹೃದಯಾಘಾತವಾಗಿ ಸಾವನ್ನಪ್ಪಿದರು ಎಂಬ ವಿಚಾರ ಸದ್ದು ಮಾಡಿತ್ತು. ಹಾಗಾಗಿ ರಾಕೇಶ್ ಕುಟುಂಬಕ್ಕೆ ಚಿತ್ರಂಡ ಪರಿಹಾರ ನೀಡಬೇಕು ಎಂಬ ಒತ್ತಾಯವೂ ಕೇಳಿ ಬಂದಿತ್ತು. ಇದೆಲ್ಲದರಿಂದ ಚಿತ್ರತಂಡ ಇಕ್ಕಟ್ಟಿಗೆ ಸಿಲುಕಿತ್ತು. ಹಾಗಾಗಿ ಸಿನಿಮಾದ ಬಿಡುಗಡೆಯ ದಿನಾಂಕ ಮುಂದಕ್ಕೆ ಹೋಗಬಹುದು ಎಂಬ ಅನುಮಾನವೂ ಕಾಡಿತ್ತು. ಆದರೆ ಈ ಹಿಂದೆ ಘೋಷಿಸಿದಂತೆ ಅಕ್ಟೋಬರ್ 2ರಂದೇ ಕಾಂತಾರ ಚಾಪ್ಟರ್ 1 ಬಿಡುಗಡೆಯಾಗಲಿದೆ ಎಂದು ಹೊಂಬಾಳೆ ಫಿಲಂಸ್ ಸ್ಪಷ್ಟಪಡಿಸಿದೆ.

ಇತ್ತೀಚೆಗೆ ಈ ದಿನಾಂಕದ ಬಗ್ಗೆ ಕೆಲವು ಊಹಾಪೋಹಗಳು ಹರಡಿದ್ದವು. ಈಎಲ್ಲಾ ಗೊಂದಲಗಳಿಗೆ ತೆರೆ ಎಳೆದಿರುವ ಹೊಂಬಾಳೆ ಫಿಲಂಸ್ ಬಿಡುಗಡೆ ದಿನಾಂಕದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಅಧಿಕೃತವಾಗಿ ಸ್ಪಷ್ಟಪಡಿಸಿದೆ. ಯೋಜನೆಯಂತೆ ಎಲ್ಲವೂ ಸುಸೂತ್ರವಾಗಿ ಸಾಗುತ್ತಿದೆ. ಹಿಂದಿನ ಕಾಂತಾರ ಚಿತ್ರದ ಯಶಸ್ಸಿನ ನಂತರ ಕಾಂತಾರ ಚಾಪ್ಟರ್ 1 ಸಹ ಪ್ರೇಕ್ಷಕರನ್ನು ಮತ್ತಷ್ಟು ಆಳವಾದ ಕಥೆ, ಸಂಸ್ಕೃತಿ ಮತ್ತು ದೈವಿಕ ಲೋಕಕ್ಕೆ ಕರೆದೊಯ್ಯಲಿದೆ. ನಿಮ್ಮ ಕಾತುರಕ್ಕೆ ತಕ್ಕಂತೆ ಚಿತ್ರವೂ ಅಂದುಕೊಂಡ ದಿನಾಂಕದಂದೆ ತೆರೆಗೆ ಬರಲಿದೆ ಎಂದು ಹೊಂಬಾಳೆ ಫಿಲಂಸ್ ತಿಳಿಸಿದೆ.